ಡಾ|| ಎಚ್. ಎಲ್. ತಿಮ್ಮೇಗೌಡ.—ಹುಬ್ಬಳ್ಳಿ-ಧಾರವಾಡ ನಗರ ಕಾರ್ಪೋರೇಷನ್ ಪ್ರದೇಶದಲ್ಲಿ ಐವರು ಕರುಳು ರೋಗದಿಂದ ಮೃತರಾಗಿರತಕ್ಕದ್ದು ಸರ್ಕಾರದ ಗಮನಕ್ಕೆ ಬಂದಿದೆ. ಕಾರ್ಪೋರೇಷನ್ ವೈದ್ಯಾಧಿಕಾರಿಗಳ ಜೊತೆಯಲ್ಲಿ ಜಿಲ್ಲಾ ವೈದ್ಯಾಧಿಕಾರಿಗಳು ಕೂಡಿ ಕೆಲಸ ಮಾಡಬೇಕು. ನಗರದ ಸುತ್ತ ಮುತ್ತ ಇರತಕ್ಕ ಜನರಿಗೆ ಇನಾಕ್ಯುಲೇಷನ್ ಮಾಡಲಾಗುತ್ತಿದೆ. ಎಷ್ಟು ಔಷಧ ಬೇಕಾಗಿದೆ ಅದನ್ನು ಒದಗಿಸಲಾಗಿದೆ. ನಮ್ಮ ಅಧಿಕಾರಿಗಳು ಕಾರ್ಪೋರೇಷನ್ ಅಧಿಕಾರಿಗಳ ಜೊತೆಯಲ್ಲಿ ಸೇರಿ ಏನೇನು ಕಾರ್ಯಕ್ರಮ ತೆಗೆದುಕೊಳ್ಳಬೇಕು ಅದನ್ನು ತೆಗೆದುಕೊಂಡಿದ್ದಾರೆ.

ವಿತ್ತೀಯ ಕಾರ್ಯಕಲಾಪಗಳು ೧೯೮೫-೮೬ ಬೇಡಿಕೆಗಳ ಮೇಲಿನ ಚರ್ಚೆ.

ಬೇಡಿಕೆಯ ಸಂಖ್ಯೆ. ೨೫-ಪೋಲೀಸ್ ಮತ್ತು ಅಗ್ನಿ ಶಾಮಕಸೇವೆ.

ಶ್ರೀ ಬಿ. ರಾಚಯ್ಯ(ಗೃಹ ಸಚಿವರು).—ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ರಿಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪೋಲೀಸ್ ಮತ್ತು ಅಗ್ನಿಶಾಮಕ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೮೦,೭೨,೦೫.೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಗಿದೆ.

ಬೇಡಿಕೆಯ ಸಂಖ್ಯೆ. ೨೩-ರಾಜ್ಯ ಅಬಕಾರಿ.

ಶ್ರೀ ಆರ್. ಸಿ. ಜಿಗಜಿಣಗಿ (ಅಬಕಾರಿ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೮೬ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯದ ಅಬಕಾರಿಗೆ ಸಂದಾಯಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೬,೪೫,೯೫,೦೦೦ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಗಿದೆ.

ಬೇಡಿಕೆಯ ಸಂಖ್ಯೆ. ೨೦-ಬಂದಿಖಾನೆ.

ಶ್ರೀ ವೀರಣ್ಣ(ಸಣ್ಣ ಉಳಿತಾಯ ಮತ್ತು ಮತ್ತು ಬಂದೀಖಾನೆ ರಾಜ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಜೈಲುಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೫,೧೮,೧೩,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೫,೫೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು, ಬೇಡಿಕೆಯ ಸಂಖ್ಯೆ. ೧೯ ಸಣ್ಣ ಉಳಿತಾಯ.

ಶ್ರೀ ವೀರಣ್ಣ (ಸಣ್ಣ ಉಳಿತಾಯ ಮತ್ತು ಬಂದೀಖಾನೆ ರಾಜ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಣ್ಣ ಉಳಿತಾಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧,೧೪,೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಗಿದೆ.

ಈ ಬೇಡಿಕೆಗಳಿಗೆ ೨ ದಿವಸ ನಿಗದಿ ಮಾಡಲಾಗಿದೆ. ಚರ್ಚೆ ಹಾಗೂ ಮಂತ್ರಿಗಳ ಉತ್ತರಕ್ಕೆ ಸುಮಾರು ೮ ಗಂಟೆಗಳ ಅವಕಾಶ ಸಿಗುವುದು, ಸಮಯವನ್ನು ಹೀಗೆ ವಿಂಗಡಿಸಲಾಗಿದೆ.

ಕಾಂಗ್ರೆಸ್ ಪಕ್ಷ	೧೫೦ ನಿಮಿಷ
ಸಿ.ಪಿ.ಐ.	೩೦ ನಿಮಿಷ
ಸಿ.ಪಿ.ಐ.(ಎಂ)	೨೦ ನಿಮಿಷ
ಬಿ.ಜೆ.ಪಿ.	೨೦ ನಿಮಿಷ
ಪಕ್ಷೇತರರಿಗೆ	೩೦ ನಿಮಿಷ
ಜನತಾ ಪಕ್ಷ (ಮಂತ್ರಿಗಳ ಉತ್ತರ ಸೇರಿ)	೨೩೦ ನಿಮಿಷ

ದಯವಿಟ್ಟು ಆಯಾ ಪಕ್ಷದ ನಾಯಕರು ಹಾಗೂ ಸದಸ್ಯರು ಸಹಕರಿಸಬೇಕೆಂದು ಕೋರುತ್ತೇನೆ. ಚರ್ಚೆಯು ನಾಳೆ ೩ ಗಂಟೆಗೆ ಮುಗಿಯುವುದು. ಈಗ ಮಾನ್ಯ ಬಂಗಾರಪ್ಪನವರು ಚರ್ಚೆಯನ್ನು ಪ್ರಾರಂಭ ಮಾಡುವುದು.

೧-೩೦ ಪಿ. ಎಂ.

ಶ್ರೀ ಎಸ್. ಬಂಗಾರಪ್ಪ (ವಿರೋಧ ಪಕ್ಷದ ನಾಯಕರು).—ಮಾನ್ಯ ಸಭಾಧ್ಯಕ್ಷರೇ, ಮೂರು ಜನ ಮಾನ್ಯ ಮಂತ್ರಿಗಳು ಮಂಡಿಸಿರತಕ್ಕಂಥ ಬೇಡಿಕೆಗಳು ೨೫, ೨೩, ೨೬ ಮತ್ತು ೧೯, ಏನು ಇದೆ ಈ ಬೇಡಿಕೆಗಳನ್ನು ವಿರೋಧಿಸಿ ನಾನು ಮಾತನಾಡಬೇಕೆಂದು ಇಚ್ಚೆಪಟ್ಟಿದ್ದೇನೆ.

ಶ್ರೀ ವೀರಣ್ಣ.—ರಘುಪತಿಯವರು ವೀರಣ್ಣನವರ ಬೇಡಿಕೆಗಳನ್ನು ವಿರೋಧ ಮಾಡಬೇಡಿ ವಿರೋಧ ಮಾಡಿದರೆ ಜೈಲಿಗೆ ಹಾಕುತ್ತಾರೇನು ಹೇಳುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಅವರ ಬೇಡಿಕೆಗಳನ್ನು ನಾನು ವಿರೋಧ ಮಾಡುತ್ತೇನೆ. ಅದಕ್ಕೆ ಸಾಕಷ್ಟು ಉದಾಹರಣೆಗಳು ನನ್ನಲ್ಲಿವೆ. ಅದರ ಬಗ್ಗೆ ಹೇಳಬೇಕಾದರೆ ಹೇಳುತ್ತೇನೆ.

ಅಧ್ಯಕ್ಷರು.—ಯಾರೂ ಇಂಟರ್‌ಫಿಯರ್ ಆಗಬೇಡಿ. ಬಂಗಾರಪ್ಪನವರೇ, ತಾವು ಲಕ್ಷ್ಯಕ್ಕೆ ತೆಗೆದುಕೊಳ್ಳಬೇಡಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಯಾವುದೇ ಪಕ್ಷ ಸರ್ಕಾರದಲ್ಲಿದ್ದರೂ ಸಹ ಇಲಾಖೆಗಳಿಗೆ ಬೇಕಾದಂತಹ ಹಣವನ್ನು ಈ ಸದನದಲ್ಲಿ ನಾವು ಮಂಜೂರು ಮಾಡಬೇಕಾಗುತ್ತದೆ. ಈ ಒಂದು ಮೂಲಭೂತವಾದಂತಹ ಅಭಿಪ್ರಾಯ ಅಥವಾ ವಾದವನ್ನು ನಾನು ಮಾನ್ಯ ಮಾಡುತ್ತೇನೆ ವಿರೋಧ ಮಾಡುವುದಕ್ಕೆ ಏನು ಕಾರಣ ಎನ್ನತಕ್ಕಂಥದ್ದು ಕೂಡ ಮುಖ್ಯವಾದುದು. ಸರ್ಕಾರದಲ್ಲಿ ಹಣ ಎಂಭತ್ತು ಕೋಟಿ ರೂಪಾಯಿ ಇರಬಹುದು ಇಪ್ಪತ್ತೈದು ಕೋಟಿ ರೂಪಾಯಿ ಇರಬಹುದು ಇನ್ನು ಯಾವುದೇ ಇರಬಹುದು. ಈ ಹಣ ಜನರ ಹಣ. ಕರ್ನಾಟಕದ ಜನತೆ ತೆರಿಗೆಯ ರೂಪದಲ್ಲಿ ಹಲವಾರು ರೀತಿಯಲ್ಲಿ ಹಣವನ್ನು ಸರ್ಕಾರದ ಖಜಾನೆಗೆ ತುಂಬಿರುತ್ತಾರೆ. ಆ ಹಣ

CHAIRMAN : ಶ್ರೀಮತಿ ಮನೋರಮಾ ಮಧ್ವರಾಜ್.

(ಸಭಾಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ದುರ್ವ್ಯಯ ಆಗದ ಹಾಗೆ ನೋಡಿಕೊಳ್ಳಬೇಕು. ಸದುಪಯೋಗ ವಾಗುವ ಹಾಗೆ ನೋಡಿ ಕೊಳ್ಳಬೇಕು. ಅದೇ ಹಣದಿಂದ ಸರ್ಕಾರದ ಆಡಳಿತ ಯಂತ್ರ ನಡೆಯಬೇಕು. ಕಾನೂನು ಪ್ರಕಾರ ನ್ಯಾಯವನ್ನು ದೊರಕಿಸಿಕೊಡತಕ್ಕಂಥ ವಿಚಾರದಲ್ಲಿ ಸಾಧ್ಯವಿಲ್ಲ ಎನ್ನತಕ್ಕಂಥ ಅಭಿಪ್ರಾಯ ಬಂದರೆ ಅಥವಾ ಕಾನೂನು ಪ್ರಕಾರ ನ್ಯಾಯವನ್ನು ಜನಸಾಮಾನ್ಯರಿಗೆ ಕೊಡುವುದಕ್ಕೆ ಸಾಧ್ಯವಿಲ್ಲ, ಅಥವಾ ರಕ್ಷಣೆಯನ್ನು ಸಮಾಜದಲ್ಲಿರತಕ್ಕಂಥ ದುರ್ಬಲ ವರ್ಗದವರಿಗೆ, ಹರಿಜನ ಗಿರಿಜನ ಇತ್ಯಾದಿ ಯಾವುದೇ ಜಾತಿ ಕುಲ ಗೋತ್ರ ಇರಬಹುದು. ಬಡವರು ಎಲ್ಲಾ ಜಾತಿಯಲ್ಲೂ ಇರುತ್ತಾರೆ. ಬಡವರಿಗೆ ರಕ್ಷಣೆ ಸಿಗಬೇಕು. ಆಡಳಿತ ಯಂತ್ರ ತನ್ನ ಅಧಿಕಾರ ವ್ಯಾಪ್ತಿಯನ್ನು ಮೀರಿ ಹೋದಾಗ ಅಥವಾ ಅಧಿಕಾರ

ವನ್ನು ದುರುಪಯೋಗಪಡಿಸಿಕೊಂಡಾಗ ಹಣದ ವ್ಯಯ ಆದಾಗ ಕೆಟ್ಟ ಬಾಬುಗಳಿಗೆ ಹಣ ಖರ್ಚು ಆದಾಗ ಸಹಜವಾಗಿ ನಾವು ವಿರೋಧ ಮಾಡುವಂಥಾದ್ದು ಮೂಲಭೂತ ಕರ್ತವ್ಯವಾಗಿರುತ್ತದೆ. ನಮ್ಮ ಮೂಲಭೂತವಾದ ಹಕ್ಕನ್ನು ನಾವು ಚಲಾವಣೆ ಮಾಡಬೇಕಾಗುತ್ತದೆ. ಅದೇ ಉದ್ದೇಶದಿಂದ ನಾವು ವಿರೋಧ ಮಾಡಬೇಕಾಗುತ್ತದೆ. ಸರ್ಕಾರದ ಇಲಾಖೆಗಳಲ್ಲಿರತಕ್ಕಂಥ ಅಧಿಕಾರ ವರ್ಗದವರು ಇದ್ದಾರೆ. ಅವರಿಗೆ ಕೊಡಬೇಕಾದ ಸಂಬಳವನ್ನು ಕೊಡಬಾರದು ಎಂದು ನಮ್ಮ ಅಭಿಪ್ರಾಯವಲ್ಲ. ಆದರೆ ಅವರಿಗೆ ಕೊಟ್ಟಿರತಕ್ಕಂಥ ಹಣ ಸಂಬಳ ಸಾರಿಗೆ ಅವರ ಕುಟುಂಬ ಅಥವಾ ಸಂಸಾರ, ಮಕ್ಕಳ ವಿದ್ಯಾಭ್ಯಾಸ, ಆರೋಗ್ಯ ಇತ್ಯಾದಿ ಇತ್ಯಾದಿ ಹಲವಾರು ತೊಂದರೆಗಳ ಬಗ್ಗೆ ಖರ್ಚು ಇದ್ದೇ ಇರುತ್ತದೆ. ಅದಕ್ಕೋಸ್ಕರ ಸರ್ಕಾರ ಪ್ರತಿ ಸಾರಿಯೂ ಸಂಬಳ ಸಾರಿಗೆಗಳನ್ನು ಹೆಚ್ಚಿಗೆ ಮಾಡಬೇಕಾಗುತ್ತದೆ. ಪೇ ರಿವಿಸನ್, ಡಿ.ಎ. ಕೊಡತಕ್ಕಂಥದ್ದು ಇತ್ಯಾದಿ ಇದೆ. ನಾವು ಜಾಸ್ತಿ ಮಾಡುವ ಸಂದರ್ಭ ಬಂದಾಗಲೂ ಸದನದಲ್ಲಿ ಒಪ್ಪಿಗೆ ಕೊಡತಕ್ಕಂಥದ್ದನ್ನು ಇಟ್ಟುಕೊಂಡು ಬಂದಿದ್ದೇವೆ. ನಮಗೆ ಸಕಾರಣಗಳು ಸಿಕ್ಕಾಗ ಆಡಳಿತ ಯಂತ್ರದಲ್ಲಿ ಕರ್ತವ್ಯ ಲೋಪ ಬಂದ ತತ್ಪರಿಣಾಮವಾಗಿ ಸಮಾಜ ದಲ್ಲಿರತಕ್ಕಂಥ ಜನರಿಗೆ ನ್ಯಾಯ ಸಿಗದೇ ಇದ್ದಾಗ ಅನ್ಯಾಯ ಒದಗಿದಾಗ ಅಧಿಕಾರ ದುರುಪಯೋಗ ವಾದಾಗ ನಾವು ವಿರೋಧ ಮಾಡಬೇಕಾಗುತ್ತದೆ. ಮಾನ್ಯ ಸಭಾಧ್ಯಕ್ಷಿಣಿಯವರೇ ಈ ಸಂದರ್ಭದಲ್ಲಿ ನಾವುಇವತ್ತು ಪ್ರಮುಖವಾಗಿರತಕ್ಕಂಥ ಬೇಡಿಕೆಗಳು ಅವುಗಳಲ್ಲಿ ಚಿಕ್ಕವುದೊಡ್ಡವು ಎಂದು ಇಟ್ಟುಕೊಳ್ಳು ವುದಿಲ್ಲ, ಪೋಲೀಸ್ ಫೈರ್ ಸರ್ವೀಸಸ್ ಎಲ್ಲಾ ಇದೆ. ಪೋಲೀಸ್ ಇಲಾಖೆ, ರಕ್ಷಣೆ ಇಲಾಖೆ, ನಾವು ಸಹಜವಾಗಿ ಗ್ರಾಮೀಣ ಮಟ್ಟದಲ್ಲಿ ಕರೆಯುತಕ್ಕಂಥದ್ದು ಪೋಲೀಸ್ ಎಂದು ಹೇಳುತ್ತೇವೆ. ಇಂಗ್ಲೀಷ್ ಪದ ಆದರೂ ಕೂಡ ಕನ್ನಡಕ್ಕೆ ಅಳವಡಿಸಿಕೊಂಡಿದ್ದೇವೆ. ಇದಕ್ಕೆ ರಕ್ಷಣೆ ಇಲಾಖೆ ಎಂದು ಹೇಳುತ್ತೇವೆ. ಮತ್ತು ಆರಕ್ಷಕ ಠಾಣೆ ಎಂದು ಹೇಳುತ್ತೇವೆ. ಕನ್ನಡ ಪದಗಳಲ್ಲಿ ಚೆನ್ನಾಗಿ ಜೋಡಣೆ ಮಾಡುವುದು ಕೆಲವೊಮ್ಮೆ ಜನಸಾಮಾನ್ಯರು ಹೇಳತಕ್ಕದ್ದು ಪೋಲೀಸ್ ಸ್ಟೇಷನ್ನಿಗೆ ಹೋಗಿದ್ದೆ, ಪೋಲೀಸ್ ಸೂಪರಿಂಟೆಂಡೆಂಟ್ ಹತ್ತಿರ ಹೋಗಿದ್ದೆ ಎಂದು ಸಹಜವಾಗಿ ಕನ್ನಡ ಪದಗಳನ್ನೇ ಪ್ರಯೋಗ ಮಾಡುತ್ತಾರೆ. ಈ ರಕ್ಷಣೆ ಇಲಾಖೆ ಪೋಲೀಸ್ ಆರಕ್ಷಕರ ಇಲಾಖೆ ಎಂದು ಇಟ್ಟು ಕೊಳ್ಳೋಣ. ಈ ಇಲಾಖೆಯ ವಿಚಾರ ನಾವು ಚರ್ಚೆ ಮಾಡುತ್ತಿದ್ದೇವೆ. ಹಾಗೆಯೇ ಫೈರ್ ಸರ್ವೀಸಸ್ ಬೆಂಕಿ ಅನಾಹುತ ನಡೆದಾಗ ಯಾವ ರೀತಿ ಗ್ರಾಮೀಣ ಮಟ್ಟದಲ್ಲಿ ಅಥವಾ ಪಟ್ಟಣ, ನಗರ ಪ್ರದೇಶಗಳಲ್ಲಿ ಇಟ್ಟುಕೊಳ್ಳಬೇಕೆಂದು ನಮ್ಮ ಮುಂದೆ ಚರ್ಚೆಯಲ್ಲಿದೆ. ಹಾಗೆಯೇ ಸ್ಟೇಟ್ ಎಕ್ಸೈಜ್ ಅಥವಾ ಅಬಕಾರಿ ಇಲಾಖೆ ಕೂಡ ನಮ್ಮ ಚರ್ಚೆಯಲ್ಲಿದೆ. ಬಂದೀಖಾನೆ ಚರ್ಚೆಯಲ್ಲಿದೆ. ಹಾಗೆಯೇ ಸಣ್ಣ ಉಳಿತಾಯ ಕೂಡ ಇದೆ. ಇದು ಶ್ರೀಮಾನ್ ವೀರಣ್ಣನವರ ಇಲಾಖೆಗೆ ಸೇರಿದ್ದು. ಎಲ್ಲಾ ಮುಖ್ಯ ವಿಚಾರಗಳು, ಆರ್ಥಿಕ ವಿಚಾರಗಳಿಗೆ ಸಂಬಂಧ ಪಟ್ಟಂತೆ ಕೆಲವು ಜೈಲು ಪೋಲೀಸ್ ಇತ್ಯಾದಿ. ಇತ್ಯಾದಿ ನಾನು ಇವರಲ್ಲಿಯಾವುದು ದೊಡ್ಡದು, ಯಾವುದು ಸಣ್ಣದು ಎನ್ನತಕ್ಕಂಥ ದೃಷ್ಟಿಯಿಂದ ಮಾತ ನಾಡದೆ ಇದ್ದರೂ ಕೂಡ ಸುಮಾರಾಗಿ ಪೋಲೀಸ್ ಇಲಾಖೆಗೆ ಜಾಸ್ತಿ ಹಣವನ್ನು ಖರ್ಚು ಮಾಡಿ ದ್ದೇವೆ. ಅದೇ ರೀತಿ ಎಕ್ಸೈಜ್ ಬಾಬು ಹೆಚ್ಚಿನ ಹಣ ತಂದುಕೊಡತಕ್ಕ ಬಾಬು. ನಮ್ಮ ಸರ್ಕಾರದ ಖಜಾನೆಗೆ ಹಣ ತಂದು ಕೊಡುತ್ತದೆ. ಉದಾಹರಣೆಗೆ ಈ ವರ್ಷದ ಬಜೆಟ್‌ನಲ್ಲಿ ಒಂದು ಲೀಟರ್‌ಗೆ ೨ ರೂಪಾಯಿ ಜಾಸ್ತಿ ಮಾಡಿದ್ದರಿಂದ ಎಂಟು ಕೋಟಿ ರೂಪಾಯಿ ಬರುತ್ತದೆಂದು ಕಾಣುತ್ತದೆ. ಎಕ್ಸೈಜ್ ವಿಚಾರದಲ್ಲಿ ಅನಂತರ ಬರುತ್ತೇನೆ. ಜೈಲು ಮತ್ತು ಸ್ಮಾಲ್ ಸೇವಿಂಗ್ಸ್ ಬಗ್ಗೆ ಹೆಚ್ಚು ಮಾತನಾಡುವುದಿಲ್ಲ. ನಮ್ಮ ಪಕ್ಷದ ಮಾನ್ಯ ಸದಸ್ಯರು ಇದರ ಬಗ್ಗೆ ಮಾತನಾಡುವವರಿದ್ದಾರೆ ಎಂದು ಭಾವಿಸುತ್ತೇನೆ. ನಾನು ನನ್ನ ಇಂದಿನ ಚರ್ಚೆಯ ಭಾಷಣದಲ್ಲಿ ಪೋಲೀಸ್ ಇಲಾಖೆ ಮತ್ತು ಸ್ಟೇಟ್ ಎಕ್ಸೈಜ್ ಸಚಿವರಾದ ಶ್ರೀಮಾನ್ ರಮೇಶ್ ಜಿಗಜಿಣಗಿಯವರ ಇಲಾಖೆಯ ಬಗ್ಗೆ ಮತ್ತು ಶ್ರೀಮಾನ್ ರಾಚಯ್ಯನವರ ಪೋಲೀಸ್ ಇಲಾಖೆಯ ಬಗ್ಗೆಯೂ ಕೂಡ ನಾನು ಪ್ರಮುಖವಾದ ಭಾಷಣವನ್ನು ಹೆಚ್ಚಿಗೆ ನಾನು ಕೇಂದ್ರೀಕೃತಗೊಳಿಸತಕ್ಕ ಅಭಿಪ್ರಾಯವನ್ನು ಇಟ್ಟುಕೊಂಡಿದ್ದೇನೆ. ಮೊಟ್ಟಮೊದಲನೆಯದಾಗಿ ಪೋಲೀಸ್ ಇಲಾಖೆಗೆ ಸಂಬಂಧಪಟ್ಟ ಹಾಗೆ ಈ ಸಂದರ್ಭದಲ್ಲಿ ನಾನು ನಾಲ್ಕು ಮಾತುಗಳನ್ನು ಆಡುವುದಕ್ಕೆ ಇಚ್ಛೆಪಡುತ್ತೇನೆ. ಸರ್ಕಾರ ಪ್ರತಿ ವರ್ಷ ಹೊರಡಿಸಿದ ಹಾಗೆ ಒಂದು ವಾರ್ಷಿಕ ವರದಿಯನ್ನು ೮೪-೮೫ನೇ ಸಾಲಿಗೆ ಒಂದು ವರದಿಯನ್ನು ಕೊಟ್ಟಿದ್ದಾರೆ. ಈ ಅಪರಾಧಿಗಳ ವಿಚಾರಗಳನ್ನು ಹೇಳುವುದಕ್ಕಿಂತ ಮುಂಚೆ ನಾನು ಕೆಲವೊಂದು ಮಾತನ್ನು ಈ ಇಲಾಖೆಯ ಬಗ್ಗೆ ಆಡಿ ಬಿಟ್ಟರೆ ಬಹಳ ಒಳ್ಳೆಯದು. ಈ ಸದನದ ಮಾನ್ಯ ಸದಸ್ಯರು ಈ ಕಡೆ ಇರಬಹುದು. ಆ ಕಡೆ ಇರಬಹುದು. ಒಂದೇ ಅಭಿಪ್ರಾಯ ಇದ್ದರೆ ಬಹಳ ಒಳ್ಳೆಯದು. ಯಾವ ಮಟ್ಟದಲ್ಲಿ ಪೋಲೀಸ್ ಇಲಾಖೆಯಿಂದ ನಮ್ಮ ಹಕ್ಕುಗಳ ರಕ್ಷಣೆ ಆಗಬೇಕು, ರಾಜ್ಯಾಂಗಬದ್ಧವಾಗಿರತಕ್ಕಂಥ ಹಕ್ಕುಗಳು ನಮ್ಮ ರಾಜ್ಯದಲ್ಲಿ ಯಾವುದೇ ಇರಬಹುದು. ಗೂಂಡಾಗಳಿಗೆ ಸಂಬಂಧಪಟ್ಟ ಕಾನೂನು ಇರಬಹುದು. ಇಂಡಿಯನ್ ಪೀನಲ್ ಕೋಡ್, ಸಿ.ಆರ್.ಪಿ.ಸಿ. ವಿಚಾರ ಇರಬಹುದು. ಕೋರ್ಟ್ ವ್ಯಾಪ್ತಿಗೆ

ಬರತಕ್ಕಂಥದ್ದು, ಬಾರದೇ ಇರತಕ್ಕದ್ದು ಯಾವುದೇ ಇರಬಹುದು. ಈ ಹಕ್ಕುಗಳು ಏನು ಇದೆ, ಈ ಹಕ್ಕುಗಳು ಸಮಾಜದಲ್ಲಿರತಕ್ಕಂಥ ಸಾಮಾನ್ಯ ಪ್ರಜೆಗಳ ಹಕ್ಕುಗಳು. ಈ ಹಕ್ಕುಗಳ ರಕ್ಷಣೆ ಆಗಲಿಕ್ಕೆ ನಾವುಗಳು ಇಂಥಹ ಇಲಾಖೆಗಳನ್ನು ನಾವು ಸ್ಪಷ್ಟವಾಗಿ ಇಟ್ಟು ಕೊಂಡಿದ್ದೇವೆ. ಇಲ್ಲದಿದ್ದರೆ ಇಂಥ ಇಲಾಖೆ ಇಟ್ಟುಕೊಳ್ಳಬೇಕಾದ ಅವಶ್ಯಕತೆ ನಮಗೆ ಇಲ್ಲ. ಪೋಲೀಸ್ ಇಲಾಖೆ ಅಥವಾ ರಕ್ಷಣೆ ಇಲಾಖೆ ರಕ್ಷಣೆ ಮಾಡಬೇಕು. ಹಕ್ಕುಗಳ ರಕ್ಷಣೆ, ಜನರ ಜೀವನ ರಕ್ಷಣೆ ಮತ್ತು ಜನರ ಆಸ್ತಿಗಳ ರಕ್ಷಣೆ ಕೂಡ ಮಾಡತಕ್ಕಂಥ ವಿಚಾರ ಇವತ್ತು ರಾಜ್ಯಾಂಗಬದ್ಧವಾಗಿ ಮತ್ತು ಬೇರೆ ಕಾನೂನುಗಳಲ್ಲಿ ನಮೂದಾಗಿದೆ. ರಕ್ಷಣೆ ಕೊಡತಕ್ಕಂಥ ವಿಚಾರದಲ್ಲಿ ಕರ್ತವ್ಯ ಲೋಪ ಬಂದಾಗ ನಾವು ಸಹಜವಾಗಿ ನಾವು ಸರ್ಕಾರದ ಮತಿಯಿಂದ ದೊಡ್ಡ ಪ್ರಮಾಣದ ಕರ್ತವ್ಯ ಲೋಪವಾಗಿದೆ ಎನ್ನತಕ್ಕಂಥ ಮಾತನ್ನು ಸ್ಪಷ್ಟವಾಗಿ ಮಾಡಬೇಕಾಗುತ್ತದೆ. ಕರ್ನಾಟಕ ರಾಜ್ಯದ ಜನಸಾಮಾನ್ಯರ ಅಭಿಪ್ರಾಯದಲ್ಲಿ ಈ ರೀತಿ ಹಿಂದೆ ಇರಲಿಲ್ಲವೇ ಎನ್ನುವುದು ಇರಬಹುದು. ಆದರೆ ವರ್ಷಗಳು ಉರುಳಿ ಹೋದ ಹಾಗೆ ಪೋಲೀಸ್ ಇಲಾಖೆ ಬಗ್ಗೆ ಜನರ ಅಭಿಪ್ರಾಯ ಒಳ್ಳೆಯ ರೀತಿಯಲ್ಲಿ ಒಡಮೂಡಿ ಬರಬೇಕು, ಒಳ್ಳೆಯ ಇಲಾಖೆ ತನ್ನ ಆಡಳಿತವನ್ನು ನಡೆಸಿದ್ದರ ಪರಿಣಾಮವಾಗಿರಬೇಕು. ಪೋಲೀಸ್ ಇಲಾಖೆಯ ಬಗ್ಗೆ ನಮಗೆ ಒಳ್ಳೆಯ ನಂಬಿಕೆ ಬಂದಿದೆ. ಬಹಳ ಸಂತೋಷ ಪಡಬೇಕಾದಂತ ವಿಷಯ. ನಮ್ಮ ಪೋಲೀಸ್ ಇಲಾಖೆಗೆ ಕೆಲವು ಹೆಚ್ಚಿನ ಅಧಿಕಾರಗಳನ್ನು ಕೊಟ್ಟಿದ್ದೇವೆ. ಆ ರೀತಿ ಕೊಡದೆ ಇದ್ದರೆ ಸಮಾಜಘಾತುಕ ವ್ಯಕ್ತಿಗಳು, ಕೆಟ್ಟ ಜನರು ಕಾನೂನು ವಿರೋಧವಾಗಿ ಹೋಗತಕ್ಕಂಥ ಜನರು ಅವರನ್ನು ನಾವು ಹಿಡಿತದಲ್ಲಿ ಇಟ್ಟುಕೊಳ್ಳಲು ತಹಬಂದಿಗೆ ತರುವುದು ಸಾಧ್ಯವಾಗುತ್ತಿರಲಿಲ್ಲ ಎನ್ನುವುದು ನನ್ನ ಅಭಿಪ್ರಾಯ. ಉದಾಹರಣೆಗೆ ಪೋಲೀಸ್ ಇಲಾಖೆಯಲ್ಲಿ ಸಬ್ ಇನ್ಸ್‌ಪೆಕ್ಟರ್ ಏನು ಮಾಡಬಹುದು ? ಬೇಕಾದಾಗ ಕೇಸ್ ಹಾಕಬಹುದು, ಬೇಡವೆಂದಾಗ ಹಾಗೆಯೇ ಬಿಡಬಹುದು. ದೊಡ್ಡ ದೊಡ್ಡ ಪ್ರಕರಣಗಳಲ್ಲಿ ಹಾಗೆಯೇ ಬಿಟ್ಟಿರುವುದು ನನ್ನ ಗಮನಕ್ಕೆ ಬಂದಿದೆ. ಇವನು ರಸ್ತೆಯಲ್ಲಿ ಜಗಳವಾಡುತ್ತಿದ್ದ ಎಂದು ಸಣ್ಣ ಕೇಸ್ ಹಾಕಿ ೫ ರೂಪಾಯಿ ೧೦ ರೂಪಾಯಿ ದಂಡ ಹಾಕತಕ್ಕದ್ದು ಆಗಬಹುದು. ಇಲ್ಲ ಎಂದರೆ ಇವರು ಮೂರು ಜನರ ಜೊತೆ ಸೇರಿ ದರೋಡೆ ಮಾಡತಕ್ಕಂಥ ಪ್ರಯತ್ನ ಮಾಡುತ್ತಿದ್ದರು ಎಂದು ಹೇಳಬಹುದು. ಒಂದು ಕೇಸು ಹೋದರೆ ಅವನು ನಿರಪರಾಧಿ ಎಂದು ಹೇಗೆ ಹೇಳಬೇಕು. ಅಪರಾಧಿ ಬಿಡುಗಡೆಯಾಗಿ ಬರುವಾಗ ತಾವು ನಿರ್ದೋಷಿ ಎಂದು ಹಣೆಗೆ ಚೀಟಿ ಹಚ್ಚಿಕೊಂಡು ಬರುವುದಕ್ಕೆ ಸಾಧ್ಯವೆ ? ಅಲ್ಲಿಯವರೆಗೆ ಅವನು ಸಮಾಜದಲ್ಲಿ ಅಪರಾಧಿಯಾಗಿಯೇ ಕಾಣುತ್ತಾನೆ. ಇವತ್ತು ನಮಗೆ ಗೊತ್ತಿದೆ ಸಮಾಜದಲ್ಲಿರತಕ್ಕ ಒಳ್ಳೆಯ ಮನೆತನಗಳು ಗೌರವ ಇರತಕ್ಕ ಮನೆತನಗಳು ಅವರ ಮೇಲೆ ಕೇಸು ~~ಹಾಕಿದ್ದರೆ, ತಮ್ಮ ಘನತೆ ಗೌರವಕ್ಕೆ ಕುಂದು ಬಂತೆಂದು ಆತ್ಮಹತ್ಯೆ~~ ಮಾಡಿಕೊಂಡಿರುವಂಥ ಪ್ರಕರಣಗಳು ಇವೆ. ಆದರೆ, ಅಕ್ರಮ ದಾಸ್ತಾನುಗಾರರು, ಕಾಳಸಂತೆಕೋರರು ಇವರ ವಿಚಾರದಲ್ಲಿ ಹೇಳುವುದಾದರೆ ಹಣ ಇದ್ದಾಕ್ಷಣ ಇವರು ಸಮಾಜದಲ್ಲಿ ದೊಡ್ಡ ಮನುಷ್ಯರಾಗಿ ಕಾಣುತ್ತಾರೆ. ಅಗತ್ಯ ವಸ್ತುಗಳ ಕಾಯಿದೆ ಮೇರೆಗೆ ಯಾರ ಯಾರ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ? ಎಷ್ಟು ಕೇಸುಗಳನ್ನು ಹಾಕಿದ್ದೀರಿ? ೧೯೬೫ರ ಆಹಾರ ಸಾಮಗ್ರಿಗಳ ಕಾಯಿದೆ ಪ್ರಕಾರ ಎಷ್ಟು ಕೇಸುಗಳನ್ನು ಹಾಕಿದ್ದೀರಿ? ಈ ವಿಚಾರವನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇವರೆಲ್ಲ ಸಮಾಜದಲ್ಲಿ ದೊಡ್ಡ ಮನುಷ್ಯರಾಗಿ, ಲಕ್ಷಾಂತರ ರೂಪಾಯಿಗಳ ವಹಿವಾಟು ಮಾಡುತ್ತಿರುತ್ತಾರೆ. ರಕ್ಷಣೆ ಪಡೆಯತಕ್ಕ ಹಲವಾರು ವಿಧಾನಗಳನ್ನು ಅವರು ಕಂಡು ಕೊಂಡಿದ್ದಾರೆ. ಅಧಿಕಾರಿಗಳನ್ನು ಯಾವರೀತಿಯಲ್ಲಿ ಅಂಕಿತದಲ್ಲಿಟ್ಟು ಕೊಳ್ಳಬೇಕು ಎನ್ನುವುದು ಅವರಿಗೆ ಗೊತ್ತಿದೆ ಒಂದು ಹೊತ್ತಿಗೆ ಅನ್ನ ಇಲ್ಲದೇ ಇರತಕ್ಕವರಿಗೆ ಇವರು ದೊಡ್ಡ ಮನುಷ್ಯರಾಗಿ ಕಾಣಲ್ಲಿ ವಂತ ವ್ಯವಸ್ಥೆಯನ್ನು ಸೃಷ್ಟಿ ಮಾಡಿದ್ದಾರೆ. ಕಳೆದ ೩೫–೩೬ ವರ್ಷಗಳ ಕಾಲ ಆಡಳಿತ ನಡೆಸಿದವರಲ್ಲಿ ಮಾನ್ಯ ರಾಚಯ್ಯನವರು ಮತ್ತು ರಾಮಕೃಷ್ಣ ಹೆಗಡೆಯವರು ಮಂತ್ರಿಗಳಾಗಿದ್ದರು. ಅದರು ಅಧಿಕಾರದಲ್ಲಿಲ್ಲದ ಕಾಲವನ್ನು ಬಿಟ್ಟು ಹೇಳಿದರೆ ಸಂತೋಷವಾಗಿ ಒಪ್ಪಬಹುದು. ಈ ಇಲಾಖೆ ವಿಚಾರದಲ್ಲಿ ಪ್ರಾಮಾಣಿಕವಾಗಿ ಜನಸಾಮಾನ್ಯರಿಗೆ ನಂಬಿಕೆ ಹುಟ್ಟಬೇಕು. ನಾವು ಕೂಡ ಆಡಳಿತವನ್ನು ಮಾಡಿದ್ದೇವೆ. ತಾವುಕೂಡ ಮಾಡಿದ್ದೀರಿ. ಹರಿಜನರ ವಿಚಾರದಲ್ಲಿ.

ಶ್ರೀ ಬಿ. ಬಸವಲಿಂಗಪ್ಪ.—ಹರಿಜನರು ಅಂತ ಕರೆಯಬೇಡಿ ಅನುಸೂಚಿತ ಜಾತಿ ಎಂದು ಕರೆಯಿರಿ.

ಶ್ರೀ ಎಸ್. ಬಂಗಾರಪ್ಪ.—ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು, ರಾಜ್ಯಾಂಗದ ಕೋಷ್ಟಕದ ಪ್ರಕಾರ ಸಂಭೋದಿಸಿರತಕ್ಕ ಜಾತಿಗಳು. ಇವರಿಗೆ ರಕ್ಷಣೆ ಕೊಡತಕ್ಕ ವಿಚಾರದಲ್ಲಿ ಮಾರ್ಚಿ ತಿಂಗಳಲ್ಲಿ ೨೪ ಪ್ರಕರಣಗಳನ್ನು ನಾನು ಕಳುಹಿಸಿ ಕೊಟ್ಟಿದ್ದೇನೆ. ನಮ್ಮ ಪಕ್ಷದ ಕಾರ್ಯಕರ್ತರ ಮೇಲೆ ಹಲ್ಲೆ ನಡೆದ ವಿಚಾರಗಳನ್ನು ಪೋಲೀಸ್ ಇಲಾಖೆಯಿಂದ ರಕ್ಷಣೆ ದೊರೆಯದೇ ಇರತಕ್ಕ

ವಿಚಾರಗಳನ್ನು, ಸಾರ್ವಜನಿಕವಾದ ವಿಚಾರಗಳನ್ನು ಒಂದು ದೊಡ್ಡ ಪಟ್ಟಿ ಮಾಡಿ ತಮಗೆ ಕಳುಹಿಸಿ ಕೊಟ್ಟಿದ್ದೇನೆ. ತಮ್ಮಿಂದ ಉತ್ತರ ಏನು ಬಂದಿದೆ, ಇವನ್ನು ಪೋಲೀಸ್ ವಿಚಾರಣೆಗೆ ಕಳುಹಿಸಿ ಕೊಟ್ಟಿದ್ದೇವೆ ಎಂದು ನಾನು ಕಳುಹಿಸಿಕೊಟ್ಟಂಥ ಪ್ರಕರಣಗಳ ಬಗ್ಗೆ ಏನು ಕ್ರಮ ತೆಗೆದುಕೊಂಡಿ ದ್ದೀರಿ ? ಅವುಗಳು ಏನಾದವು ಎನ್ನುವ ಬಗ್ಗೆ ಇದುವರೆಗೂ ಏನೂ ಬಂದಿಲ್ಲ. ಮಾರ್ಚಿ ತಿಂಗಳಲ್ಲಿ ಕಳುಹಿಸಿ ಕೊಟ್ಟಿದ್ದೇನೆ. ಇವತ್ತು ಆಗಸ್ಟ್ ತಿಂಗಳಲ್ಲಿ ಇದ್ದೇವೆ. ತಾವು ಏನು ಆಡಳಿತ ಮಾಡು ತ್ತಿದ್ದೀರಿ. ನನಗೇ ಬಂದಿಲ್ಲ ಅಂದರೆ ಇನ್ನು ಹಳ್ಳಿಯಲ್ಲಿರತಕ್ಕ ಕರಿಯಣ್ಣ, ಮರಿಯಣ್ಣನವರು ಬರೆದ ಕಾಗದಗಳಿಗೆ ಉತ್ತರ ಸಿಗುತ್ತದೆಯೆ ? ಅವರು ಅರ್ಜಿಗಳನ್ನು ಬರೆಸಬೇಕಾದರೆ ಮತ್ತೊಬ್ಬರ ಹತ್ತಿರ ಹೋಗಿ ಬರೆಸಬೇಕು. ಬೆಳಿಗ್ಗೆ ಎದ್ದರೆ ಕೂಲಿಮಾಡುವವರ ಗತಿ ಏನು ? ಕೆಲವು ಮಾನ್ಯ ಸದಸ್ಯರುಗಳು ಕೂಡ ಅರ್ಜಿಗಳನ್ನು ಕೊಟ್ಟಿದ್ದಾರೆ, ತಾವು ಆ ಬಗ್ಗೆ ಏನೇನೂ ಕ್ರಮ ತೆಗೆದುಕೊಂಡಿಲ್ಲ ವೆಂದು ಹೇಳುತ್ತೇನೆ. ಶಿವಮೊಗ್ಗ ಜಿಲ್ಲೆ ಚನ್ನಗಿರಿ ತಾಲ್ಲೂಕಿನಲ್ಲಿ ಒಬ್ಬರಿಗೆ ಪೋಲೀಸಿನವರು ಪೋಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಹೊಡೆದು ಕೈಕಾಲು ಮುರಿದಿದ್ದಾರೆ. ಇವತ್ತು ಆತ ಆಸ್ಪತ್ರೆಯಲ್ಲಿದ್ದಾನೆ. ವೈದ್ಯರು ಕೈಕಾಲುಗಳಿಗೆ ಬ್ಯಾಂಡೇಜ್ ಹಾಕಿದ್ದಾರೆ. ಆತನ ಫೋಟೋ ಇದೆ, ಇದನ್ನು ಕೂಡ ತಮಗೆ ಕಳುಹಿಸಿಕೊಟ್ಟಿದ್ದೇನೆ. ಇಂಥ ನೂರಾರು ಪ್ರಕರಣಗಳನ್ನು ರಾಜ್ಯದಲ್ಲಿ ನಡೆದಿದೆ. ಶಾಸಕರು ಜನತೆಯ ಪ್ರತಿನಿಧಿಗಳು, ಜನಸಾಮಾನ್ಯರು ನಗರ ಪ್ರದೇಶಗಳಲ್ಲಿರತಕ್ಕ ಜನ ಕಳುಹಿಸಿಕೊಟ್ಟಿದ್ದಾರೆ. ಅವುಗಳ ಪರಿಸ್ಥಿತಿ ಏನಾಯಿತು ? ಜನರ ಅರ್ಜಿಗಳನ್ನು ತೆಗೆದುಕೊಳ್ಳುವುದ ಕ್ಕಾಗಿ ಮಾನ್ಯ ಲಕ್ಷ್ಮೀಸಾಗರ್‌ರವರಿಗೆ ಒಂದು ಇಲಾಖೆಯನ್ನೇ ಕೊಟ್ಟಿದ್ದೀರಿ, ಕುಂದುಕೊರತೆಗಳ ಇಲಾಖೆಯವರು ಏನು ಮಾಡಿದ್ದಾರೆ ? ಗಂಡ ಹೆಂಡತಿ ಜಗಳ ಮಾಡಿಕೊಂಡದನ್ನು ಕೂಡ ತರುತ್ತಾ ರೆಂದು ತಮ್ಮ ಕರ್ತವ್ಯದಲ್ಲಿ ನುಣುಚಿಕೊಳ್ಳತಕ್ಕ ಕೆಲಸ ಮಾಡಿದಿರಿ. ಇವತ್ತು ರಾಜ್ಯದಲ್ಲಿ ಹಿಂದುಳಿದ ಜಾತಿಗೆ ಸೇರಿದ ನಿಕೃಷ್ಟ ಕೋಮಿಗೆ ಸೇರಿದ ಜನರಿಗೆ ರಕ್ಷಣೆ ಇಲ್ಲ. ಪ್ರಬಲರಾದವರಿಗೆ ರಕ್ಷಣೆ ಸಿಗುತ್ತದೆ. ಮಾನ್ಯ ರಾಚಯ್ಯನವರು ಕೊಟ್ಟಂತಹ ಹೇಳಿಕೆ ಪತ್ರಿಕೆಗಳಲ್ಲಿ ಬಂದಿದೆ. ಪರಿಶಿಷ್ಟ ಜಾತಿಗೆ ಸೇರಿದ ವ್ಯಕ್ತಿಗಳಿಗೆ ರಕ್ಷಣೆ ಕೊಡತಕ್ಕ ವಿಚಾರದಲ್ಲಿ ಪೋಲೀಸ್ ಇಲಾಖೆ ವಿಫಲವಾದರೆ ಎಸ್. ಪಿ. ಯವರನ್ನು ಸಸ್ಪೆಂಡ್ ಮಾಡುತ್ತೇವೆಂದು ಹೇಳಿದಿರಿ.

ಶ್ರೀ ಬಿ. ರಾಚಯ್ಯ.—ಸಸ್ಪೆಂಡ್ ಮಾಡುತ್ತೇನೆಂದು ಹೇಳಿಲ್ಲ, ಹೊಣೆಗಾರರನ್ನಾಗಿ ಮಾಡು ತ್ತೇನೆಂದು ಹೇಳಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಹೊಣೆಗಾರಿಕೆ ಇರಬಹುದು. ನನ್ನ ಹತ್ತಿರ ಒಂದು ದೊಡ್ಡ ಪಟ್ಟಿಯೇ ಇದೆ. ನಿಮ್ಮ ಇಲಾಖೆಗೂ ಕಳುಹಿಸಿಕೊಟ್ಟಿದ್ದೇನೆ. ಉದಾಹರಣೆ ಮಾತ್ರ ಕೊಡುತ್ತೇನೆ. July, 85 - B. Honnaiah, Ramanagar Taluk. It is a case of attempt on the life by upper caste people to acquire land. Then in July Kamalamma, Chinnenakote Grama. KGF. It is a rape case. Police inaction. Chandrakanth working in S. P's office is supporting the culprit. Then about Kolar district. It pertains to June. Venkataramappa of Yedlur hobli, Srinivaspur taluk, Kolar district. Attempt on the lives of the whole family by Venkateshappa and others, to acquire land. Police in action. There is a telegram from Mariyammanahalli Tanda, Hospet taluk, Bellary district. I will read the telegram copy, It says. Inspector attrocity on the Scheduled Caste people of Mariyammanahalli Tanda. Please enquiry about the action taken. Shankar Naik''. ಇವುಗಳ ವಿಚಾರಣೆಗೆ ವಿಶೇಷವಾದ ಕಾರ್ಯಕ್ರಮ ಏನಾದರೂ ಹಾಕಿಕೊಂಡಿದ್ದೀರಾ ಎಂದು ಈ ಸಂದರ್ಭದಲ್ಲಿ ನಾನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಇದೇ ಸಂದರ್ಭದಲ್ಲಿ ಅಟ್ರಾಸಿಟೀಸ್ ಯಾವ ರೀತಿ ನಡೆಯುತ್ತಿದೆ ಎನ್ನುವ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. ಅದರಲ್ಲಿಯೂ ನಮ್ಮ ಪಕ್ಷದ ಕಾರ್ಯಕರ್ತರ ಮೇಲೆ ನಡೆದಂಥ ಹಲ್ಲೆ ಬಗ್ಗೆ ಹೇಳುತ್ತೇನೆ. ಪಕ್ಷ ರಾಜಕಾರಣದಲ್ಲಿ ಪೋಲೀಸ್ ಇಲಾಖೆ ಇಳಿಯಬಾರದು ಇದು ತುಂಬಾ ಅಪಾಯ. ಇದು ಬುಡದವರೆಗೆ ಹೋದರೆ, ತಿರುಗು ಬಾಣವಾಗುತ್ತದೆ. ಅಧಿಕಾರ ಯಾವತ್ತೂ ಶಾಶ್ವತವಲ್ಲ. ಇದು ಒಂದುರೀತಿ ಮಂಗನಿಗೆ ಹೆಂಡ ಕುಡಿಸಿದಹಾಗೆ ಆಗುತ್ತದೆ. ನಾಳೆ ಸಹಜವಾಗಿಯೇ ಮತ್ತೊಂದು ಪಕ್ಷ ಅಧಿಕಾರಕ್ಕೆ ಬಂದಾಗ ತಿರುಗುಬಾಣವಾಗಿ ನಿಮ್ಮನ್ನೇ ಒಡಿಯುವುದರಿಂದ ಇದರ ಬಗ್ಗೆ ಎಚ್ಚರಿಕೆ ವಹಿಸಬೇಕು.

ಮಾರ್ಚ್ ತಿಂಗಳಲ್ಲಿ ಕಳುಹಿಸಿಕೊಟ್ಟಂತಹ ದೂರುಗಳಿಗೆ ಬರೀ ಅಕ್ನಾಲೆಡ್ಜ್‌ಮೆಂಟ್ ಮಾತ್ರ ಬಂದಿದೆ. ನಮ್ಮ ಪಕ್ಷದ ಕಾರ್ಯಕರ್ತರ ಮೇಲೆ ಯಾವ ರೀತಿ ಪೋಲೀಸ್ ದೌರ್ಜನ್ಯ ನಡೆದಿದೆ ಎನ್ನುವುದಕ್ಕೆ ಚನ್ನಗಿರಿ ತಾಲ್ಲೂಕಿನಲ್ಲಿ ಆಗಿರತಕ್ಕ ಅನಾಹುತದ ಬಗ್ಗೆ ವ್ಯಕ್ತಿಯ ಫೋಟೋಗಳನ್ನು ಕಳುಹಿಸಿಕೊಡುತ್ತೇನೆ. ದಯಮಾಡಿ ವಿಚಾರ ಮಾಡಿ. ಕಾಂಗ್ರೆಸ್ ಪಕ್ಷದವರಿಗೆ ಬೆಂಬಲ ಕೊಟ್ಟಿದ್ದರಿಂದ ಪೋಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಹೊಡೆದು ಕೈಕಾಲು ಮುರಿದಿದ್ದಾರೆ. ಇವತ್ತಿಗೂ ಕೂಡ ಯಾರನ್ನೂ ದಸ್ತಗಿರಿ ಮಾಡಿಲ್ಲ, ಯಾರ ಮೇಲೂ ಕ್ರಮ ತೆಗೆದುಕೊಂಡಿಲ್ಲ. ಕಳೆದಸಾರಿ ಈ ಸದನದಲ್ಲಿ ಇಂಥ ಹಲ್ಲೆಗಳ ಬಗ್ಗೆ ಸಂಪೂರ್ಣವಾಗಿ ಚರ್ಚೆ ನಡೆದಾಗ, ಇದರ ಬಗ್ಗೆ ತಾವು ಒಂದು ಹೇಳಿಕೆ ಕೊಟ್ಟಿದ್ದೀರಿ, ತಪ್ಪು ಮಾಡಿದವರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದಿರಿ, ಆದರೆ ಇವತ್ತಿನವರೆಗೂ ತಮ್ಮ ಆಡಳಿತದಲ್ಲಿ ಅವ್ಯಾಹತವಾಗಿ, ಅವಿಚ್ಛಿನ್ನವಾಗಿ ನಮ್ಮ ಪಕ್ಷದ ಕಾರ್ಯಕರ್ತರ ಮೇಲೆ ದಾಳಿಗಳು ನಡೆಯುತ್ತಿವೆ. ಅನೇಕ ಜನ ಎಸ್. ಪಿ. ಯವರಿಗೆ ನಾನೇ ಫೋನ್ ಮಾಡಿ ತಿಳಿಸಿದ್ದೇನೆ. ಡಿ. ವೈ. ಎಸ್. ಪಿ. ಯವರಿಗೆ ಕಳುಹಿಸಿ ಕೊಟ್ಟಿದ್ದೇನೆ. ನ್ಯಾಯಬದ್ಧವಾಗಿ ಕಾನೂನು ಕ್ರಮ ತೆಗೆದು ಕೊಳ್ಳಿ ಎಂದು ಹೇಳಿದ್ದರೂ ಇದುವರೆವಿಗೂ ತೆಗೆದುಕೊಂಡಿಲ್ಲ. ದಾಖಲೆಗಳು ಬೇಕಾದಷ್ಟು ಇವೆ. ಹೆಚ್. ಡಿ. ಮರಿಯಪ್ಪ, ಕುಣಿಗಲ್ ತಾಲ್ಲೂಕು, ಇವರ ಆಸ್ತಿಯನ್ನು ಲೂಟಿ ಮಾಡಿದ್ದಾರೆ. ಇವತ್ತಿಗೂ ಇವರಿಗೆ ರಕ್ಷಣೆ ಕೊಟ್ಟಿಲ್ಲ. ಮಾಜಿ ಶಾಸಕರಾದ ಅರಕೇರಿಯವರು, ಬಿಜಾಪುರ ಜಿಲ್ಲೆಯವರು ಇವರಿಗೂ ಪೆಟ್ಟು ಬಿದ್ದಿದೆ. ಅಲ್ಲಿನ ಪಿ. ಎಸ್. ಐ. ಅವರು ಇವರನ್ನು ಹೀನಾಯವಾಗಿ ನಡೆಸಿಕೊಂಡು ಹೋಗಿದ್ದಾರೆ.

೨-೦೦ ಪಿ.ಎಂ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ನಮ್ಮ ಪಕ್ಷದವರು ಈ ರೀತಿ ಹೇಳುತ್ತಾರೆಂದು ಆಪಾದನೆ ಮಾಡಬಹುದು. ಈಗ ಹೆಚ್ಚು ಕಾಲ ಇಲ್ಲದಿರುವುದರಿಂದ ಅದನ್ನು ಓದುವುದಕ್ಕೆ ಹೋಗುವುದಿಲ್ಲ. ಒಟ್ಟಿನಲ್ಲಿ ಅವರಿಗೆ ರಕ್ಷಣೆ ಸಿಗಲಿಲ್ಲ. ನಾಳೆ ಅದೇ ಜಾಗದಲ್ಲಿದ್ದರೆ ನಮ್ಮ ಗತಿ ಏನು ಎಂಬ ಪ್ರಶ್ನೆ ತಮ್ಮ ಗಮನದಲ್ಲಿದ್ದರೆ ಒಳ್ಳೆಯದು. ಅದೇ ರೀತಿ ಮೈಸೂರು ನಗರದಲ್ಲಿ ಕೂಡಾ ಡಾ॥ ರಾಜಕುಮಾರ್ ಅಭಿಮಾನಿ ಸಂಘದವರು ಆ ವಿಚಾರವನ್ನು ತೆಗೆದುಕೊಂಡರೆ ಅಲ್ಲೂ ಸಾಕಷ್ಟು ಅಹಿತಕರ ಘಟನೆಗಳು ನಡೆದಿರತಕ್ಕ ವಿಚಾರಗಳು ಬಂದಿವೆ. ಇಂಥವು ನೂರಾರು ಸಾವಿರಾರು ನಮ್ಮ ರಾಜ್ಯದಲ್ಲಿ ನಡೆದಿವೆ. ರಾಮಕೃಷ್ಣ ಎಂಬುವವರು ಮೈಸೂರಿನ ಸರಸ್ವತಿಪುರಂನವರು. ಅವರು ಬಸವರಾಜು ಎಂಬುವವರನ್ನು ಎಳೆದು ಸೈಕಲ್ ಚೈನ್‌ನಿಂದ ಹೊಡೆದು ಸತ್ತ ಎಂದು ತಿಳಿದು ಬಿಸಾಕಿ ಹೋಗಿದ್ದಾರೆ. ಜನರು ಕೊನೆಗೆ ನೋಡಿ ಆಸ್ಪತ್ರೆಗೆ ಸೇರಿಸಿ ಉಳಿಸಿದ್ದಾರೆ. ಆತನ ಮೈ ಕೈಗೆಲ್ಲ ಬ್ಯಾಂಡೇಜ್ ಹಾಕಲಾಗಿದೆ. ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ವಿರೂಪಾಕ್ಷಪುರ ಎಂಬ ಗ್ರಾಮದಲ್ಲಿ ಅವರು ಹಲವಾರು ದೂರುಗಳನ್ನು ಕೊಟ್ಟರೂ ಪೋಲೀಸರು ರಕ್ಷಣೆಗೆ ಬರುತ್ತಿಲ್ಲವೆಂದು ಹೇಳಿದ್ದಾರೆ. ಸರಸಮ್ಮ ಎಂಬುವವರು ರಾಮಕೃಷ್ಣ ಎಂಬುವವರು ನಮಗೆ ಯಾವ ರೀತಿ ತೊಂದರೆ ಕೊಡುತ್ತಿದ್ದಾರೆಂದು ವಿವರಗಳನ್ನೆಲ್ಲ ಕೊಟ್ಟು ಹೇಳಿದ್ದಾರೆ. ಅವರಿಗೆ ಇದುವರೆಗೆ ರಕ್ಷಣೆ ಸಿಕ್ಕಿಲ್ಲ. ಇದೇ ರೀತಿ ಉಡುಪಿಯಲ್ಲಿ ಒಂದು ಕೇಸ್ ಆದರೂ ಕೂಡ ಅದಕ್ಕೆ ಯಾವ ರೀತಿಯ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲವೆಂದು ಹೇಳುತ್ತೇನೆ. ಈ ಸಂದರ್ಭದಲ್ಲಿ ದುರುಪಯೋಗ ಯಾವ ರೀತಿ ನಡೆಯುತ್ತಿದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಧಾರವಾಡ ಜಿಲ್ಲೆಯ ಬ್ಯಾಡಗಿ ತಾಲ್ಲೂಕಿನಲ್ಲಿ ೭ ಕೇಸುಗಳನ್ನು ಸೆಕ್ಷನ್ ೧೦೭ರ ಪ್ರಕಾರ ಹಾಕಿದ್ದಾರೆ. ಆ ಕೇಸಿಗೆ ಸಂಬಂಧಪಟ್ಟಹಾಗೆ ಬೇರೆ ಸೆಕ್ಷನ್‌ಗಳು ಇವೆ. ಅದನ್ನು ಕೋರ್ಟಿಗೆ ಕಳುಹಿಸಿಕೊಡಬೇಕು. ನಮಗೂ ಕಾನೂನು ಚೆನ್ನಾಗಿ ಗೊತ್ತಿದೆ. ಯಾರೋ ಒಬ್ಬರು ಒಂದು ಪಕ್ಷದವರು ಹೇಳುವುದು, ಕೇಸ್ ಹಾಕುವುದು, ಇದೇ ಅವರ ಕಸಬಾಗಿದೆ. ಈ ರೀತಿ ೭ ಕೇಸುಗಳನ್ನು ಹಾಕಿದ್ದಾರೆ. ೧೦೭ರ ಪ್ರೊಸೀಡಿಂಗ್ಸ್ ಅನ್ನು ಕ್ವಾಷ್ ಮಾಡಿಸಿದ್ದಾರೆ. ೧೦-೧೨ ಜನ ಅಲ್ಲೇ ಓಡಾಡುತ್ತಿದ್ದಾರೆ. ಇಲ್ಲಿ ಅನೇಕ ಫೈಲುಗಳು ನಮ್ಮ ಹತ್ತಿರ ಇವೆ. ಕೇಸಿನ ಒಂದು ದೊಡ್ಡ ಪಟ್ಟಿಯೇ ಇದೆ. ಈ ಪಟ್ಟಿ ಪ್ರಕಾರ ಹೋದರೆ ಡೌರಿ ಡೆತ್ಸ್ ಅಂದರೆ ವರದಕ್ಷಿಣೆ ಕೊಡುವುದಕ್ಕಾಗುವುದಿಲ್ಲವೆಂಬ ಕಾರಣದಿಂದ ಸಾವುಗಳಾಗಿರತಕ್ಕದ್ದು, ಹರಾಸ್‌ಮೆಂಟಿನಿಂದ ಸಾವುಗಳಾಗಿರತಕ್ಕದ್ದು. ಇವಂತೂ ಪ್ರತಿನಿತ್ಯ ಇದ್ದೇ ಇರುತ್ತವೆ. ಅವುಗಳನ್ನು ಬೇಕಾದರೆ ತಮಗೆ ಕಳುಹಿಸಿಕೊಡುತ್ತೇನೆ. ಇದು ಯಾವ ಮಟ್ಟಕ್ಕೆ ಹೋಗಿದೆ ಎಂಬುದನ್ನು ನೋಡಿ. ಇದರ ಒಂದು ದೊಡ್ಡ ಪಟ್ಟಿಯನ್ನೇ ಟೈಪ್ ಮಾಡಿಸಿ ಇಟ್ಟಿದ್ದೇನೆ. ಇಲ್ಲಿ ಕೆಲವು ಮುಖ್ಯವಾದ ವಿಚಾರಗಳನ್ನು ಮಾತ್ರ ಹೇಳುತ್ತೇನೆ. ನಿಮ್ಮ ಇಲಾಖೆ ಯಾವ ರೀತಿ ನಡೆಯುತ್ತಿದೆ ಎಂಬುವದಕ್ಕೆ ಇದನ್ನೆಲ್ಲ ಹೇಳುತ್ತಿದ್ದೇನೆ. ಪಕ್ಷದ ಆಧಾರದ ಮೇಲೆ ಪುನಃ ನಿಮ್ಮ ಆಡಳಿತ ನಡೆಯುತ್ತಿದೆ. ನಿಮ್ಮ ಅಟ್ರಾಸಿಟೀಸ್ ನಿಲ್ಲಬೇಕು. ಪಕ್ಷದ ಆಧಾರದ ಮೇಲೆ ನಾವು ಮಾಡುವುದಿಲ್ಲವೆಂದು

ಹೇಳಿದ್ದೀರಿ. ಅದು ಸತ್ಯವೆಂದು ಗೊತ್ತಾಗಬೇಕು. ಇವತ್ತಿಗೂ ಪೋಲೀಸ್ ಸ್ಟೇಷನ್‌ನಲ್ಲಿ ಹಿಂಸೆ ಕೊಡುತ್ತಾರೆ, ಹೊರಗಡೆಯೂ ಕೊಡುತ್ತಾರೆ. ಪೋಲೀಸರಿಂದ ಮತ್ತು ನಿಮ್ಮ ಬೆಂಬಲಿಗರಿಂದ ಹಿಂಸೆ ನಡೆಯುತ್ತಿದೆ. ಇದೇ ರೀತಿ ನೀವು ಮುಂದುವರಿಸುವುದಾದರೆ ನಾನು ಸ್ಪಷ್ಟವಾಗಿ ಎಚ್ಚರಿಕೆ ಕೊಡುತ್ತೇನೆ, ಒಳ್ಳೆಯ ರೀತಿಯಲ್ಲಿ ಆಡಳಿತ ನಡೆಸಬೇಕು ಎಂದು. ಮಾನ್ಯ ರಾಚಯ್ಯನವರು ನಿಷ್ಪಕ್ಷಪಾತವಾಗಿ, ರಾಜಕಾರಣ ರಹಿತವಾಗಿ ಆಡಳಿತ ನಡೆಸುತ್ತಾರೆಂದು ಭಾವಿಸಿದ್ದೆ. ಆದರೆ ಈಗ ಆ ನಂಬಿಕೆ ಸಂಪೂರ್ಣವಾಗಿ ಹೊರಟು ಹೋಗಿದೆ. ಇದೇ ರೀತಿ ಇನ್ನು ಕೆಲವು ವರ್ಷಗಳವರೆಗೆ ನಿಮ್ಮ ಕೈಯಲ್ಲಿ ಆಡಳಿತವನ್ನು ಬಿಟ್ಟರೆ ಏನಾಗಬಹುದು? ಬರೀ ಪ್ರಾಮಾಣಿಕತೆ ಇದ್ದರೆ ಸಾಲದು ಆಡಳಿತ ನಡೆಸುವ ಚಾಕಚಕ್ಯತೆಯೂ ಬೇಕು. ಈ ಸಂದರ್ಭದಲ್ಲಿ ಒಂದು ಕಥೆಯು ನೆನಪಾಗುತ್ತದೆ. ಅದೇನೆಂದರೆ ಒಂದು ಹಳ್ಳಿಯಲ್ಲಿ ಒಬ್ಬರು ಛೇರ್ಮನ್ ಇದ್ದರಂತೆ, ಅವರ ಹತ್ತಿರ ೩೦೦ ಚಿಲ್ಲರೆ ಹಣ ಇತ್ತಂತೆ.

ಶ್ರೀ ವೀರಣ್ಣ.—ಎಷ್ಟೋ ಸಾರಿ ಹೇಳಿದ್ದೀರಿ. ಹೇಳಿದ್ದನ್ನೇ ಹೇಳಿ ಏನು ಪ್ರಯೋಜನ?

ಶ್ರೀ ಎಸ್. ಬಂಗಾರಪ್ಪ.—ನಾನು ಏನು ಹೇಳಿದ್ದೇನೆ, ಹೇಳಿ ನೋಡೋಣ.

ಶ್ರೀ ವೀರಣ್ಣ.—ಅವನ ಹತ್ತಿರ ೩೦೦ ರೂಪಾಯಿ ಇತ್ತಂತೆ. ಅದನ್ನು ಖರ್ಚು ಮಾಡಿದರೆ ಏನಾಗುತ್ತದೋ ಏನೋ ಎಂದು ಕೊನೆಯವರೆಗೆ ಹಾಗೆಯೇ ಆ ೩೦೦ ರೂಪಾಯಿಗಳನ್ನು ಇಟ್ಟು ಕೊಂಡಿದ್ದನಂತೆ.

ಶ್ರೀ ಎಸ್. ಬಂಗಾರಪ್ಪ.—ನಿಜವಾಗಿ ಒಳ್ಳೆಯದು. ಮಾನ್ಯ ವೀರಣ್ಣನವರು ತಮ್ಮ ಭಾಷಣದಲ್ಲಿ ಹೇಳಿದರೆ ಕೇಳದೆ ಇರುವ ಜನರಿಗೆ ಅನುಕೂಲವಾಗುತ್ತದೆ. ಆ ಛೇರ್ಮನ್ನರು ೩೦೦ ಚಿಲ್ಲರೆ ಹಣವನ್ನು ಹಾಗೇ ಇಟ್ಟಿದ್ದರು, ಹಣವನ್ನು ಹಾಳು ಮಾಡಲಿಲ್ಲ. ಹಾಗೇ ಇದೆ ನಿಮ್ಮ ಪ್ರಾಮಾಣಿಕತೆ ಕೂಡ. ನಿಮ್ಮ ಪ್ರಾಮಾಣಿಕತನ ಕರ್ತವ್ಯದಲ್ಲಿ ಸ್ಪಷ್ಟವಾಗಿ ಬರಬೇಕು. ಆಗ ಮಾತ್ರ ನಿಮ್ಮ ಪ್ರಾಮಾಣಿಕತನಕ್ಕೆ ಬೆಲೆ ಇರುತ್ತದೆ. ಇಲ್ಲದಿದ್ದರೆ ಪ್ರಾಮಾಣಿಕತನಕ್ಕೆ ಬೆಲೆ ಬರುವುದಿಲ್ಲ. ಇದಕ್ಕೆ ಸಂಬಂಧಪಟ್ಟಂತಾಗೆ ಅನೇಕ ವಿಚಾರಗಳು ಇವತ್ತು ಬಂದಿವೆ. ಸಬ್ ಇನ್ಸ್‌ಪೆಕ್ಟರ್ ವಿಚಾರವನ್ನು ಮತ್ತೆ ಬೆಳೆಸುವುದಕ್ಕೆ ಹೋಗುವುದಿಲ್ಲ. ಎಲ್ಲಾ ಅಧಿಕಾರಿಗಳು ಕೆಟ್ಟವರೆಂದು ಹೇಳುವುದಿಲ್ಲ, ಒಳ್ಳೆಯವರೂ ಇದ್ದಾರೆ. ಒಳ್ಳೆಯ ಅಧಿಕಾರಿಗಳಿಗೆ ಶಹಭಾಸ್‌ಗಿರಿ ಕೊಡುತ್ತೇನೆ. ಆದರೆ ಹೆಚ್ಚಿಗೆ ಜನ ಪ್ರಾಮಾಣಿಕತನದಿಂದ ಕೆಲಸ ಮಾಡುತ್ತಿಲ್ಲವೆಂಬುದು ತಮಗೂ ಗೊತ್ತಿದೆ. ಪ್ರಾಮಾಣಿಕವಾಗಿ ಕೆಲಸ ಮಾಡತಕ್ಕ ಮನೋಭಾವವನ್ನು ಅವರು ಇಟ್ಟುಕೊಂಡಿಲ್ಲ. ಅದಕ್ಕಾಗಿ ಕೇಸುಗಳ ಸಂಖ್ಯೆ ಜಾಸ್ತಿಯಾಗುತ್ತದೆ. ಸಬ್ ಇನ್ಸ್‌ಪೆಕ್ಟರ್ ಪೋಸ್ಟ್‌ಗಳನ್ನು ಜಾಸ್ತಿ ಮಾಡುತ್ತೇವೆ. ಪೋಲೀಸ್ ಇನ್ಸ್‌ಪೆಕ್ಟರ್‌ಗಳ ಹುದ್ದೆಗಳನ್ನು ಜಾಸ್ತಿ ಮಾಡುತ್ತೇವೆಂದರೆ ಕೇಸುಗಳ ಸಂಖ್ಯೆ ಇಳಿಮುಖವಾಗುವುದಿಲ್ಲ, ಆಡಳಿತ ಯಂತ್ರವನ್ನು ಸರಿಯಾಗಿ ತೆಗೆದುಕೊಂಡು ಹೋಗದಿದ್ದರೆ ಕೇಸುಗಳ ಸಂಖ್ಯೆ ಜಾಸ್ತಿಯಾಗುತ್ತವೆ. ಬರೀ ಹೇಳಿಕೆ–ನಂಬಿಕೆಯಿಂದ ಅನಾಹುತಗಳು ಜಾಸ್ತಿಯಾಗುತ್ತವೆ. ಚುರುಕಾದ ಆಡಳಿತ ಯಂತ್ರ ಇರಬೇಕು. ಇಲ್ಲದಿದ್ದರೆ ಅದು ಅಲ್ಲೇ ನಿಲ್ಲುತ್ತದೆ. ಕೆಲವು ಜನ ಸತ್ತು ಹೋಗಿರತಕ್ಕ ಕೇಸುಗಳನ್ನು ಸಿ.ಒ.ಡಿ.ಗೆ ವಹಿಸಿದ ಮೇಲೆ ರುಜುವಾತಾಗಿವೆ. ಎಷ್ಟೋ ಕೇಸುಗಳನ್ನು ಹಿಡಿಯುವುದಕ್ಕೆ ಆಗಿಲ್ಲವೆಂಬುದು ಅಂಕಿಅಂಶಗಳಿಂದ ಗೊತ್ತಾಗುತ್ತದೆ. ಈ ಸಂದರ್ಭದಲ್ಲಿ ಒಂದು ಉದಾಹರಣೆ ಹೇಳುವುದಾದರೆ, ಒಬ್ಬ ಜಯರಾಂ ಎಂಬ ಉಪನ್ಯಾಸಕರು ೩–೪ ವರ್ಷಗಳಿಂದ ಪತ್ತೆಯಿಲ್ಲ. ಅವರು ಜೀವಂತರಾಗಿದ್ದಾರೋ ಅಥವಾ ಕೊಲೆಯಾಗಿದ್ದಾರೋ ಎಂಬುದು ಗೊತ್ತಿಲ್ಲ. ಇವತ್ತಿಗೂ ಆ ಕೇಸು ಏನಾಯಿತೆಂದು ನೋಡುವುದಕ್ಕಾಗಿಲ್ಲ. ಇಂಥ ಕೇಸುಗಳು ಕರ್ನಾಟಕ ರಾಜ್ಯದಲ್ಲಿ ಬೇಕಾದಷ್ಟು ಇವೆ. ಅಷ್ಟೇ ಏಕೆ ನಿಮ್ಮ ಇಲಾಖೆಯಲ್ಲಿರತಕ್ಕವರಿಗೆ ಯಾವ ರೀತಿ ತೊಂದರೆಯಾಗುತ್ತಿದೆ ಎಂಬುದನ್ನು ನೋಡಿ. ಉಪ್ಪಾರಪೇಟೆ ಪೋಲೀಸ್ ಠಾಣೆಯಲ್ಲಿ ಕ್ರೈಂ ಬ್ರಾಂಚಿನಲ್ಲಿ ಅಶ್ವತ್ಥಪ್ಪ ಮತ್ತು ಮೆಹಬೂಬ್‌ಖಾನ್ ಎಂಬುವವರು ಹೆಡ್ ಕಾನ್ಸ್‌ಸ್ಟೇಬಲ್ ಆಗಿ ಕೆಲಸ ಮಾಡುತ್ತಿದ್ದಾರೆ. ಅವರ ಪರಿಸ್ಥಿತಿ ಏನಾಗಿದೆ ಎಂದರೆ ಮೆಹಬೂಬ್‌ಖಾನ್‌ನ ಪಕ್ಕೆಲುಬು ಮುರಿದುಹೋಗಿದೆ, ಅಶ್ವತ್ಥಪ್ಪ ಎಂಬುವವರ ಮೈಮೇಲೆ ಪೆಟ್ಟುಗಳು ಬಿದ್ದಿವೆ. ಅವರಿಗೆ ಹೊಡೆದವರು ಯಾರು? ಸಾರ್ವಜನಿಕರು ಯಾರೂ ಹೊಡೆಯಲಿಲ್ಲ. ಅಂದಾಗ ಅಲ್ಲಿರತಕ್ಕ ಪೋಲೀಸ್ ಅಧಿಕಾರಿಗಳೇ ಹೊಡೆದಿದ್ದಾರೆ. ಪೋಲೀಸ್ ಅಧಿಕಾರಿಗಳು ಅವರ ಇಲಾಖೆಯ ಕ್ರೈಂ ಬ್ರಾಂಚಿನಲ್ಲಿ ಕೆಲಸ ಮಾಡತಕ್ಕವರಿಗೆ ಹೊಡೆದಿದ್ದಾರೆ. ಇಲಾಖೆಯವರ ಪರಿಸ್ಥಿತಿಯೇ ಈ ರೀತಿಯಾದರೆ ಉಳಿದ ಜನಸಾಮಾನ್ಯರ ಗತಿ ಏನು? ಈ ಬಗ್ಗೆ ಸದನದಲ್ಲಿ ಕೂಡ ಪ್ರಸ್ತಾಪವಾಗಿದೆ. ಸ್ವಾಮಿರಾವ್ ಅಥವಾ ಯಾರೋ ಒಬ್ಬರು ಸದಸ್ಯರು ಪ್ರಸ್ತಾಪ ಮಾಡಿರಬೇಕು. ಇದನ್ನು ನಿಮ್ಮ ಪಕ್ಷದ ಸದಸ್ಯರು ಕಂಡಿದ್ದಾರೆ. ಇದಕ್ಕೆ ಕಾರಣವೇನು? ಅವರನ್ನು ಏತಕ್ಕೆ ಹೊಡೆದಿದ್ದಾರೆ.

ಮಾಮೂಲು ವಸೂಲ್ಮಾಡಲಿಲ್ಲವೆಂದು ಹೊಡೆದಿದ್ದಾರೆಯೆ? ಕೋಟಾ ನೋಟ್ ಮಾಡಿ ಹಣ ತರದೆ ಇದ್ದುದಕ್ಕೆ ಹೊಡೆದಿದ್ದಾರೆಯೆ? ಇಲ್ಲ. ನಮ್ಮ ನಿಮ್ಮ ತಪ್ಪುಗಳು ಒಂದು ಕಡೆ ಇರಲಿ. ಅಲ್ಲಿ ಪೋಲೀಸರು ಪೋಲೀಸರ ವಿರುದ್ಧವೇ ಕಂಪ್ಲೈಂಟ್ ಮಾಡಿದ್ದಾರೆ. ಆ ಬಗ್ಗೆ ಇಲ್ಲಿಯೂ ಕೂಡ ಪ್ರಸ್ತಾಪವಾಗಿದೆ. ಅಧಾರದಮೇಲೆ ಬೆಳಗಾಂನಲ್ಲಿ ಕೇಸ್ ರಿಜಿಸ್ಟರ್ ಮಾಡಿದ್ದಾರೆ. ಸೆಕ್ಷನ್ ೧೪೩–೧೪೭–೧೨೩–೧೨೪ ಮೇಲೆ ಆ ಹೆಡ್ ಕಾನ್‌ಸ್ಟೇಬಲ್‌ಗಳ ವಿರುದ್ಧ ಕೇಸನ್ನು ದಾಖಲು ಮಾಡಿದ್ದಾರೆ. ಕ್ರೈಂ ನಂಬರ್ ಕೂಡ ಈಗಾಗಲೇ ಗೊತ್ತಾಗಿ ಮೆಹಬೂಬ್‌ಖಾನ್ ಮತ್ತು ಅಶ್ವತ್ಥಪ್ಪ ಎಂಬುವವರ ಮೇಲೆ ಕೇಸ್ ರಿಜಿಸ್ಟರ್ ಆಗುವುದಕ್ಕೆ ಸಿದ್ಧತೆ ನಡೆಯುತ್ತಿದೆ. ಏತಕ್ಕೆಂದರೆ ಅಸೆಂಬ್ಲಿಯಲ್ಲಿ ವಿಚಾರ ಬಂತಲ್ಲ ಎಂದು. ಪೋಲೀಸ್ ಇಲಾಖೆಯಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳ ಬಗ್ಗೆ ಈ ರೀತಿಯಾದರೆ ಜನಸಾಮಾನ್ಯರ ವಿಚಾರ ಏನಾದೀತೆಂಬುದನ್ನು ನಾವು ಗಮನಿಸಬೇಕು. ಇಲ್ಲಿ ಅನೇಕ ಸುಳ್ಳು ಸರ್ಟಿಫಿಕೇಟ್‌ಗಳು, ಟ್ರೇಡ್ ಸರ್ಟಿಫಿಕೇಟ್ಸ್, ಪೋಲೀಸ್ ಹಿಡಿತಕ್ಕೋಸ್ಕರ ಫ್ಯಾಕ್ಟರ್ಸ್ ಎಲ್ಲ ಬರುತ್ತವೆ. ಇವತ್ತಿಗೂ ಕೂಡ ಒಬ್ಬ ಸಬ್ ಇನ್ಸ್‌ಪೆಕ್ಟರ್ ಮೇಲೆ ಕ್ರಮ ಕೈಗೊಳ್ಳುವುದಕ್ಕೆ ನಿಮ್ಮಿಂದ ಆಗಿಲ್ಲ. ಕುದುರೆಮೋತಿ ಮತ್ತೊಂದು ಪ್ರಕರಣಗಳು ಬಂದಾಗ ನಾವು ಡಿಮಾಂಡ್ ಮಾಡಿದ ಮೇಲೆ ಕ್ರಮ ಕೈಗೊಂಡಿದ್ದೀರಿ. ಹೆಣ್ಣುಮಕ್ಕಳ ಮಾನಭಂಗ ಆದ ಸಂದರ್ಭದಲ್ಲಿ ಸದನದಲ್ಲಿ ನಾವು ಒತ್ತಾಯ ಮಾಡಿದ ಮೇಲೆ ಸಸ್ಪೆಂಡ್ ಮಾಡಿದಿರಿ. ನೀವಾಗಿ ಏನು ಮಾಡಲಿಲ್ಲ. ನಿಮಗೆ ಆ ಪ್ರಜ್ಞೆಯೇ ಬರಲಿಲ್ಲ. ಅಸೆಂಬ್ಲಿ ಇರುವ ಹೊತ್ತಿಗೆ ಇಲ್ಲಿ ಕುಳಿತು ಭಾಷಣ ಮಾಡಿದೆವು, ಇಲ್ಲದಿದ್ದರೆ ಬೀದರ್‌ಗೆ ಹೋಗಿ ಭಾಷಣ ಮಾಡಿ ಬರಬೇಕಾಗಿತ್ತು. ಪೋಲೀಸ್ ಕಂಪ್ಲೈಂಟ್ ಕೊಟ್ಟರೂ ಕ್ರಮ ಕೈಗೊಳ್ಳದಿದ್ದರೆ ಏನರ್ಥ? ನೀವು ಆ ಅಧಿಕಾರಿಗಳಿಗೆ ಹೆದರಿಕೊಂಡು ಅವರ ಮೇಲೆ ಕೇಸ್ ಹಾಕಿಲ್ಲ ವೆಂದು ಕಾಣುತ್ತದೆ. ಒಳ್ಳೆಯ ಅಧಿಕಾರಿಗಳಿಗೆ ಬೆಂಬಲ ಕೊಡಿ, ಮೆಡಲ್ ಕೊಡಿ, ಸರ್ಟಿಫಿಕೇಟ್ ಕೊಡಿ, ನನಗೆ ಸಂತೋಷ. ಆದರೆ ಕೆಟ್ಟ ಅಧಿಕಾರಿಗಳು ಇದ್ದಾಗ ತಕ್ಷಣ ಅವರ ಮೇಲೆ ಉಗ್ರ ಕ್ರಮ ಕೈಗೊಳ್ಳದಿದ್ದರೆ ತತ್ಪರಿಣಾಮ ಸಾರ್ವಜನಿಕರಿಗೆ ಆಗುತ್ತದೆ. ಈ ಒಂದು ಪ್ರಜ್ಞೆ ಸರ್ಕಾರದಲ್ಲಿ ಇರಬೇಕು. ಇಲ್ಲದಿದ್ದರೆ ಅಂಥ ಆಡಳಿತ ಅರ್ಥಹೀನ, ಬಲಹೀನ, ಅದಕ್ಕೆ ೫ ಪೈಸೆ ಬೆಲೆ ಬರುವು ದಿಲ್ಲ. ಈ ಸಂದರ್ಭದಲ್ಲಿ ಕೇಸುಗಳಿಗೆ ಸಂಬಂಧಪಟ್ಟ ಒಂದು ದೊಡ್ಡ ಪಟ್ಟಿಯೇ ಇದೆ. ಅದರಲ್ಲಿ ಮಾಲ್‌ಸ್ಟೇಷನ್ ಕೇಸುಗಳು ಇವೆ. ಈ ಬಗ್ಗೆ ತಮ್ಮ ಉಡುಪಿ ತಾಲ್ಲೂಕಿನ ವಿಚಾರ ಹೇಳಬೇಕೆಂದರೆ ಒಂದು ಡೆಟಾಡಿ ಕೇಸು ಜುಲೈ ೧೪ರ ಉದಯವಾಣಿ ಪತ್ರಿಕೆಯಲ್ಲಿ ಬಂದಿದೆ. ಕಂಪ್ಲೈಂಟ್ ಯಾರು ಕೊಟ್ಟರು ಎಂದು ಗೊತ್ತಿದೆ. ಇದರಲ್ಲಿ ಕಂಪ್ಲೈಂಟ್ ಬದಲಾವಣೆಯಾಗಿದೆ. ದರೋಡೆ ಮಾಡು ವುದಕ್ಕೂ ಬಾವಿಯಲ್ಲಿ ಹೆಣ ಸಿಗುವುದಕ್ಕೂ ಪರಸ್ಪರ ಸಂಬಂಧ ಇದೆ ಎಂದು ಬಂದಿದೆ. ಕಪ್ಪು ಉಡುಪು ಧರಿಸಿ ಕೈಯಲ್ಲಿ ಬಂದೂಕು ಹಿಡಿದುಕೊಂಡು ಮುಖವಾಡ ಧರಿಸಿದ್ದವರಿಂದ ದರೋಡೆ ನಡೆಯಿತು. ಒಬ್ಬರು ಸತ್ತು ಹೋದರು. ಆದ್ದರಿಂದ ನಾನು ಈ ವಿಚಾರದಲ್ಲಿ ವಿವರಕ್ಕೆ ಹೋಗು ವುದಿಲ್ಲ. ಏಕೆಂದರೆ ಇನ್‌ವೆಸ್ಟಿಗೇಷನ್ ಮತ್ತೊಂದು ಬರಬಹುದು. ಮೊದಲು ಅಲ್ಲಿರತಕ್ಕ ವಿಚಾರಕ್ಕೂ ಮತ್ತು ಕಂಪ್ಲೈಂಟ್ ಕೊಟ್ಟದ್ದಕ್ಕೂ ವ್ಯತ್ಯಾಸ ಇದೆ. ಒಂದು ಪಕ್ಷದ ಮುಖಂಡರು ಭಾಗವಹಿಸಿದ್ದರಿಂದ ಕಂಪ್ಲೈಂಟ್ ಬದಲಾವಣೆಯಾಗಿ ಹೋಯಿತು. ಚಿಲಕ ಮುರಿದರು ಮುಂತಾದ ವಿಚಾರಗಳೆಲ್ಲ ಬಂದವು. ಮೊದಲನೇ ವಿಚಾರ ಎಲ್ಲಿಗೆ ಹೋಯಿತು? ಸತ್ತುಹೋಗಿರತಕ್ಕ ವ್ಯಕ್ತಿಯ ಸಂಪೂರ್ಣ ವಿವರಗಳನ್ನೆಲ್ಲ ಕೊಟ್ಟಿದ್ದೇನೆ. ಅದರ ಫೋಟೋಸ್ಟ್ಯಾಟ್ ಕಾಪಿ ನನ್ನ ಹತ್ತಿರ ಇದೆ. ಆ ಕಾಪಿ ತಮಗೂ ಬಂದಿದೆ. ಶಾಸನ ಸಭೆಯಲ್ಲಿ ಈಗಾಗಲೇ ಪ್ರಸ್ತಾಪವಾಗಿದೆ ಎಂದು ಅಂದುಕೊಂಡಿ ದ್ದೇನೆ. ಇಲ್ಲದಿದ್ದರೆ ಇವತ್ತು ಚರ್ಚೆಯಾಗುತ್ತದೆ ಎಂಬ ದೃಷ್ಟಿಯಿಂದ ಹಾಗೇ ಇಟ್ಟುಕೊಂಡಿರ ಬೇಕೆಂದು ಭಾವಿಸಿದ್ದೇನೆ. ಮಾನ್ಯ ಸಭಾಧ್ಯಕ್ಷರೆ, ಯಾವ ಮಟ್ಟಕ್ಕೆ ಈ ಒಂದು ಆಡಳಿತ ಹೋಗಿದೆ ಎಂದರೆ ದುರ್ಬಲ ವರ್ಗಕ್ಕೂ ರಕ್ಷಣೆ ಇಲ್ಲ, ಯಾವುದೇ ವರ್ಗಕ್ಕೂ ರಕ್ಷಣೆ ಇಲ್ಲ. ಆದರೆ ಶಕ್ತಿವಂತ ಜನರಿಗೆ ನಿಮ್ಮ ಪೋಲೀಸ್ ಇಲಾಖೆಯಲ್ಲಿ ಸ್ಪಷ್ಟವಾದ ರಕ್ಷಣೆ ಸಿಕ್ಕಿದೆ. ಇದು ನಿರ್ವಿವಾದ. ಕಾಳ ಸಂತೆಕೋರರು, ಅಕ್ರಮ ದಾಸ್ತಾನುಗಾರರ ಜೊತೆ ಸಮಾಜದಲ್ಲಿರತಕ್ಕ ಶಕ್ತಿವಂತ ಜನ ಸ್ಪಷ್ಟವಾದ ರಕ್ಷಣೆಯನ್ನು ಪಡೆದಿದ್ದಾರೆ ಎಂಬುದು ನಿಮ್ಮ ಆಡಳಿತದಿಂದ ಗೊತ್ತಾಗಿದೆ. ಕೆಲವೊಮ್ಮೆ ಅಭಿಪ್ರಾಯಗಳು ಬೇರೆ ಬೇರೆ ಬರುತ್ತವೆ. ಈಗಿರತಕ್ಕ ಕಾನೂನು ಸರಿಯೋ ಅಲ್ಲವೋ ಎಂಬ ಬಗ್ಗೆ ಅಭಿಪ್ರಾಯಗಳು ಬರುತ್ತವೆ. ಬೆಂಗಳೂರು ನಗರದ ಪೋಲೀಸ್ ಕಮೀಷನರ್ ಅವರು ಈ ಬಗ್ಗೆ ದಿನಾಂಕ ೮–೭–೮೫ರ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಬಂದಿದೆ. ಅದನ್ನು ನಾನು ಓದಿ ಹೇಳುತ್ತೇನೆ. ಈ ರೀತಿ ಇದೆ:

> "Mr. Harlankar said that the existing laws had become totally inadequate to face challenges posed by new maphia operators, smugglers and goondas."

ಎಂದು ಕಾನೂನು ಪ್ರಕಾರ ಕಾರ್ಯಕ್ರಮ ಹಾಕುವುದಕ್ಕೆ ಸಾಧ್ಯವಿದೆ. ಆದರೂ ಕೂಡ ಕಾನೂನಿನ ಬಗ್ಗೆ ಕೆಲವೊಮ್ಮೆ ಪೋಲೀಸ್ ಅಧಿಕಾರಿಗಳೂ ಕೂಡ ಅನುಮಾನಗಳನ್ನು ವ್ಯಕ್ತಪಡಿಸುವ ಸಂಭವವಿದೆ. ಬೇರೆ ರೀತಿಯ ವ್ಯವಸ್ಥೆ ಮಾಡಿಕೊಳ್ಳದೇ ಹೋದರೆ ಮಾಫಿಯಾ ಗ್ಯಾಂಗ್, ಗೂಂಡಾಗಳು ಇಂಥ ಕಲ್‌ಪ್ರಿಟ್‌ಗಳನ್ನು ಹಿಡಿದು ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂಬ ಅಭಿಪ್ರಾಯವನ್ನು ಅವರು ಸ್ಪಷ್ಟವಾಗಿ ಹೇಳುತ್ತಿದ್ದಾರೆ. ಅಸ್ಪೃಶ್ಯತೆ ಬಗ್ಗೆ ಕರಪತ್ರಗಳ ಮೂಲಕ ಪ್ರಚಾರ ಮಾಡಿಸುತ್ತೇವೆ ಎಂದು ತಾವು ಹೇಳಿದ್ದೀರಿ. ಅನ್‌ಟಚ್‌ಬಿಲಿಟಿ ಆಕ್ಟ್ ಪ್ರಕಾರ ಶಿಕ್ಷೆ ಮಾಡುವುದಕ್ಕೆ ಕರಪತ್ರವನ್ನು ಹಂಚಿ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿರುವುದು ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿದೆ. ಆದರೆ ಇವತ್ತಿನವರೆಗೂ ಕರಪತ್ರ ಪ್ರಚಾರ ಮಾಡಿಲ್ಲ. ಅಸೆಂಬ್ಲಿಯಲ್ಲಿ ಆಗಲಿ ಹೊರಗಡೆಯಾಗಲೀ ಈ ಬಗ್ಗೆ ಕ್ರಮ ತೆಗೆದುಕೊಂಡಿರುವ ವಿಷಯ ಬಂದಿಲ್ಲ. ನಿಮ್ಮ ಹೇಳಿಕೆಯಲ್ಲೇ ಕಾರ್ಯವ್ಯಾಪ್ತಿ ನಿಂತಿದೆ. ಒಬ್ಬ ಸಬ್-ಇನ್ಸ್‌ಪೆಕ್ಟರ್ ಅವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೂಂಡಾಗಳಿಗೆ ಬಲಿಯಾದರು. ಓರ್ವ ಪೋಲೀಸ್ ಠಾಣೆಗೆ ಸೇರಿದ ಸಬ್-ಇನ್ಸ್‌ಪೆಕ್ಟರ್ ಒಬ್ಬರು ಬಲಿಯಾಗಿದ್ದಾರೆ. ಅದನ್ನು ನೋಡಿ ಮನಸ್ಸಿಗೆ ನೋವಾಯಿತು. ಕರ್ತವ್ಯನಿರತರಾದ ಒಬ್ಬ ವ್ಯಕ್ತಿ ಗೂಂಡಾಗಳ ಚಾಕು ಚೂರಿಗೆ ಬಲಿಯಾದರೆ ಯಾರೂ ಕೂಡ ಕೆಲಸ ಮಾಡುವುದಕ್ಕೆ ಧೈರ್ಯ ಬರುವುದಿಲ್ಲ. ಅಧಿಕಾರಿಗಳಿಗೆ ಕೆಲಸ ಮಾಡುವುದಕ್ಕಾಗುವುದಿಲ್ಲ. ಗೂಂಡಾಗಳ ಬೆಳವಣಿಗೆ ಯಾವ ಮಟ್ಟಕ್ಕೆ ಹೋಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆಮೇಲೆ 'ಎಸ್.ಐ.' ಕೊಲೆ, ಆರೋಪಿ ಆತ್ಮಹತ್ಯೆ'' ಎಂಬ ವಿಚಾರ ಪತ್ರಿಕೆಯಲ್ಲಿ ಬಂತು. ಉಳಿದಿರತಕ್ಕ ಎಲ್ಲ ಅಪರಾಧಿಗಳೂ ಆತ್ಮಹತ್ಯೆಯಲ್ಲೇ ಹೋಗುತ್ತಾರೇನೋ ಎಂಬ ಶಂಕೆ ನನಗೆ ಬಂದಿತ್ತು. ಆದರೆ ಕೆಲವರಂತೂ ಆತ್ಮಹತ್ಯೆ ವಿಚಾರ ಕೈಬಿಟ್ಟಿದ್ದಾರೆ ಎಂದು ಗೊತ್ತಾಯಿತು. ಅದೇನೇ ಇರಲಿ, ಮಾನ್ಯ ಸಭಾಧ್ಯಕ್ಷಿಣಿಯವರೇ, ಪೋಲೀಸರು ಹೇಗೆ ಕೆಲಸ ಮಾಡುತ್ತಿದ್ದಾರೆ ಎಂಬ ವಿಚಾರದಲ್ಲಿ ತಾವು ನೋಡಬೇಕು. ಪೋಲೀಸ್ ಇಲಾಖೆಗೆ ತಾವು ಮಂತ್ರಿಗಳು ಜಾಸ್ತಿ ಹಣ ಕೂಡ ಪಡೆದಿದ್ದೀರಿ. ೧೯೮೪-೮೫ರ ಸಪ್ಲಿಮೆಂಟರಿ ಎಸ್ಟಿಮೇಟ್ಸ್ ನೋಡಿದಾಗ ಇದು ಗೊತ್ತಾಗುತ್ತದೆ. ಸುಮಾರು ೪ ಕೋಟಿ ರೂಪಾಯಿ ಹೆಚ್ಚುವರಿ ಹಣವನ್ನು ಪಡೆದಿದ್ದೀರಿ. ಏತಕ್ಕೆ ಪಡೆದಿದ್ದೀರಿ ? ಇದು ನನಗೆ ಅರ್ಥವಾಗುತ್ತಿಲ್ಲ. ದುರಾಡಳಿತ ಕೊಡುವುದಕ್ಕಾಗಿ......

ಶ್ರೀ ಬಿ. ರಾಚಯ್ಯ.—ಚುನಾವಣೆಗಳು ಬಂತು. ಎರಡು ಚುನಾವಣೆಗಳು ಬಂದಿದ್ದರಿಂದ ಪೋಲೀಸ್ ಇಲಾಖೆಗೆ ಹೆಚ್ಚು ಖರ್ಚು ಆಗಿದೆ.

ಶ್ರೀ ಎಸ್. ಬಂಗಾರಪ್ಪ.—ಹಿಂದೆ ಕೂಡ ಚುನಾವಣೆ ನಡೆದಿದೆ, ೧೯೮೩ರಲ್ಲಿ ಕೂಡ ಚುನಾವಣೆ ನಡೆದಿದೆ. ಆದರೆ ಆಗಿನ ಸಪ್ಲಿಮೆಂಟರಿ ಎಸ್ಟಿಮೇಟ್ಸ್‌ನಲ್ಲಿ ಹೆಚ್ಚುವರಿ ಹಣ ಕಾಣಿಸಿಲ್ಲ. ತಾವು ಬೇಕಾದರೆ ತೆಗೆದು ನೋಡಿ. ೧೯೮೨-೮೩ರ ಸಪ್ಲಿಮೆಂಟರಿ ಎಸ್ಟಿಮೇಟ್ಸ್‌ನಲ್ಲಿ ಹೆಚ್ಚುವರಿ ಹಣ ತೆಗೆದುಕೊಂಡಿಲ್ಲ. ಆದರೆ ೮೪೮೫ರಲ್ಲಿ ಹೆಚ್ಚು ಏತಕ್ಕೆ ಬೇಕಾಗಿತ್ತು ಎಂಬುದು ನನಗೆ ಅರ್ಥವಾಗದಿರುವ ವಿಚಾರ. ೧೯೮೨-೮೩ರ ಸಪ್ಲಿಮೆಂಟರಿ ಎಸ್ಟಿಮೇಟ್ಸ್ ನೋಡಿದರೆ ನಿಮಗೆ ಉತ್ತರ ಸಿಗುತ್ತದೆ. ೪ ಕೋಟಿ ರೂಪಾಯಿ ಹೆಚ್ಚು ಹಣ ಪಡೆದು ಆಡಳಿತ ಯಂತ್ರವನ್ನು ಯಾವರೀತಿ ಸ್ವಚ್ಛ ಮಾಡಿದ್ದೀರಿ ? ಯಾವ ಎತ್ತರಕ್ಕೆ ಏರಿಸಿದ್ದೀರಿ ಇಲಾಖೆಯನ್ನು ? ಜನಸಾಮಾನ್ಯರಿಗೆ ಯಾವರೀತಿ ಅವರ ಹಕ್ಕುಗಳ ರಕ್ಷಣೆ ಮಾಡಿದ್ದೀರಿ ? ಮತ್ತು ಸರ್ಕಾರದ ಘನತೆ ಗೌರವವನ್ನು ಎಷ್ಟು ಹೆಚ್ಚು ಮಾಡಿದ್ದೀರಿ ಎಂಬುದನ್ನು ತಮ್ಮನ್ನು ಈ ಸಂದರ್ಭದಲ್ಲಿ ಕೇಳಬಹುದಾ ?

ಶ್ರೀ ಬಿ. ರಾಚಯ್ಯ.—ಓಎಸ್.

ಶ್ರೀ ಎಸ್. ಬಂಗಾರಪ್ಪ.—೪ ಕೋಟಿ ರೂಪಾಯಿ ಕೊಡೋಣ. ನಿಜವಾಗಿ ಕಾರಣ ಇದ್ದರೆ, ಸರಿಯಾದ ಕಾರಣ ಹೇಳಿದರೆ ೪ ಕೋಟಿ ಅಲ್ಲ ಇನ್ನೂ ೨ ಕೋಟಿ ಬೇಕಾದರೂ ತೆಗೆದುಕೊಳ್ಳಿ. ಆದರೆ ತಮ್ಮ ಆಡಳಿತ ನೋಡಿದರೆ ಆಡಳಿತ ಯಂತ್ರ ಈಗಾಗಲೇ ಹಾಳಾಗಿದ್ದು ಇನ್ನೂ ಹಾಳಾಗುವುದಕ್ಕೆ ಜನಸಾಮಾನ್ಯರ ತೆರಿಗೆ ಹಣವನ್ನು ದುರುಪಯೋಗಪಡಿಸಿಕೊಂಡಿರುವುದು ಅರ್ಥವಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಮಂತ್ರಿಗಳು ಬಹಳ ಸ್ವಾರಸ್ಯವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಶ್ರೀಮಾನ್ ಬಂಗಾರಪ್ಪನವರು ೪ ಕೋಟಿ ರೂಪಾಯಿ ಹೆಚ್ಚುವರಿ ಹಣವನ್ನು ಖರ್ಚು ಮಾಡಿರುವುದು ಸಪ್ಲಿಮೆಂಟರಿ ಎಸ್ಟಿಮೇಟ್ಸ್‌ನಲ್ಲಿ ತೋರಿಸಿದ್ದೀರಿ, ಇದು ಅನಾವಶ್ಯಕ, ಇದನ್ನು ಹಿಂದೆ ಯಾರೂ ಮಾಡಿರಲಿಲ್ಲ ಎಂದು ಹೇಳಿದ್ದಾರೆ. ಅದಕ್ಕೆ ಮಂತ್ರಿಗಳು ಚುನಾವಣೆ ಬಂತು, ಅದಕ್ಕೋಸ್ಕರ ಮಾಡಿದ್ದೇವೆ ಎಂದು ಹೇಳಿದರು. ಅದರ ಅರ್ಥ ಏನೆಂದರೆ ಈ ಹಣವನ್ನು ಪೋಲೀಸ್ ಮುಖಾಂತರ ಚುನಾವಣೆಯಲ್ಲಿ ಗೆಲ್ಲುವುದಕ್ಕೆ ಉಪಯೋಗಿಸಿದ್ದೇವೆ ಎಂದು ಆಗುತ್ತದೆ.

ಶ್ರೀ ಬಿ. ರಾಚಯ್ಯ.—ಪ್ರಧಾನ ಮಂತ್ರಿಗಳು ಬಂದಿದ್ದರು. ಅವರಿಗೆ ರಕ್ಷಣೆ ವ್ಯವಸ್ಥೆ ಮಾಡ ಬೇಕಾಗುತ್ತದೆ. ಅವರು ಚುನಾವಣಾ ಪ್ರಚಾರ ಭಾಷಣಕ್ಕೆ ಬಂದಿದ್ದಾಗ ಅವರ ರಕ್ಷಣೆ ವ್ಯವಸ್ಥೆ ಮಾಡತಕ್ಕದ್ದು ನಮ್ಮ ಜವಾಬ್ದಾರಿ. ಎಲ್ಲೆಲ್ಲಿ ಎಷ್ಟು ಖರ್ಚಾಯಿತು ಎಂಬ ವಿವರ ಕೊಡುತ್ತೇನೆ. ಅದನ್ನೆಲ್ಲಾ ಹೇಳಬಾರದು ಎಂದು ಚುನಾವಣೆ ದೃಷ್ಟಿಯಿಂದ ಖರ್ಚಾಯಿತು ಎಂದು ಹೇಳಿದೆ. ಎಲ್ಲದಕ್ಕೂ ಆಮೇಲೆ ಉತ್ತರ ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೆ, ೧೯೭೬ರಲ್ಲಿ ಕೂಡ ಪ್ರಧಾನಮಂತ್ರಿಗಳು ಬಂದಿದ್ದರು. ಆಗ ಏತಕ್ಕೆ ಕೇಳಲಿಲ್ಲ ? ಆಗ ಹೆಚ್ಚುವರಿ ಹಣವನ್ನು ಏತಕ್ಕೆ ಕೇಳಲಿಲ್ಲ ?

ಶ್ರೀ ಬಿ. ರಾಚಯ್ಯ.—ಆಮೇಲೆ ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ದಾಖಲೆಯಲ್ಲೇ ಉತ್ತರ ಇದೆ. ನನಗೆ ಗೊತ್ತು ಹೇಗೆ ಹಣ ಖರ್ಚಾಗಿದೆ ಎಂಬುದಕ್ಕೆ ಉದಾಹರಣೆ ಕೊಡುತ್ತೇನೆ. ಕಾರವಾರ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನಲ್ಲಿ ೨೦೦ ಜನ ಅಮಾಯಕರ ಕೊರಳಿಗೆ ಸ್ಲೇಟ್‌ನಲ್ಲಿ ನಂಬರ್ ಹಾಕಿ ಫೋಟೋ ತೆಗೆಸಿ ಮೆರವಣಿಗೆ ಮಾಡಿದ್ದಾರೆ. ಅವರು ಹಳ್ಳಿಯಲ್ಲಿ ಮರ್ಯಾದೆಯಿಂದ ಜೀವನ ಮಾಡುವವರು. ಕೆಟ್ಟವರು ಯಾರಾದರೂ ಇದ್ದರೆ ಕೇಸ್ ಹಾಕಿ. ಬೇಡ ಎಂದು ಹೇಳುವುದಿಲ್ಲ, ಕಾರವಾರ ಎಸ್. ಪಿ. ಯವರಿಗೆ ನಾನು ಫೋನ್ ಮಾಡಿ ಈ ವಿಚಾರದಲ್ಲಿ ಮಾತನಾಡಿದ್ದೇನೆ. ಅವರ ಕೊರಳಿಗೆ ಸ್ಲೇಟಿನಲ್ಲಿ ನಂಬರ್ ಬರೆದು ಹಾಕಿ ಫೋಟೋ ತೆಗೆಸಿದ್ದಾರೆ. ಅದಕ್ಕೆ ಕಾರವಾರದಿಂದ ಒಂದು ವ್ಯಾನ್ ಬಂದಿದೆ. ಫೋಟೋಗ್ರಾಫರ್ ಬಂದಿದ್ದಾನೆ. ಇದಕ್ಕೆಲ್ಲಾ ಹಣ ಖರ್ಚಾಗಿದೆ. ಗೋಪಾಲ ಕಾನಡೆಯವರಿಗೆ ಬೆಂಬಲ ಕೊಟ್ಟರು ಎಂಬ ಕಾರಣಕ್ಕಾಗಿ ಆ ರೀತಿ ಮಾಡಿದ್ದಾರೆ. ಇದು ಪಕ್ಷದ ರಾಜಕಾರಣವಾಗುವುದಿಲ್ಲವೆ ? ೬೦೦ ಜನರ ಪಟ್ಟಿ ಮಾಡಿದ್ದಾರೆ. ಅದು ನನ್ನ ಪಕ್ಕದ ತಾಲ್ಲೂಕಾದ್ದರಿಂದ ಅಲ್ಲಿನ ಜನರು ನನಗೆ ಗೊತ್ತು. ೧೦–೨೦ ಜನರು ಗೊತ್ತಿಲ್ಲದೇ ಇರಬಹುದು. ಆದರೆ ಬಹುತೇಕ ಜನರು ಗೊತ್ತಿದ್ದಾರೆ. ೨೦೦ ಜನರ ಕೊರಳಿಗೆ ಸ್ಲೇಟ್ಸ್ ಹಾಕಿ ಮೆರವಣಿಗೆ ಮಾಡಿ ಫೋಟೋ ತೆಗೆಸಿದ್ದಾರೆ. ಅವರು ಕ್ರಿಮಿನಲ್ಸಾ ? ಮರ್ಡರ್ ಮಾಡಿದ್ದಾರಾ ? ನಿಮ್ಮ ಹಣೆಬರಹಕ್ಕೆ ಮರ್ಡರ್ ಮಾಡಿರುವವರನ್ನು ಹಿಡಿಯುವುದಕ್ಕಾಗುವುದಿಲ್ಲ ಅವರನ್ನೇನು ಗೂಂಡಾಗಳು ಎಂದು ತಿಳಿದುಕೊಂಡಿದ್ದೀರಾ ನಿಮಗೆ ನಾಚಿಕೆ ಬರಬೇಕು. ಅನ್ಯಾಯವಾಗಿ ಬಡವರನ್ನು ಕೂಲಿಕಾರರನ್ನು, ಬಡ ಗೇಣಿದಾರರನ್ನು ತೆಗೆದುಕೊಂಡು ಕೊರಳಿಗೆ ಸ್ಲೇಟ್ ಹಾಕಿಸಿ ಫೋಟೋ ಏತಕ್ಕೆ ತೆಗೆಸಿದಿರಿ ? ಏತಕ್ಕೆಂದರೆ ಹೆಗಡೆಯವರ ಅಣ್ಣಂದಿರು ಇರತಕ್ಕ ಊರು ಸಿದ್ದಾಪುರ ತಾಲ್ಲೂಕು. ಅಲ್ಲಿ ಜನತಾ ಪಕ್ಷವನ್ನು ಸೋಲಿಸಿದರು ಎಂಬ ಕಾರಣಕ್ಕಾಗಿ ಹೀಗೆ ಮಾಡಿದ್ದಾರೆ ಎಂದು ಬಹಿರಂಗವಾಗಿ ಚರ್ಚೆಯಾಗಿದೆ. ಪಬ್ಲಿಕ್‌ಗೂ ಗೊತ್ತಾಗಿದೆ. ಏನೂ ಕಾರಣವಿಲ್ಲದೆ ೨೦೦ ಜನರಿಗೆ ಕೊರಳಿಗೆ ಸ್ಲೇಟ್ ಹಾಕಿಸಿ ಫೋಟೋ ತೆಗೆಸಿ ಪೋಲೀಸ್ ಸ್ಟೇಷನ್‌ನಲ್ಲಿ ಇಡತಕ್ಕ ಮಟ್ಟಕ್ಕೆ ಹೋದರೆ ರಾಚಯ್ಯನವರಿಗೆ ಬೇರೆ ಹೆಸರು ಇಡಬೇಕಾಗುತ್ತದೆ. ನಿರಪರಾಧಿಗಳಿಗೆ ಕ್ರಿಮಿನಲ್ಸ್ ಎಂದು ಫೋಟೋ ಹಾಕತಕ್ಕ ಪರಿಸ್ಥಿತಿ ಬಂದರೆ ಈ ಸದನದಲ್ಲಿ ಬೇರೆ ರೀತಿಯಲ್ಲಿ ಕಾರ್ಯಕಲಾಪ ನಡೆಸಬೇಕಾಗುತ್ತದೆ. ಮೊದಲೇ ಇದನ್ನು ಪ್ರಸ್ತಾಪ ಮಾಡಬೇಕೆಂದಿದ್ದರೂ ವಿವರವಾದ ಚರ್ಚೆ ಆಗಲಿ ಎಂದು ತಡೆದುಕೊಂಡಿದ್ದೆ. ಅಲ್ಲಿಂದ ಜನರ ಒಂದು ನಿಯೋಗ ಬಂದಿತ್ತು. ನಾವೂ ಕೂಡಾ ಸಿದ್ದಾಪುರಕ್ಕೆ ಹೋಗಿ ಬಂದಿದ್ದೇವೆ. ಆ ಜನ ಅಲ್ಲಿ ಇವತ್ತು ಕಣ್ಣೀರು ಹಾಕುತ್ತಿದ್ದಾರೆ. ಅವರ ಜೀವಮಾನದಲ್ಲಿ ಒಂದೂ ಕಂಪ್ಲೈಂಟ್‌ನ್ನು ತೆಗೆದುಕೊಂಡವರು ಅವರು ಅಲ್ಲ. ಅವರ ಮೇಲೆ ಏನು ಕೇಸಸ್ ಇವೆ ? ಆ ಬಗ್ಗೆ ಏನೇನು ದಾಖಲಾತಿಗಳು ಇವೆ ಅವೆಲ್ಲವನ್ನೂ ಈ ಸದನದ ಮುಂದೆ ಇಡಿ. ಎಷ್ಟು ಕೇಸ್‌ಗಳು ರಿಜಿಸ್ಟರ್ ಆಗಿವೆ ? ಏತಕ್ಕಾಗಿ ಆ ೧೦೦ ಜನರನ್ನೂ ಅರೆಸ್ಟ್ ಮಾಡಿದ್ದೀರಿ ? ಒಬ್ಬರು ಹೇಳುತ್ತಾರೆ ; ಆ ಊರಿಗೆ ವ್ಯಾನ್ ಬರುತ್ತದೆ. ಆ ಮನೆಯವರನ್ನು ಕರೆಸಬೇಕು, ಈ ಮನೆಯವರನ್ನು ಕರೆಸಬೇಕು ಎಂದು. ಆಗ ಪೋಲೀಸಿನವರು ಹೋಗುವುದು, ಅವರನ್ನು ಹಿಡಿದುಕೊಂಡು ಬರುವುದು. ಅಲ್ಲಿ ಪ್ರಬಲವಾಗಿ ರಾಜಕಾರಣ ಮಾಡಿರತಕ್ಕ ಜನ ಇದ್ದಾರೆ ಕೆಲವು ಮುಖಂಡರನ್ನು ಸೇರಿಸಿದ್ದಾರೆ, ಇನ್ನೂ ಕೆಲವರನ್ನು ಸೇರಿಸತಕ್ಕ ಪಟ್ಟಿಯನ್ನು ತಯಾರು ಮಾಡಿಕೊಂಡಿದ್ದಾರೆ. ಇವತ್ತು ವ್ಯಾನ್ ಹೋಗುತ್ತದೆ, ಫೋಟೋಗ್ರಾಫರ್ ಹೋಗುತ್ತಾನೆ. ಇದರಿಂದ ಹಣ ದುರುಪಯೋಗ ಆಗುವುದಿಲ್ಲವೇ ? ೪ ಕೋಟಿ ರೂಪಾಯಿಗಳನ್ನು ಇಂತಹದ್ದಕ್ಕೆ ಖರ್ಚು ಮಾಡುವ ಜನರಿಗೆ ೪೦ ಕೋಟಿ ರೂಪಾಯಿಯೂ ಬೇಕಾಗುತ್ತದೆ. ಈ ರೀತಿ ತೆರಿಗೆದಾರರ ಹಣವನ್ನು ಪೋಲು ಮಾಡುತ್ತಿದ್ದೀರಿ. ಇವತ್ತು ನೀವು ಜನಸಾಮಾನ್ಯರನ್ನು, ಒಳ್ಳೆಯ ಜನರನ್ನು ಕ್ರಿಮಿನಲ್ಸ್ ಮಾಡುತ್ತಿದ್ದೀರಿ. ಒಳ್ಳೆಯ

ಜನ ಜೀವನ ಮಾಡುವುದಕ್ಕೆ ಅವಕಾಶವನ್ನು ಕೊಡಿ. ಒಳ್ಳೆಯ ವಾತಾವರಣವನ್ನು ಸೃಷ್ಟಿ ಮಾಡಿ. ಆ ಒಂದು ಶಕ್ತಿ ನಿಮಗೆ ಬರಲಾರದು. ಆ ಏರ್ಪಾಟು ನಿಮ್ಮಲ್ಲಿ ಕಾಣುತ್ತಾ ಇಲ್ಲ. ಹೀಗೆ ಮಾಡುವುದಕ್ಕೆ ನಿಮ್ಮಿಂದ ಸಾಧ್ಯವಿಲ್ಲವೆಂದು ನಾನು ತೀರ್ಮಾನ ಮಾಡಿದ್ದೇನೆ. ಇತ್ತೀಚೆಗೆ, ಸುಮಾರು ಒಂದು ತಿಂಗಳ ಹಿಂದೆ ಇದು ನಡೆದಿದೆ. ಸಿದ್ಧಾಪುರದಲ್ಲಿ ಸಂಪೂರ್ಣವಾಗಿ ಅಲ್ಲಿ ಜನ......

ಶ್ರೀ ಕೆ. ಮಲ್ಲಪ್ಪ.—ಅರಣ್ಯ ಇಲಾಖೆಯ ಅಧಿಕಾರಿಗಳ ಮೇಲೆ ನಡೆದಿರತಕ್ಕ ಹಲ್ಲೆಯ ಬಗ್ಗೆ ಅಪರಾಧಿಗಳನ್ನು ಹುಡುಕತಕ್ಕ ಪ್ರಯತ್ನವನ್ನು ಮಾಡಿರಬಹುದು ಎಂದು ನನ್ನ ಭಾವನೆ.

ಶ್ರೀ ಜಿ. ಎಂ. ಕಾನಡೆ.—ನಿಮ್ಮ ಊರಿನಲ್ಲಿ ಇನ್ನೂ ಫೋಟೋ ತೆಗೆಯುವುದಕ್ಕೆ ಚಾಲೂ ಮಾಡಿಲ್ಲ ಅಲ್ಲವೇ ?

ಶ್ರೀ ಎಸ್. ಬಂಗಾರಪ್ಪ.—ಮಲ್ಲಪ್ಪನವರೇ, ನಿಮಗೆ ಇದು ಅರ್ಥವಾಗುವುದಿಲ್ಲ. ಇವನ್ನು ಅಂದಾಜಿನ ಮೇಲೆ ಹೇಳುವುದು ಅಲ್ಲ. ನಿಮಗೂ ಒಂದು ಸ್ಲೇಟ್ ಹಾಕಿ ಫೋಟೋ ಹಿಡಿಸಿದ್ದರೆ ಏನು ಆಗುತ್ತದೆ ? ಇದು ಸೀರಿಯಸ್ ಮ್ಯಾಟರ್ ಇದೆ.

ಶ್ರೀ ಕೆ. ಮಲ್ಲಪ್ಪ.—ಇವತ್ತು ಅಧಿಕಾರಿಗಳು ಅಲ್ಲಿ ಭಯದಿಂದ ವೃತ್ತಿ ಮಾಡುತ್ತಿದ್ದಾರೆ. ಅಲ್ಲಿ ಸ್ಥಳಕ್ಕೆ ಹೋಗಿ ನೋಡೋಣ. ಅಲ್ಲಿ ಅರಣ್ಯ ಅಧಿಕಾರಿಗಳು......

ಶ್ರೀ ಎಸ್. ಬಂಗಾರಪ್ಪ.—ಸುಮ್ಮನೆ ಆರ್ಗ್ಯುಮೆಂಟ್ ಮಾಡುವುದಕ್ಕೆ ಹೋಗುವುದು ಬೇಡ. ಈ ರೀತಿ ಮಾತನಾಡುವುದು ಟೂ ಮಚ್ ಆಯಿತು.

ಶ್ರೀ ಕೆ. ಮಲ್ಲಪ್ಪ.—ನನಗೆ ಅಧಿಕೃತವಾಗಿ ತಿಳಿದ ವಿಚಾರವನ್ನು ತಿಳಿಸುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಏನು ಸಿದ್ಧಾಪುರ ತಾಲ್ಲೂಕಿನವರು ನಿಮ್ಮ ಹರಿಹರಕ್ಕೆ ಎಲ್ಲಾ ಬಂದು ಹೇಳಿಬಿಟ್ಟಿದ್ದಾರೆ. ಅಧಿಕೃತ ಎಂದರೆ ಯಾರು ? ರಾಮಕೃಷ್ಣ ಹೆಗ್ಡೆಯವರ ಅಣ್ಣನ ಮೇಲಿನವನು ಅಧಿಕೃತ. ಇದು ನನಗೆ ಗೊತ್ತಿಲ್ಲ ಎಂದು ತಿಳಿದುಕೊಂಡಿದ್ದೀರಾ ? ಇದನ್ನೆಲ್ಲಾ ಹೇಳುವುದಕ್ಕೆ ಹೋಗಬೇಡಿ. ನಮಗೆ ಎಲ್ಲಾ ಗೊತ್ತಿದೆ.

ಶ್ರೀ ಕೆ. ಮಲ್ಲಪ್ಪ.—ರಾಮಕೃಷ್ಣ ಹೆಗಡೆಯವರ ಅಣ್ಣನವರ ಪರಿಚಯ ನನಗೆ ಇಲ್ಲ.

ಶ್ರೀ ಬಿ. ರಾಚಯ್ಯ.—ಈ ಸಭೆಯಲ್ಲಿ ಇಲ್ಲದೇ ಇರತಕ್ಕವರ ಬಗ್ಗೆ ಪ್ರಸ್ತಾಪ ಮಾಡುವುದು ಬೇಡ.

ಶ್ರೀ ಎಸ್. ಬಂಗಾರಪ್ಪ.—ಅವರ ಅಣ್ಣ ಎಂದು ಹೇಳುವುದಕ್ಕೆ ರೂಲ್ಸ್‌ನಲ್ಲಿ ಎಲ್ಲಿ ಅಡ್ಡ ಬರುತ್ತದೆ ? ಹೆಸರನ್ನು ನಾವು ಇಲ್ಲಿ ತಂದಿಲ್ಲ. ನನಗೆ ಕಾನೂನು ಎಲ್ಲಾ ಗೊತ್ತಿದೆ ರಾಚಯ್ಯನವರೇ ನಾನು ಹೆಸರನ್ನು ತಂದಿಲ್ಲ, ಅಣ್ಣ ಎಂದು ಹೇಳಿದ್ದು. ಕರ್ನಾಟಕ ರಾಜ್ಯದಲ್ಲಿ ಡಂಗೂರ ಹೊಡೆದಿರತಕ್ಕ ವಿಚಾರ.

ಶ್ರೀ ಬಿ. ರಾಚಯ್ಯ.—ಏನಾದರೂ ಗೊತ್ತಿಲ್ಲದೇ ಹೇಳಿದರೆ ಅವರಿಗೆ ಗೊತ್ತಿಲ್ಲ ಎಂದು ಹೇಳಬಹುದು. ಆದರೆ ಗೊತ್ತಿದ್ದು ಮಾಡಿದರೆ ಅದು ತಪ್ಪು ಆಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ರಾಚಯ್ಯನವರೇ, ಒಂದು ಕೆಲಸ ಮಾಡೋಣ. ನೀವು ಆ ಸ್ಥಳಕ್ಕೆ ಹೋಗಿ ಬನ್ನಿ. ಇಲ್ಲಾ ನಾವೂ ನೀವೂ ಇಬ್ಬರೂ ಹೋಗಿಬರೋಣ.

ಶ್ರೀ ಬಿ. ರಾಚಯ್ಯ.—ಸಿಟ್ಟಿನಲ್ಲಿ ಮಾತನಾಡುವುದಕ್ಕೆ ನನಗೆ ಬರುವುದಿಲ್ಲ. ಏಕೆಂದರೆ, ಸಿಟ್ಟಿನಲ್ಲಿ ಮಾತನಾಡತಕ್ಕದ್ದು ಅನಾವಶ್ಯಕ. ಇಲ್ಲಿ ವಿಷಯವನ್ನು ಪ್ರತಿಪಾದಿಸಿದರೆ ಸಾಕು.

ಶ್ರೀ ಎಸ್. ಬಂಗಾರಪ್ಪ.—ಇದು ನೈಸಾಗಿ ಮಾತನಾಡತಕ್ಕ ವಿಚಾರ ಅಲ್ಲ. ನಿಮ್ಮ ಸಂತೋಷಕ್ಕೆ, ನಿಮ್ಮ ನೇರಕ್ಕೆ ಮಾತನಾಡತಕ್ಕ ವಿಚಾರ ಅಲ್ಲ. ನ್ಯಾಯ ರೀತಿಯಲ್ಲಿ ಆ ಬಗ್ಗೆ ಪ್ರಸ್ತಾಪ ಮಾಡಬೇಕಾಗುತ್ತದೆ. ಅದನ್ನು ನಾನು ಸ್ಪಷ್ಟಪಡಿಸುತ್ತೇನೆ.

ಶ್ರೀ ಬಿ. ರಾಚಯ್ಯ.—ಎಲ್ಲಾ ಟೈಮ್‌ನಲ್ಲೂ ಅಲ್ಲ. ಈ ಸಭೆಯಲ್ಲಿ ಪ್ರತಿಪಾದಿಸಿದರೆ ಸಾಕು.

ಶ್ರೀ ಎಸ್. ಬಂಗಾರಪ್ಪ.—ಈ ಬಗ್ಗೆ ನಾನು ಪ್ರತಿಪಾದನೆ ಮಾಡಬೇಕಾಗುತ್ತದೆ. ನಿಮ್ಮ ತಂಬೂರಿಗೆ ತಾಳ ಹಾಕುವುದು ಅಲ್ಲ. ನನ್ನ ರಾಗ ಯಾವುದು ಎಂಬುದನ್ನು ಸ್ಪಷ್ಟ ಮಾಡಬೇಕು. ಆ ಬಗ್ಗೆ ವಾದವನ್ನು ಮುಂಡನೆ ಮಾಡುತ್ತೇನೆ. ಆ ಒಂದು ನಿರಪರಾಧಿಗಳನ್ನು ತೆಗೆದುಕೊಂಡು ಹೋಗಿ ಆ ಒಂದು ಕೃತ್ಯವನ್ನು ಮಾಡಿರತಕ್ಕದ್ದು ವೆರಿ ಸೀರಿಯಸ್ ಮ್ಯಾಟರ್ ಇದೆ. ಎಲ್ಲರಿಗೂ ಕೂಡಾ ಇದು ಆಗುತ್ತದೆ. ನಾಳೆ ಇನ್ನೊಬ್ಬರಿಗೆ ಆಗಬಹುದು. ನಮ್ಮ ಅಧ್ಯಕ್ಷರ ಕ್ಷೇತ್ರದಲ್ಲೇ ಆಗಬಹುದು. ಆ ರೀತಿ ಸ್ಲೇಟ್ ಹಾಕಿ ಫೋಟೋ ಹಿಡಿಯತಕ್ಕ ಕೆಲಸ ಆದರೆ ಅದು ಯಾವ ಮಟ್ಟದ್ದು ಎಂದು ಹೇಳಬೇಕು.

ಶ್ರೀ ರಮೇಶ್ ಕುಮಾರ್.—೧೯೭೫ ರಿಂದ ೧೯೭೭ರವರೆಗೆ ನಾವು ಇಲ್ಲಿಗೆ ಬರಬೇಕೆಂದರೆ ಪಾಸ್ ತೋರಿಸಿ ಒಳಗೆ ಬರಬೇಕಾಗಿತ್ತು. ಎಲ್ಲಾ ಗೇಟ್‌ಗಳನ್ನು ಬಂದ್ ಮಾಡಿದ್ದರು. ಆಗ ನಾವಿಬ್ಬರೂ ಭಿನ್ನಮತೀಯರಾಗಿದ್ದೆವು. ಅವತ್ತು ನಾವಿಬ್ಬರೂ ಒಟ್ಟಿಗೆ ಇದ್ದವಲ್ಲವೇ ?

ಶ್ರೀ ಎಸ್. ಬಂಗಾರಪ್ಪ.—ಹೌದು, ಆಗಲೂ ಒಟ್ಟಿಗೆ ಇದ್ದೆವು. ಆಗಲೂ ಕೂಡಾ ರಾಚಯ್ಯನವರು, ಮತ್ತೊಬ್ಬರೂ ಕೂಡಾ......

ಶ್ರೀ ರಮೇಶ್‌ಕುಮಾರ್. ರಾಚಯ್ಯನವರು ಆಗ ಇರಲಿಲ್ಲ. ನಾನು ನಿಮ್ಮ ಜೊತೆ ಇದ್ದೆ ಎಂದು ಎಂಡಾರ್ಸ್ ಮಾಡಿದೆ.

ಶ್ರೀ ಎಸ್ ಬಂಗಾರಪ್ಪ.—ರಮೇಶ್ ಕುಮಾರ್ ಅವರೇ, ನನಗೆ ನಿಮ್ಮದು ಎಲ್ಲಾ ಗೊತ್ತಿದೆ. ಪೂರ್ತಿ ಬಿಚ್ಚು ಎಂದರೆ ನಾನು ಬಿಚ್ಚುತ್ತೇನೆ, ನಾನು ಅದಕ್ಕೆ ರೆಡಿಯಾಗಿದ್ದೇನೆ.

ಶ್ರೀ ರಮೇಶ್ ಕುಮಾರ್.—ಏನು ಬೇಕಾದರೂ ಬಿಚ್ಚಿ ನಾನು ಮುಚ್ಚಿಕೊಂಡಿದ್ದರಲ್ಲವೇ ಬಿಚ್ಚುವುದಕ್ಕೆ. ಸಂಪೂರ್ಣ ಬೆತ್ತಲೆ ಆಗಿರುವವನು ನಾನು. ದಯಮಾಡಿಟ್ಟು ಯಾವುದನ್ನೂ ಮುಚ್ಚಿ ಇಡಬೇಡಿ, ಸಂತೋಷವಾಗಿ ಬಿಚ್ಚಿ.

ಶ್ರೀ ಎಸ್. ಬಂಗಾರಪ್ಪ.—ಹಿಂದೆಯೂ ಶ್ರೀಮಾನ್ ನಿಜಲಿಂಗಪ್ಪನವರು, ಜತ್ತಿಯವರು, ರಾಮಕೃಷ್ಣ ಹೆಗ್ಡೆಯವರು, ರಾಚಯ್ಯನವರು ಇವರೆಲ್ಲಾ ಒಟ್ಟಿಗೆ ಇದ್ದಾಗಲೂ ನಡೆದಿದ್ದು ಕೂಡಾ ಎಲ್ಲಾ ಗೊತ್ತಿದೆ. ಶ್ರೀಮತಿ ಇಂದಿರಾಗಾಂಧಿಯವರು ಪ್ರಧಾನಿಗಳಾಗಿದ್ದಾಗ ಎಲ್ಲರೂ ಕೂಡಾ ಮಂತ್ರಿಗಳಾಗಿದ್ದಂತಹವರೇ. ಆಗಲೂ ಕೂಡಾ ನಡೆದಿದೆ ಎಂದು ನಾನು ಹೇಳಿದ್ದೇನೆ.

ಶ್ರೀ ರಮೇಶ್ ಕುಮಾರ್.—ನಾನು ಹಾಗೆ ಹೇಳಲಿಲ್ಲ. ಕೊರಳಿಗೆ ಹಗ್ಗ ಹಾಕತಕ್ಕ ಪರಿಸ್ಥಿತಿ ಸದಸ್ಯರಿಗೂ ಬರುತ್ತದೆ ಎಂದು ಹೇಳಿದ್ದಕ್ಕೆ ಹೇಳಿದೆ. ನಿಮಗೂ ನನಗೂ ಆಗ ಬಂದಿದ್ದ ಸ್ಥಿತಿಯನ್ನು ಜ್ಞಾಪಕಕ್ಕೆ ತಂದೆ ಅಷ್ಟೆ.

ಶ್ರೀ ಎಸ್. ಬಂಗಾರಪ್ಪ.—ಆ ಸ್ಥಿತಿಯನ್ನೂ ಜ್ಞಾಪಕ ಮಾಡುತ್ತೇನೆ. ಇಂತಂತಹ ಪ್ರಕರಣಗಳು ಜ್ಞಾಪಕಕ್ಕೆ ಬರುತ್ತವೆ. ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯ ಸರ್ಕಲ್ ಇನ್ಸ್‌ಪೆಕ್ಟರ್ ಬಗ್ಗೆ ಅಷ್ಟು ಹೇಳಿದೆವು. ಅವರನ್ನು ವರ್ಗ ಮಾಡಿದರೋ ಬಿಟ್ಟರೋ ಗೊತ್ತಿಲ್ಲ. ನಾನೂ ಕೂಡಾ ಆ ವಿಚಾರದ ಬಗ್ಗೆ ಮಾತನಾಡಿದ್ದೇನೆ. ಇನ್ನೂ ಏನೂ ಆಗಿಲ್ಲ. ಅಲ್ಲಿ ಪತ್ರಕರ್ತರನ್ನು ಹೊಡೆದಿದ್ದಾರೆ. ಅವರ ಮೇಲೆ ಪಬ್ಲಿಕ್ಕಾಗಿ ಕೇಸ್ ಹಾಕಿದ್ದಾರೆ. ಅಲ್ಲಿನ ಎಂ.ಎಲ್.ಎ.ಗಳೂ ಕೂಡಾ ಹೋಗಿ ತಿಳುವಳಿಕೆ ಕೊಟ್ಟು ಬಂದಿದ್ದಾರೆ. ಅದರ ಬಗ್ಗೆ ನಿಮಗೆ ಗಮನ ಬರಲಿಲ್ಲ. ಕೋಟಾ ಸಬ್‌ಇನ್ಸ್‌ಪೆಕ್ಟರ್‌ಗೆ ಮೆಸೇಜ್ ಹೋಗುತ್ತದೆ. ಆದರೆ ಇಂತಹದ್ದಕ್ಕೆ ಟೆಲೆಕ್ಸ್ ಬರುವುದಿಲ್ಲ. ಹಿಂದೆ ಹುಬ್ಬಳ್ಳಿಯಲ್ಲಿ ಗಲಾಟೆ, ಗಲಭೆ, ಆಯಿತು. ಆದರೆ ಮೊನ್ನೆ ಮೊನ್ನೆ ೧೨ ಎಕ್ಸ್ಟ್ರಾ ಜನರನ್ನು ಹಿಡಿದು ಅವರ ಮೇಲೆ ಕೇಸ್ ಹಾಕಿದ್ದಾರೆ. ಮೊನ್ನೆ ಮೊನ್ನೆ ತಾನೇ ಇದು ನಡೆದಿದೆ. ಈ ಘಟನೆ ನಡೆದು ೧ ವರ್ಷ ಆಗಿಹೋಯಿತು. ಆದರೆ ಮೊನ್ನೆ ಮೊನ್ನೆ ೧೨ ಜನರನ್ನು ಮತ್ತೆ ಸೇರಿಸಿದ್ದಾರೆ. ಅವರು ನಮ್ಮ ಪಕ್ಷದವರಾಗಿದ್ದು ಅವರ ಮೇಲೆ ಕೇಸ್ ಹಾಕಿದ್ದಾರೆ. ಮಾನ್ಯ ಸಭಾಧ್ಯಕ್ಷರೆಯವರೇ ಚರಿತ್ರೆ ಬಹಳ ದೊಡ್ಡದು. ಇಂತಹ ಕಂಪ್ಲೇಂಟ್‌ಗಳು ಬೇಕಾದಷ್ಟು ಇವೆ. ಅನುಮಾನ ಬೇಕಾಗಿಲ್ಲ. ಇವರು ಅಂಕಿಸಂಖ್ಯೆ ಕೊಟ್ಟಿದ್ದಾರೆ. ಈ ಒಂದು ವರದಿಯಲ್ಲಿ ೧೯೮೩-೮೪ರದ್ದು ಮಾತ್ರ ಕೊಟ್ಟಿದ್ದಾರೆ. ಹಿಂದಿನದು ಬಂದಿಲ್ಲ. ಆದರೂ ನಾನು ಜ್ಞಾಪಕ ಮಾಡುತ್ತೇನೆ. ಕೊಲೆಗಳು —೧೯೮೩-೮೪ರಲ್ಲಿ ಎಷ್ಟು ಆಗಿವೆ. ೧೯೮೩ರಲ್ಲಿ ೯೪೭ ಆಗಿದ್ದರೆ, ೧೯೮೪ರಲ್ಲಿ ೧೧೧೭ ಆಗಿವೆ. ಇವು ಸಾಕೇ ? ಅದೂ ನಿಮ್ಮ ಸರ್ಕಾರ ೧೯೮೩ರಲ್ಲಿ ಇದ್ದಾಗ ನಡೆದಿದ್ದು. ಆಗ ರಾಚಯ್ಯನವರು ಹೋಮ್

ಮಿನಿಸ್ಟರ್ ಅಲ್ಲದಿರಬಹುದು, ಒಟ್ಟಿನಲ್ಲಿ ನಿಮ್ಮ ಸರ್ಕಾರ ಇತ್ತು. ೧೯೮೦ರಲ್ಲಿ ೮೭೧, ೧೯೮೩ರಲ್ಲಿ ೯೪೭ ಆಗಿವೆ. ನಿಮ್ಮ ರಿಪೋರ್ಟ್ ಪ್ರಕಾರವೇ dacoities, robbery, house-breaking thefts, ordinary thefts, rioting, kidnapping, criminal breach of trust. ಇತ್ಯಾದಿ ಇತ್ಯಾದಿ ಅಪರಾಧಗಳು ಇವೆ. ಭಾರತ ದಂಡ ಸಂಹಿತೆ ಪ್ರಕಾರ ೧೯೮೩ರಲ್ಲಿ ೨೧೯೦ ಕೇಸ್‌ಗಳು ಇದ್ದರೆ ೧೯೮೪ರಲ್ಲಿ ೨೩,೭೮ ಕೇಸ್‌ಗಳು. ಭಾರತ ದಂಡ ಸಂಹಿತೆ ಮತ್ತು ಇತರೆ ಮೊಕದ್ದಮೆಗಳು ೧೯೮೩ರಲ್ಲಿ ೩೮,೭೪೧ ಕೇಸ್‌ಗಳಾದರೆ ೧೯೮೪ರಲ್ಲಿ ೪೧,೩೮೮ ಕೇಸ್‌ಗಳು. ಇದರಿಂದಲೇ ಗೊತ್ತಾಗುತ್ತದೆ ಕೇಸ್‌ಗಳು ಕಡಿಮೆ ಆಗಿಲ್ಲ ಜಾಸ್ತಿ ಆಗಿವೆ ಎಂದು. ಇನ್ನು ಯಾವ ರೀತಿಯಾಗಿ ತಮ್ಮ ಆಡಳಿತದ ಬಗ್ಗೆ, ಒಳ್ಳೆಯ ವ್ಯವಸ್ಥೆಯನ್ನು ಮಂಡನೆ ಮಾಡುತ್ತೀರೆಂದು ಇದರಲ್ಲಿ ಅರ್ಥವಾಗುತ್ತಿಲ್ಲ. ಇನ್ನು

(ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅದೇ ರೀತಿಯಾಗಿ ಅನೇಕ ವಿಚಾರಗಳಲ್ಲಿ ಕೂಡಾ ತಾವು, ತಮ್ಮ ಆಡಳಿತ ಯಂತ್ರ ಸಂಪೂರ್ಣ ವಿಫಲವಾಗಿದೆ ಎಂದು ಹೇಳುತ್ತೇನೆ. ಏನು ಒಳ್ಳೆಯ ಕೆಲಸ ಮಾಡುತ್ತೀರಿ ? ಮಾನ್ಯ ಮುಖ್ಯಮಂತ್ರಿಯವರು ಒಂದು ಒಳ್ಳೆಯ ವಿಷಯವನ್ನು ಇವತ್ತು ಸದನದಲ್ಲಿ ಹೇಳಿದ್ದಾರೆ. ತಾಲ್ಲೂಕು ಸಲಹಾ ಸಮಿತಿಗಳ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಇದನ್ನು ಸ್ವಾಗತ ಮಾಡುತ್ತೇನೆ.

೨–೩೦ ಪಿ. ಎಂ.

ನಿಮ್ಮ ಪೋಲೀಸ್ ಇಲಾಖೆ ಯಾವರೀತಿ ಕೆಲಸಮಾಡುತ್ತಿದೆ ಎಂಬುದು ನಿಮಗೆ ತಿಳಿದಿರಲಿ ಎನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ.

ಸ್ವಾಮಿ, ತುರುವೇಕೆರೆಯಲ್ಲಿ ಒಂದು ಸಲಹಾ ಸಮಿತಿಯನ್ನು ಮಾಡಿದ್ದಾರೆ. ಅದಕ್ಕೆ ಸಂಬಂಧಪಟ್ಟಂತೆ ಒಂದು ಆರ್ಡರ್ ನನ್ನ ಹತ್ತಿರ ಇದೆ. ಇದನ್ನು ೧೬ನೇ ಜುಲೈ ೧೯೮೫ರಲ್ಲಿ ಹೊರಡಿಸಿದ್ದಾರೆ. ಇದಕ್ಕೆ ಗ್ರಾಮೀಣ ಅಭಿವೃದ್ಧಿ ಇಲಾಖೆಯ ಅಧೀನ ಕಾರ್ಯದರ್ಶಿ ಲಿಂಗಯ್ಯ ಎನ್ನುವವರು ಸಹಿ ಹಾಕಿದ್ದಾರೆ. ಈ ಸರ್ಕಾರೀ ಅನುಬಂಧದಲ್ಲಿ ಸೀರಿಯಲ್ ನಂಬರ್ ೪ ರಲ್ಲಿ ಶಿವನಂಜಪ್ಪ, ಮಾಜಿ ಟಿ. ಪಿ. ಛೇರ್ಮನ್, ಆನೆ ಕೆರೆ ಇವರು ಹಿಂದುಳಿದ ವರ್ಗದವರು ಎಂದು ತಿಳಿಸಿದ್ದಾರೆ. ಆದರೆ ಇವರು ಲಿಂಗಾಯಿತರ ಜಾತಿಗೆ ಸೇರಿದವರು. ಇದೇ ರೀತಿ ಸೀರಿಯಲ್ ನಂಬರ್ ೧೧ರಲ್ಲಿ ಎಂ. ಕೆ. ಕೆಂಗಪ್ಪ, ಮಾಜಿ ಟಿ. ಡಿ. ಬಿ. ಸದಸ್ಯ. ಇವರನ್ನು ಷೆಡ್ಯೂಲ್ಡ್ ಟ್ರೈಬ್ ಎಂದು ಮಾಡಿದ್ದಾರೆ. ಆದರೆ ಇವರು ಜಾತಿಯಲ್ಲಿ ಒಕ್ಕಲಿಗರು......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಹರಿಜನ ಎಂದು ಮಾಡಿದ್ದರೆ ಸರಿ, ಅದು ಬಿಟ್ಟು ಹರಿಜನ ಎಂದು ತಿಳಿದುಕೊಂಡು ಮಾಡಿದ್ದರೆ ಅದು ತಪ್ಪಾಗುತ್ತದೆ. ಏಕೆಂದರೆ ಎಲ್ಲರೂ ಹರಿಜನರೇ ಆಗಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಪತಿಯವರೆ, ನನ್ನ ಹತ್ತಿರ ಇರತಕ್ಕ ಈ ಸರ್ಕಾರೀ ಆಜ್ಞೆಯನ್ನು ತಮ್ಮ ಮುಂದಿಡಬಯಸುತ್ತೇನೆ.

ಇನ್ನು ಒಂದು ಪ್ರಮುಖ ವಿಚಾರವನ್ನು ಪ್ರಸ್ತಾಪ ಮಾಡುವುದಾದರೆ, ಓಸಿ ಮತ್ತು ಮಟ್ಕಾ ಇನ್ನೂ ಮುಂತಾದ ಹೆಸರುಗಳು ಇಲ್ಲಿವೆ. ಇವತ್ತು ಇವು ಎಲ್ಲ ಕಡೆ ಚೆನ್ನಾಗಿ ನಡೆಯುತ್ತಿವೆ. ಇವುಗಳನ್ನು ನಾವು ನಿಲ್ಲಿಸಿಬಿಡುತ್ತೇವೆಂದು ತಾವು ಘೋಷಣೆ ಮಾಡಿದಿರಿ. ಆದರೆ ಇದರಲ್ಲಿ ಯಾವುದನ್ನೂ ನಿಲ್ಲಿಸುವುದಕ್ಕೆ ನಿಮ್ಮಿಂದ ಸಾಧ್ಯವಾಗಲಿಲ್ಲ.

ಇನ್ನು ಗಲಭೆಗಳ ಬಗ್ಗೆ ಹೇಳುವುದಾದರೆ, ಈ ಬೆಂಗಳೂರು ನಗರದಲ್ಲಿ ಡಾ॥ ರಾಜಕುಮಾರ್ ಸಂಘ, ಇನ್ನೂ ಬೇರೆ ಬೇರೆ ಸಂಘಗಳು ಇವೆ. ಯಾವುದಾದರೂ ಒಂದು ವಿಚಾರದಲ್ಲಿ ಈ ಸಂಘಗಳು ಮುಷ್ಕರ ಮಾಡಿದಾಗಲೂ ಕೂಡ ಕೆಲವು ಗಲಭೆಗಳು ನಡೆದವು. ಆ ಸಂದರ್ಭದಲ್ಲಿ ನೀವು ಏನು ಮಾಡಿದಿರಿ, ಕೆಲವು ನಿರಪರಾಧಿಗಳ ಮೇಲೆ, ಬಡ ಹುಡುಗರ ಮೇಲೆ ಕೇಸುಗಳನ್ನು ಹಾಕಿ ಅವರನ್ನು ಇವತ್ತೂ ಕೂಡ ಕೋರ್ಟಿಗೆ ಅಲೆದಾಡುವಂತೆ ಮಾಡಿದ್ದೀರಿ. ಇನ್ನು ಕೆಲವರನ್ನು ಜಾಮೀನಿನ ಮೇಲೂ ಬಿಡಿಸಿಕೊಂಡು ಬರಲು ಸಾಧ್ಯವಿಲ್ಲದಂತೆ ಕೇಸುಗಳನ್ನು ದಾಖಲು ಮಾಡಿಸಿದ್ದೀರಿ. ಆ ಹುಡುಗರು ಇವತ್ತೂ ಕೂಡ ಈ ಕೇಸುಗಳನ್ನು ಎದುರಿಸಬೇಕಾಗಿದೆ.

ಇನ್ನು ಪೋಲೀಸ್ ಫೈರಿಂಗ್ ವಿಚಾರದಲ್ಲಿ ಪೋಲೀಸ್ ಇಲಾಖೆಯ ವಾರ್ಷಿಕ ವರದಿಯ ೨೧ನೇ ಪುಟದಲ್ಲಿ ಪ್ರಸಕ್ತ ವರ್ಷದಲ್ಲಿ ಎಷ್ಟು ಘಟನೆಗಳು ನಡೆದಿವೆ, ಎಷ್ಟು ಸಾವು ಸಂಭವಿಸಿವೆ, ಇನ್ನೂ ಮುಂತಾದ ವಿವರಗಳನ್ನು ಕೊಟ್ಟಿದ್ದೀರಿ. ಅದರ ಪೈಕಿ ಕೇವಲ ಒಂದೆರಡು ವಿಚಾರಗಳನ್ನು ಮಾತ್ರ ನಾನು ಪ್ರಸ್ತಾಪ ಮಾಡುತ್ತೇನೆ.

> ''ಪ್ರಸಕ್ತ ವರ್ಷದಲ್ಲಿ ಪೋಲೀಸರು ೩೦ ಘಟನೆಗಳಲ್ಲಿ ಗುಂಡು ಹಾರಿಸಿರುತ್ತಾರೆ. ಅವರಲ್ಲಿ ೧೧ ಬಾರಿ ಗಾಳಿಯಲ್ಲಿ ಮತ್ತು ೧೯ ಬಾರಿ ಗುಂಪಿನ ಮೇಲೆ ಹಾಗೂ ೧೨ ಬಾರಿ ಗಂಧದ ಮರವನ್ನು ಕಳ್ಳ ಸಾಗಾಣಿಕೆದಾರರ ಮೇಲೆ ಮತ್ತು ಕಾಡು ಪ್ರಾಣಿಗಳನ್ನು ಬೇಟೆಯಾಡುತ್ತಿದ್ದವರ ಮೇಲೆಯೂ, ೫ ಬಾರಿ ಮತೀಯ ಘರ್ಷಣೆಯಲ್ಲಿಯೂ ಒಂದು ಸಾರಿ ಕಾರ್ಮಿಕರ ಘರ್ಷಣೆ ಮೇಲೆಯೂ, ಒಂದು ಸಾರಿ ವಿದ್ಯಾರ್ಥಿಗಳ ಚಳುವಳಿಯ ಮೇಲೆಯೂ ಮಾಡಿದ್ದಾರೆ. ಎಲ್ಲಾ ಸೇರಿದಂತೆ ೧೮ ಜನರು ಸತ್ತಿದ್ದು, ೩೦ ಜನರು ಗಾಯಗೊಂಡಿದ್ದಾರೆ.''

ಎಂದು ನಿಮ್ಮ ಪೋಲೀಸ್ ಇಲಾಖೆಯ ವಾರ್ಷಿಕ ವರದಿಯಲ್ಲಿ ಹೇಳಿದ್ದೀರಿ. ಹಿಂದೆ ಮಾನ್ಯ ಮುಖ್ಯ ಮಂತ್ರಿಗಳೋ ಅಥವಾ ಗೃಹ ಮಂತ್ರಿಗಳೋ ಒಂದು ಮಾತನ್ನು ಹೇಳಿದ್ದು ನನಗೆ ನೆನಪಿದೆ. ಘರ್ಷಣೆ ಆಗುವಾಗ ನಾವು ರಬ್ಬರ್ ಗುಂಡುಗಳಿಂದ ಹೊಡೆಯುತ್ತೇವೆಂದು ಹೇಳಿದ್ದರು. ಆಗ ರಬ್ಬರ್ ಗುಂಡು ಎಲ್ಲಿ ಸಿಕ್ಕುತ್ತಿದ್ದುವು. ರಬ್ಬರ್ ಗುಂಡಿನಿಂದ ಗಾಯವಾಗಿದೆ ಎಂದು ಎಲ್ಲೂ ಬರಲಿಲ್ಲ. ೧೯೬೪-೬೫ರಲ್ಲಿ ೧೮ ಜನರು ಸತ್ತಿದ್ದು ೩೦ ಜನರಿಗೆ ಗಾಯವಾಗಿದೆ ಎಂದು ಅಧಿಕೃತವಾಗಿ ಇವರೇ ಇಷ್ಟು ಕೊಟ್ಟಿರಬೇಕಾದರೆ ಇನ್ನು ಅನಧಿಕೃತವಾಗಿ ಎಷ್ಟು ಜನರು ಸತ್ತಿರಬಹುದು ಎಂಬುದನ್ನು ಊಹೆಮಾಡಲು ಈ ಸದನಕ್ಕೇ ಬಿಡುತ್ತೇನೆ. ಈಗಲೂ ಕೂಡ ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಯುತ್ತಿದೆ. ಮೊನ್ನೆ ಜಿ. ಕೆ. ವಿ. ಕೆ. ಅಗ್ರಿಕಲ್ಚರಲ್ ಕಾಲೇಜಿನಲ್ಲೂ ನಡೆಯಿತು, ಅದೇರೀತಿ ರೇಣುಕಾಚಾರ್ಯ ಕಾಲೇಜಿನಲ್ಲೂ ನಡೆಯಿತು. ಇನ್ನೂ ಅನೇಕ ಕಡೆಗಳಲ್ಲಿ ನಡೆಯುತ್ತಲೆ ಇದೆ. ವಿದ್ಯಾರ್ಥಿಗಳು ತಪ್ಪು ಮಾಡಿದರೆ ಕೇಸು ಹಾಕಿ. ಆದರೆ ಯಾರೋ ಬಡವರ ಹುಡುಗರು ಸಿಕ್ಕಿದರೆಂದು ಹಿಡಿದುಕೊಂಡುಹೋಗಿ ಕೇಸ್ ಹಾಕಿಸಿದ್ದೀರಿ. ಯಾವ ವ್ಯಕ್ತಿಯನ್ನೇ ಆಗಲಿ ಬಂಧಿಸಿದ ೨೪ ಗಂಟೆಯೊಳಗಾಗಿ ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಬೇಕೆಂದು ಕಾನೂನು ಇದೆ. ಆದರೆ ಪೋಲೀಸರು ಆ ರೀತಿ ನಡೆದುಕೊಂಡಿಲ್ಲ. ನಮ್ಮ ಜಿಲ್ಲೆಯಲ್ಲಿ ಕೂಡ ಇಂಥಾದ್ದು ನಡೆಯಿತು. ಅನೇಕ ಜನರನ್ನು ಹಿಡಿಸಿ ಹೊಡೆಸಿದ್ದೀರಿ. ಏತಕ್ಕೆ ಹೀಗೆ ಮಾಡಿಸಿದಿರಿ ಎಂದರೆ ಆ ಜನಗಳು ನಮ್ಮ ಕಾಂಗ್ರೆಸ್ ಪಕ್ಷದವರಿಗೆ ಚುನಾವಣೆ ಸಂದರ್ಭದಲ್ಲಿ ಸಪೋರ್ಟ್ ಮಾಡಿದ್ದಾರೆ ಎಂಬ ಕಾರಣದಿಂದ. ಯಾರು ಅನ್ಯಾಯವಾಗಿ ಹೊಡೆತಗಳನ್ನು ತಿಂದರೋ ಅವರನ್ನೆಲ್ಲಾ ಅದೇರೀತಿಯಲ್ಲೇ ಮಾನ್ಯ ರಾಚಯ್ಯನವರ ಮನೆಗೆ ಕಳುಹಿಸಿಕೊಟ್ಟಿದ್ದೇನೆ. ನಮ್ಮ ಕಾರ್ಯಕರ್ತರನ್ನು ರಾಜಕೀಯ ಬಂಧನದಲ್ಲಿ ಇಟ್ಟು ಹೊಡೆಸಿದಿರಿ. ಇವತ್ತು ನೀವು ಹೊಡೆಸಿದ್ದೀರಿ. ಆದರೆ ಮುಂದೆ ನಾವು ಅಧಿಕಾರಕ್ಕೆ ಬಂದಾಗ ನಿಮ್ಮನ್ನು ಹೊಡೆಸುತ್ತೇವೆಂದು ನಾವು ಹೇಳುವುದಿಲ್ಲ. ನೀವು ಒಳ್ಳೆಯ ನಡತೆಯನ್ನು ಗಮನದಲ್ಲಿಟ್ಟುಕೊಳ್ಳಿ ಎಂದು ಹೇಳಬಯಸುತ್ತೇನೆ. ಸರ್ಕಾರದ ಎಲ್ಲ ಇಲಾಖೆಗಳ ಬೇಡಿಕೆಗಳೂ ಸದನದ ಮುಂದೆ ಬರುವುದರಿಂದ ನಾನು ಈ ಮಾತನ್ನು ಹೇಳಬೇಕಾಗಿದೆ. ಪೋಲೀಸ್ ಇಲಾಖೆಯ ವಿಚಾರದಲ್ಲಿ ಸರ್ಕಾರ ಏನು ಒಳ್ಳೆಯ ಹೆಸರನ್ನು ಪಡೆಯಬೇಕಾಗಿತ್ತೊ ಅದನ್ನು ನೀವು ಪಡೆಯಲಿಲ್ಲ. ಘರ್ಷಣೆ ನಡೆಯುವ ಸಂದರ್ಭದಲ್ಲಿ ರಬ್ಬರ್ ಗುಂಡುಗಳನ್ನು ಉಪಯೋಗಿಸುತ್ತೇವೆಂದು ಹೇಳಿದ್ದೀರಿ. ಯಾವುದೇ ಪಕ್ಷ ಆಡಳಿತಕ್ಕೆ ಬಂದರೂ ಕೂಡ ಪೋಲೀಸ್ ಇಲಾಖೆಯನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳುತ್ತದೆ. ಆದರೆ ನೀವು ಇದನ್ನು ಹಿಡಿತದಲ್ಲಿಟ್ಟುಕೊಳ್ಳುವುದಕ್ಕೆ ಆಗಿಲ್ಲ. ಬಡವರನ್ನು ರಕ್ಷಿಸುವುದರಲ್ಲಿ ನೀವು ವಿಫಲರಾಗಿದ್ದೀರೆಂದು ಹೇಳಬಯಸುತ್ತೇನೆ.

ಇನ್ನು ಅಬ್ಕಾರಿ ಇಲಾಖೆಯ ಬಗ್ಗೆ ಹೇಳುವುದಾದರೆ, ಪ್ರಮುಖವಾದ ಕೆಲವು ವಿಚಾರಗಳನ್ನು ಇಲ್ಲಿ ನಾನು ಪ್ರಸ್ತಾಪ ಮಾಡಬೇಕಾಗುತ್ತದೆ. ಈ ಅಬ್ಕಾರಿ ಇಲಾಖೆ ನಮಗೆ ದೊಡ್ಡ ಆದಾಯವನ್ನು ಕೊಡತಕ್ಕ ಇಲಾಖೆ. ಈ ಆದಾಯವನ್ನು ಕೊಡತಕ್ಕ ಇಲಾಖೆ ಏನಿದೆ ಇದರ ಬಗ್ಗೆ ನಾವು ಹೆಚ್ಚಿನ ಗಮನ ಕೊಡತಕ್ಕದ್ದು ಅಗತ್ಯವಿದೆ. ರಾಜ್ಯದ ಆದಾಯವನ್ನು ಹೆಚ್ಚು ರೂಢಿಸಿಕೊಳ್ಳುವುದಕ್ಕೆ ಇವತ್ತು ಅಬ್ಕಾರಿ ತೆರಿಗೆಯನ್ನು ಒಂದು ಲಿಟರ್‌ಗೆ ೨ ರೂಪಾಯಿನಂತೆ ಹೆಚ್ಚು ಮಾಡಿದ್ದೀರಿ. ಇದರಿಂದ ಪ್ರಸಕ್ತ ವರ್ಷದಲ್ಲಿ ೨ ಕೋಟಿ ರೂಪಾಯಿಗಳ ಹೆಚ್ಚಿನ ಆದಾಯವನ್ನು ನಿರೀಕ್ಷಣೆ ಮಾಡುತ್ತಿದ್ದೀರಿ. ಆದರೆ ನಮ್ಮ ಅಕ್ಕಪಕ್ಕದ ರಾಜ್ಯಗಳಲ್ಲಿ ಇಷ್ಟೊಂದು ತೆರಿಗೆ ಹಾಕಿಲ್ಲ. ಅವರು ಒಂದು ಲೀಟರ್‌ಗೆ ೨೫-೩೦ ಪೈಸೆಯಷ್ಟು ಮಾತ್ರ ಹಾಕಿದ್ದಾರೆ. ಈ ಅಬ್ಕಾರಿ ಇಲಾಖೆಯಿಂದ ಎಷ್ಟು

ಆದಾಯವನ್ನು ಮಾಡಿಕೊಳ್ಳಬಹುದೋ ಅಷ್ಟೇ ರೀತಿಯಲ್ಲಿ ಬರತಕ್ಕ ಆದಾಯವನ್ನು ಹಾಳು ಮಾಡುವುದಕ್ಕೂ ಸಾಧ್ಯತೆ ಇದೆ. ಎಲ್ಲಿ ಸ್ವಾರ್ಥ ರಾಜಕಾರಣ ತಲೆ ಹಾಕುತ್ತದೆ ಅಲ್ಲಿ ಬೊಕ್ಕಸಕ್ಕೆ ಬರತಕ್ಕ ಹಣ ತಕ್ಷಣ ನಿಂತುಹೋಗುತ್ತದೆ. ಇಂಥ ಘಟನೆಗಳು ನಡೆದಾಗ ಸಾರ್ವಜನಿಕರ ದೃಷ್ಟಿಯಿಂದ ಅದನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಬೇಕಾಗುತ್ತದೆ. ಸಾರ್ವಜನಿಕವಾಗಿ ಹೇಳತಕ್ಕ ಸಂದರ್ಭದಲ್ಲಿ ಯಾರ್ಯಾರು ಇದರ ದುರ್ಲಾಭ ಪಡೆಯುತ್ತಾರೆ ಅಂಥವರ ಹೆಸರನ್ನೂ ಕೂಡ ನಾವು ಹೇಳಬೇಕಾಗುತ್ತದೆ. ಈಗ ಕಳ್ಳಬಟ್ಟಿ ಸಾರಾಯಿ ದುರಂತ ನಡೆದು ಬಿಟ್ಟಿದೆ. ಅದು ಯಾರ ಕಾಲದಲ್ಲಿ ನಡೆಯಿತು ಎನ್ನುವುದು ಪ್ರಶ್ನೆಯಲ್ಲ. ಹಿಂದಿನವರ ಕಾಲದಲ್ಲಿ ನಡೆಯಿತು. ಈಗ ನಿಮ್ಮ ಕಾಲದಲ್ಲೂ ನಡೆಯಬಹುದು. ನೂರಾರು ಜನರು ಕಳ್ಳಬಟ್ಟಿ ಸಾರಾಯಿಯನ್ನು ಕುಡಿದು ಸತ್ತರು ಎಂದು ಸಾರ್ವತ್ರಿಕವಾದ ಅಭಿಪ್ರಾಯ ಬಂದಿದೆ. ಈ ಸಭೆಯಲ್ಲೂ ಕೂಡ ಚರ್ಚೆಯಾಗಿದೆ. ಅದಕ್ಕೆ ಒಂದು ವಿಚಾರಣಾ ಆಯೋಗವನ್ನು ಸರ್ಕಾರ ನೇಮಕ ಮಾಡಿತು, ಮಾನ್ಯ ಜಸ್ಟೀಸ್ ದೇಸಾಯ್ ವಿಚಾರಣಾ ಆಯೋಗವೆಂದು ನೇಮಕ ಮಾಡಿದರು. ಮಾನ್ಯ ದೇಸಾಯಿಯವರು ಬಹಳ ಚೆನ್ನಾಗಿ ಎನ್‌ಕ್ವೈರಿ ಮಾಡಿ ರಿಪೋರ್ಟ್ ಕೊಟ್ಟಿದ್ದಾರೆ. ಅವರು ವಿವರಣೆಯನ್ನು ಕೊಟ್ಟಿರತಕ್ಕಂಥದ್ದು ಒಂದು ಕಡೆ ಇರಲಿ. ಪಬ್ಲಿಕ್ ಆಗಿ ಕಳ್ಳಬಟ್ಟಿ ಸಾರಾಯಿ ಏನು ತಯಾರಾಗುತ್ತಿದೆ ಅದನ್ನು ನಿಲ್ಲಿಸಬೇಕಾದರೆ ಒಂದು ಮುಖ್ಯವಾದ ಗುರಿ ಇರಬೇಕು. ಸರ್ಕಾರದವರು ಕೊಡತಕ್ಕಂಥ ಸಾರಾಯಿಯ ಗುಣ ಶ್ರೇಷ್ಠವಾಗಿರಬೇಕು ಎನ್ನುವುದು ಇರುತ್ತದೆ. ಇನ್ನೊಂದು ಬೇರೆ ಅಭಿಪ್ರಾಯವೂ ಇದೆ. ಕುಡಿಯಲಿಕ್ಕೆ ಅವಕಾಶವನ್ನೇ ಕೊಡಬಾರದೆಂದು ಹಿಂದೆಯೂ ಕೂಡ ಇತ್ತು. ಅದಕ್ಕೋಸ್ಕರವಾಗಿ ಪ್ರೊಹಿಬಿಷನ್ ಜಾರಿಗೆ ತಂದಿದ್ದರು. ಮತ್ತೆ ಇದನ್ನು ತೆಗೆದುಹಾಕಿದರು. ಕುಡಿಯುವುದಕ್ಕೆ ಕಾನೂನು ಪ್ರಕಾರ ಕೊಡಬಹುದೆಂದು ಬಂದಿದೆ. ಈಗಲೂ ಕೂಡ ಒಂದು ಟೆಂಪರೆನ್ಸ್ ಬೋರ್ಡ್ ಎಂದು ಇದೆ. ಇದು ಏನು ಕೆಲಸ ಮಾಡುತ್ತಿದೆ ಎನ್ನುವ ಬಗ್ಗೆ ವಿಚಾರ ಮಾಡೋಣ. ಇವರು ಕೊಟ್ಟಿರತಕ್ಕಂಥ ವೈನ್‌ಶಾಪ್ ಲೈಸೆನ್ಸ್ ಏನು ಇದೆ ಅದರ ಪಟ್ಟಿಯನ್ನು ನೋಡಬೇಕು. ಹೋಲ್‌ಸೇಲ್ ಡೀಲರ್ಸ್ ಪಟ್ಟಿಯನ್ನು ನೋಡಿದರೆ ಇನ್ನೂ ಕೂಡ ಕುಡಿಯತಕ್ಕಂಥದಕ್ಕೆ ಪ್ರೋತ್ಸಾಹವನ್ನು ಕೊಡುತ್ತಿರುವುದು ಕಂಡುಬರುತ್ತದೆ. ಈ ರೀತಿಯಾಗಿ ಪ್ರೋತ್ಸಾಹವನ್ನು ಕೊಡುತ್ತಿರಬೇಕಾದರೆ ಟೆಂಪರೆನ್ಸ್ ಬೋರ್ಡ್ ಎಂದು ಏತಕ್ಕೆ ಇರಬೇಕು? ಪಾನ ನಿಯಂತ್ರಿತ ಸಂಯಮ ಮಂಡಲಿ ಎಂದು ಏತಕ್ಕೆ ಇರಬೇಕೆಂದು ಪ್ರಶ್ನೆ ಮಾಡಬೇಕಾಗುತ್ತದೆ. ಅದಕ್ಕೆ ಲಕ್ಷಾಂತರ ರೂಪಾಯಿಗಳ ಖರ್ಚು ಚೇರ್‌ಮನ್ ಎಂದು ಒಬ್ಬರನ್ನು ಮಾಡಿ ಅವರಿಗೆ ಕಾರು ಬಂಗಲೆ ಮುತ್ತಿತರ ಸೌಕರ್ಯಗಳನ್ನು ಕೊಟ್ಟು ಹಣವನ್ನು ಖರ್ಚುಮಾಡುತ್ತಿರುವುದು ಒಂದು ಕಡೆ ಇರಲಿ ಈ ಇಲ್ಲಿಸಿಟ್ ಲಿಕ್ಕರ್‌ಗೆ ಲಿಸಿಟ್ ಲಿಕ್ಕರ್ ಎಂದು ಸರ್ಕಾರಿ ಸೀಲ್ ಹಾಕಿಕೊಂಡು ಬರತಕ್ಕಂಥ ಒಂದು ಲಿಕ್ಕರ್ ಏನಿದೆ ಇದು ಬೃಹತ್ತಾಗಿ ತಯಾರಾಗತಕ್ಕಂಥ ಲಿಕ್ಕರ್. ಮಾನ್ಯ ಜಸ್ಟೀಸ್ ದೇಸಾಯಿಯವರು ಬಹಳ ಪ್ರಮುಖವಾಗಿ ವಿಚಾರ ಮಾಡಿದ್ದಾರೆ. ಇದರ ಬಗ್ಗೆ ಒಂದು ಪ್ಯಾರ ಓದಿ ನೋಡಿದೆ. ಅದರಲ್ಲಿ ಬಹಳ ಚೆನ್ನಾಗಿ ಕೊಟ್ಟಿದ್ದಾರೆ. ಉದಾಹರಣೆಯನ್ನು ಕೊಟ್ಟು ಬರೆದಿದ್ದಾರೆ. ಜನರು ಕಳ್ಳಬಟ್ಟಿ ಸಾರಾಯಿ ಕುಡಿಯುವುದನ್ನು ನಿಲ್ಲಿಸಬೇಕಾದರೆ ಎರಡು ವಿಧದಲ್ಲಿ ಅನುಸ್ಥಾನಕ್ಕೆ ತರಬೇಕಾಗಿದೆ. ಒಂದು ಬಾಟ್ಲಿಯಲ್ಲಿ ತುಂಬಿ ಕೊಡತಕ್ಕಂಥದ್ದು ಒಳ್ಳೆಯ ಗುಣಮಟ್ಟದ್ದು ಇರಬೇಕು ಎನ್ನುವುದು ಒಂದು ವಿಧಾನವಾದರೆ ಮತ್ತೊಂದು ರೇಟ್ ಕಡಿಮೆ ಇರಬೇಕೆಂದು ಹೇಳಿದ್ದಾರೆ. ೪೩ನೇ ಪೇಜ್. ರಿಪೋರ್ಟ್‌ನ ನಾಲ್ಕನೇ ಪ್ಯಾರವನ್ನು ಓದುತ್ತೇನೆ. ಅದು ಈ ರೀತಿ ಇದೆ:

> "The duty burden is the secret of succes for the illicit liquor industry which is expending at the rate of 25 percent every year....The crux of the matter, of course, is the heavy handed excise policy, which makes the lower priced illicit liquor so attractive to the thirsty. The government in its eagerness to milk a fat cow, is overplaying its hand and letting an equal part of the bounty get away.

There should be a rational tax and price policy. The idea that if prices of liquor are kept high, then the demand for liquor will be kept within bounds is a misguided one and has to be qualified especially when applied to country liquor. The obvious effect of high prices is to shift the consumer to alternate product of illicit distillation.

This may be illustrated by an example : Suppose that illicit liquor sell at Rs. 2/- per bottle and licit liquor at Rs. 5/-per bottle, As the quantity of licit liquor is generally presumed to be better most consumers would rate it as reasonably priced a Rs. 3/- and would be prepared to buy at that price. However, as it actually sells at Rs. 5/- many find it beyond their means and begin to patronise the illicit product. Reducing the price of licit liquor to Rs. 3/-will shift all consumers back to it and will spoil the business of contraband liquor. There may be some people to whom the difference of Rs. 1/- between the price of illicit and licit product will appear to be attractive. Equally not withstanding, some sales of illicit liquor will occur.'' ಎಂದು.

ಅವರು ಒಳ್ಳೆಯ ಅಭಿಪ್ರಾಯವನ್ನು ಅವರು ಹೇಳಿದ್ದಾರೆ. ಸರ್ಕಾರದವರು ತಯಾರು ಮಾಡಿ ಕೊಡತಕ್ಕಂಥದ್ದು ಬಾಟ್ಲಿಯಲ್ಲಿ ಕೊಡಬೇಕೆಂದು. ಮತ್ತೆ ಕಡಿಮೆ ದರದಲ್ಲಿ ಕೊಡಬೇಕು ಎನ್ನುವ ಅಭಿಪ್ರಾಯವನ್ನು ಅವರು ಸ್ಪಷ್ಟವಾಗಿ ತಿಳಿಸಿದ್ದಾರೆ. ಸಭಾಧ್ಯಕ್ಷರೇ ಸರ್ಕಾರದ ವಿಚಾರ ಪ್ರಸ್ತಾಪಕ್ಕೆ ಬಂದಾಗ ದೇಸಾಯ್ ಕಮಿಷನ್‌ವರದಿಯಂತೆ ಜನಗಳಿಗೆ ಜೀವ ಹಾನಿಯಾಗಬಾರದೆಂಬ ದೃಷ್ಟಿಯಿಂದ ಕಾನೂನನ್ನು ತಿದ್ದುಪಡಿಮಾಡಿ ತಮ್ಮ ಸ್ವಾರ್ಥಕ್ಕೋಸ್ಕರವಾಗಿ ಜನರು ಆರೋಗ್ಯವಾಗಿರಬೇಕು, ತಮಗೆ ಆದಾಯವೂ ಬರಬೇಕು ಮತ್ತು ಕಳ್ಳಬಟ್ಟಿಯನ್ನು ಹೋಗಬೇಕೆಂದು ೧೯೮೪-೮೫ರ ಬಡ್ಜೆಟ್ ಸ್ಪೀಚ್‌ನಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಅದೇನೆಂದರೆ ಬಾಟ್ಲಿಂಗ್ ಸಿಸ್ಟಮ್ ಇಂಟ್ರಡ್ಯೂಸ್ ಮಾಡುತ್ತೇವೆಂದು ಹೇಳಿದ್ದಾರೆ.

"Since there is no control on the selling price of arrack, the arrack contractors are selling arrack at prices ranging from Rs. 12 to Rs. 48 a litre. This has led to unhealthy competition and resultant *malpractices*. To eliminate these we propose to fix a minimum selling price of Rs. 20 and a maximum selling price of Rs. 35 a litre for arrack.'' ಈ ರೀತಿ ಇದೆ.

ಅಂದರೆ ೨೦ ರೂಪಾಯಿನಿಂದ ೩೫ ರೂಪಾಯಿಗಳವರೆಗೆ ಮ್ಯಾಕ್ಸಿಮಮ್ ಫಿಕ್ಸ್ ಮಾಡಿದ್ದೇವೆಂದು ಹೇಳಿದ್ದಾರೆ. ೧೯೮೪-೮೫ ಕಳೆದ ವರ್ಷದ ಅವರ ಸ್ಪೀಚ್‌ನಲ್ಲಿ ಕೊಟ್ಟಿರತಕ್ಕಂಥದ್ದು. ನಾನು ಹೇಳಿದ್ದೇನೆ ಮಾನ್ಯ ಅಧ್ಯಕ್ಷರೇ ಈಗ ಎಷ್ಟು ರೇಟ್ ಆಗಿದೆ ಎನ್ನುವುದು ಬಹಳ ಮುಖ್ಯ. ಇದನ್ನು

ಏತಕ್ಕಾಗಿ ಹೇಳುತ್ತಿದ್ದೇನೆಂದರೆ ಎರಡು ರೂಪಾಯಿ ಒಂದು ಲೀಟರ್‌ಗೆ ಏರಿಸಿದ್ದೇವೆಂದು ಮೊನ್ನೆ ತಾನೇ ಅವರು ನಿರ್ಧಾರ ಮಾಡಿದರು. ಮತ್ತೆ ಈಗ ಅದರ ಮೇಲೆ ಟ್ಯಾಕ್ಸನ್ನು ಹಾಕಿ ಜಾಸ್ತಿ ಮಾಡಿರುವುದನ್ನು ನೋಡಿದಾಗ ಒಂದು ಲೀಟರ್‌ಗೆ ರೇಟ್ ಎಷ್ಟಕ್ಕೆ ಹೋಗಿದೆ ಎಂದರೆ, ಅದರ ಡೀಟೇಲ್ ನಮ್ಮ ಮುಂದೆ ಇಟ್ಟಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ಸುಮಾರು ಈ ಎರಡು ರೂಪಾಯಿಗಳನ್ನು ಸೇರಿಸಿ ೫೦ ರೂಪಾಯಿಗಳ ತನಕ ರೇಟ್ ಹೆಚ್ಚಿಕೊಂಡು ಹೋಗಿರುತ್ತದೆ. ಅವರು ಈ ಸದನದಲ್ಲಿ ಹೇಳತಕ್ಕಂಥದ್ದು ೩೫ ರೂಪಾಯಿಗಳು ಎಂದು ಆದರೆ ಅಲ್ಲಿ ಆಗಿರತಕ್ಕಂಥದ್ದು ೫೦ ರೂಪಾಯಿಗಳು. ಮೊದಲು ಸರ್ಕಾರದವರು ನಿಗದಿಮಾಡಿದ್ದ ಬೆಲೆ ಒಂದು ಲೀಟರ್ ಲಿಕ್ಕರ್‌ಗೆ ಹತ್ತು ರೂಪಾಯಿ ಆಮೇಲೆ ಅದಕ್ಕೆ ಆರು ರೂಪಾಯಿ ಹೆಚ್ಚುವರಿ ಖರ್ಚೆಂದು ಸೇರಿಸಿದರು. ಒಂದು ಲೀಟರ್‌ಗೆ ಅದು ಖರ್ಚು ಅಂತ ಸೇರಿಸಿ ಸುಮಾರು ೧೮ ರೂಪಾಯಿ ಇತ್ತು. ಆಮೇಲೆ ಬಾಟಲಿಂಗ್ ಕಂಪನಿಗೆ ಸಪ್ಲೈ ಮಾಡಿದರು. ಅಲ್ಲಿ ಹದಿನೆಂಟು ರೂಪಾಯಿ ಮತ್ತು ಎರಡು ರೂಪಾಯಿ ಸೇರಿ ಇಪ್ಪತ್ತು ರೂಪಾಯಿ ಆಯಿತು. ಆಮೇಲೆ ಪ್ಯಾಕೆಜಿಂಗ್ ಇತ್ಯಾದಿ ಸೇರಿಸಿ ಒಂದು ಲೀಟರ್‌ಗೆ ಐವತ್ತು ರೂಪಾಯಿ ಆಗುತ್ತದೆ ಎಂದು ವಿವರಗಳು ಇವೆ. ಇದನ್ನು ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ, ಯಾವಾಗ ಮಾನ್ಯ ಹಣಕಾಸಿನ ಮಂತ್ರಿಗಳು ಸದನದಲ್ಲಿ ಮಾತನ್ನು ಕೊಟ್ಟರೋ, ಅದನ್ನು ಅವರು ಉಳಿಸಲಿಕ್ಕೆ ಆಗಲಿಲ್ಲ. ಜೊತೆಗೆ ಇದನ್ನು ಕಡಿಮೆ ದರದಲ್ಲಿ ಮಾರಾಟ ಮಾಡಬೇಕೆಂದು ಅಭಿಪ್ರಾಯ ಇತ್ತು. ನಾಲ್ಕು ವೆರೈಟೀಸ್ ಮಾಡಿದ್ದಾರೆ. ೧೦೦ ಎಂ. ಎಲ್. ಸರ್ಕಾರದವರು ಗುತ್ತಿಗೆದಾರರಿಗೆ ಕೊಟ್ಟ ದರ ೮೦ ಪೈಸೆ, ಅಪ್ರಾಕ್ಸಿಮೇಟ್ ಆಕ್ಚುಯಲ್ ಕಾಸ್ಟ್ ೨೫ ಪೈಸೆ ೧೦೦ ಎಂ. ಎಲ್. ಬಾಟಲ್‌ಗೆ ಲಾಭ ೫೫ ಪೈಸೆ ಆಯಿತು. ಪ್ರಾಫಿಟ್ ರೇಂಜ್ ಕಡಿಮೆಯಾಗುತ್ತದೆ ಎನ್ನುವ ದೃಷ್ಟಿಯಿಂದ ಈಗ ಇದನ್ನು ತಯಾರು ಮಾಡುತ್ತಿಲ್ಲ. ೧೮೦ ಎಂ. ಎಲ್. ಗುತ್ತಿಗೆದಾರರಿಗೆ ವಹಿಸತಕ್ಕದ್ದು ೯೫ ಪೈಸೆ. ಖರ್ಚು ೩೦ ಪೈಸೆ ಮಾತ್ರ. ೧೮೦ ಎಂ. ಎಲ್. ಬಾಟಲ್‌ನಲ್ಲಿ ಲಾಭ ೬೫ ಪೈಸೆ ಸಿಗುತ್ತದೆ. ನಂತರ, ೩೭೫ ಎಂ. ಎಲ್. ಸರ್ಕಾರ ಕೊಟ್ಟಿರತಕ್ಕಂಥದ್ದು ೧ ರೂಪಾಯಿ ೩೦ ಪೈಸೆ. ೫೦ ಪೈಸೆ ಖರ್ಚಾಗುತ್ತದೆ. ೮೦ ಪೈಸೆ ಲಾಭ ಸಿಗುತ್ತದೆ. ೭೫೦ ಎಂ. ಎಲ್. ೩ ರೂಪಾಯಿ ಸರ್ಕಾರದವರು ಕೊಟ್ಟಿದ್ದಾರೆ. ೧ ರೂಪಾಯಿ ಬಾಟಲ್ ತಯಾರು ಮಾಡುವುದಕ್ಕೆ ಖರ್ಚಾಗುತ್ತದೆ. ೨ ರೂಪಾಯಿ ಲಾಭ ಸಿಗುತ್ತದೆ. ೪೦೫ ಎಂ. ಎಲ್. ನಲ್ಲಿ ಸುಮಾರು ೪ ರೂಪಾಯಿ ಲಾಭ ಬಾಟಲಿಂಗ್ ಕಂಟ್ರಾಕ್ಟದಾರರು ಪಡೆಯುತ್ತಾರೆ. ಜೊತೆಗೆ ಏನು ಮಾಡುತ್ತಿದ್ದರು ಎಂದರೆ, ಬಾಟಲಿಂಗ್ ಚಾರ್ಜಸ್, ನಾನಾ ಚಾರ್ಜಸ್, ಪ್ಲಾಸ್ಟಿಕ್ ಕ್ರೇಟ್ಸ್, ಕಾಟನ್, ಬಾಕ್ಸ್ ಇತ್ಯಾದಿ ಎಲ್ಲಾ ಸೇರಿ ಸುಮಾರು ೫೦ ರೂಪಾಯಿ ಇದ್ದರೆ, ೧೫೦ ರೂಪಾಯಿ ಚಾರ್ಜ್ ಮಾಡುತ್ತಿದ್ದಾರೆ. ಕಾಟನ್‌ಗೆ ೧೦ ರೂಪಾಯಿ ಇದ್ದರೆ ೩೦ ರೂಪಾಯಿ ವಸೂಲು ಮಾಡುತ್ತಿದ್ದಾರೆ. ಇದನ್ನು ನೋಡಿದರೆ ಬಾಟಲಿಂಗ್ ಕಂಟ್ರಾಕ್ಟುದಾರರಿಗೆ ೪ ಕೋಟಿ ರೂಪಾಯಿ ಲಾಭ ಸಿಗುತ್ತದೆ. ನಾಲ್ಕು ವರ್ಷ ಅವಧಿಗೋಸ್ಕರ ಈ ಕಂಟ್ರಾಕ್ಟನ್ನು ವಿಸ್ತರಿಸಿದ್ದಾರೆ ಇದರಲ್ಲಿ ಅವರೇಜ್ ನೆಟ್ ಪ್ರಾಫಿಟ್ ಪರ್ ಲೀಟರ್ ಸುಮಾರು ೩ ರೂಪಾಯಿ ಎಂದು ಹಿಡಿದರೂ ಕೂಡ ಒಟ್ಟು ಸಾರಾಯಿ ಮಾರಾಟ ೧೯೮೪-೮೫ರ ಲೆಕ್ಕ ತೆಗೆದುಕೊಂಡರೆ ಒಂದು ವರ್ಷಕ್ಕೆ ೪ ಕೋಟಿ ರೂಪಾಯಿ ಆಗುತ್ತದೆ ಸರ್ಕಾರದ ಅಂಕಿಅಂಶಗಳ ಪ್ರಕಾರ ಲೆಕ್ಕ ಹಾಕಿದರೆ ಒಂದು ಲೀಟರ್‌ಗೆ ಮೂರೂ ರೂಪಾಯಿ ಲಾಭ ಅಂತ ಹಿಡಿದರೂ ಸುಮಾರು ೧೨ ಕೋಟಿ ರೂಪಾಯಿ ಲಾಭ ಒಂದು ವರ್ಷಕ್ಕೆ ಆಗುತ್ತದೆ. ಈ ಗುತ್ತಿಗೆಯನ್ನು ನಾಲ್ಕು ವರ್ಷಗಳವರೆಗೆ ಕೊಟ್ಟಿರುವುದರಿಂದ ಬಾಟಲಿಂಗ್ ಕಂಟ್ರಾಕ್ಟರ್ಸ್‌ಗೆ, ನೋಟಿಫಿಕೇಷನ್ ಪ್ರಕಾರ ಹೋದರೆ ೪೮ ಕೋಟಿ ಬರುತ್ತದೆ. ಇದು ಯಾವ ನೋಟಿಫಿಕೇಷನ್ ಮಾಡಿದ್ದಾರೆ. ಎನ್ನುವುದಕ್ಕೆ ನಾನು ಬರುತ್ತೇನೆ. ದೇಸಾಯಿ ಕಮಿಟಿಯವರು ವರದಿಯಲ್ಲಿ ಸಾರಾಯಿ ಬಾಟಲಿನಲ್ಲಿ ಮಾರಾಟ ಮಾಡಬೇಕು ಮತ್ತು ದರ ಕಡಿಮೆ ಇಡಬೇಕೆಂದು ಸಲಹೆ ಮಾಡಿದ್ದಾರೆ. ಹೀಗಿರುವಾಗ ಬಾಟಲಿಂಗ್‌ಗೆ ಕೊಡತಕ್ಕಂಥ ವಿಚಾರದಲ್ಲಿ ಕಂಟ್ರಾಕ್ಟ್ ಕೊಡಬೇಕೆಂದು ಇದ್ದರೆ ಯಾವ ನಿಯಮವನ್ನು ಪಾಲಿಸಬೇಕು ? ಅದಕ್ಕೆ ಸೀಲ್ಡ್ ಟೆಂಡರ್ ಕರೆಯಬೇಕು. ಎಷ್ಟು ೧೦೦ ಎಂ. ಎಲ್. ೧೮೦ ಎಂ. ಎಲ್. ೩೭೫ ಎಂ. ಎಲ್. ೭೫೦ ಎಂ. ಎಲ್. ಇತ್ಯಾದಿ ಬೇರೆ ಬೇರೆ ಕೊಟೇಶನ್‌ಗಳನ್ನು ಕರೆಯಬೇಕು. ಈ ಕೇಸ್‌ನಲ್ಲಿ ಏನು ಮಾಡಿದ್ದಾರೆ ಎಂದರೆ, ಅವರು ಹೊರಡಿಸಿದ ನೋಟಿಫಿಕೇಷನ್ ನನ್ನ ಹತ್ತಿರ ಇದೆ ಇದರ ಪ್ರಕಾರ ಏನು ಮಾಡಿದ್ದಾರೆ ಎಂದರೆ ಯಾವುದೇ ಒಂದು ಟೆಂಡರ್‌ನ್ನು ಕರೆದಿಲ್ಲ. This dated 11th April 1984. This is issued from the Office of the Excise Commissioner in Karnataka, Bangalore. ಇಲ್ಲಿ ಯಾವ್ಯಾವ ವೆರೈಟಿಯ ಬಾಟಲಿಂಗ್ ಮಾಡಬೇಕೆಂದು ಟೆಂಡರ್ ಕರೆದಿಲ್ಲ. ಏನು ಮಾಡಿದ್ದಾರೆ ಎಂದರೆ ಇಂಜಿನಿಯರಿಂಗ್ ಕಾಲೇಜಿಗೆ. ನರ್ಸರಿಗೆ ಸೀಟು ಕರೆಯುತ್ತಾರಲ್ಲ, ಆ ರೀತಿ ಅರ್ಜಿ ಕಳಿಸಿಕೊಟ್ಟರೆ ಆಯಿತು. ಅರ್ಜಿ

ಕಳಿಸಿಕೊಟ್ಟರೆ, ಸೀಟು ಕೊಟ್ಟುತ್ತೇವೆ ಎನ್ನುವ ಹಾಗೆ ಇಲ್ಲಿ ಆಗಿದೆ. ಇಲ್ಲಿ ಸೆಕೆಂಡ್ ಪೇಜ್‌ನಲ್ಲಿ ಹೀಗಿದೆ.

> "The bottling unit has to be installed with the necessary machinery and apparatus and other residuary requirements by the bottling units itself and Government will not bear any expenditure in this regard. The above period of agreement is 1-7-1984 to 30-6-1938"

ಅವರೇ ಈರೀತಿ ಹೇಳಿದ್ದಾರೆ.

> "in the first instance and may continue if necessary."

> "The intending applicant has to submit his application to the Excise Commissioner in the sealed cover duly superscribed as" Application for Bottling Unit for Arrack."

This is an application and this is not a tender. "The application for bottling Unit of arrack" ಅಂತ ಕಳಿಸಿಬಿಟ್ಟರೆ ಆಯಿತು. ಮಾನ್ಯ ಸಭಾಧ್ಯಕ್ಷರೇ, ಈ ನೋಟಿಫಿಕೇಶನ್ ಇಸ್ಯೂ ಆದಮೇಲೆ ಒಟ್ಟು ೧೩೫ ಅರ್ಜಿಗಳು ಬಂದವು. ಇದಕ್ಕೆ ಕೊನೆಯ ದಿನಾಂಕ ಬೇರೆ ಹೇಳಿದ್ದರು ಏಪ್ರಿಲ್ ೨೧, ೧೯೮೪ ಸಂಜೆ ೫-೩೦ ಗಂಟೆ ಎಂದು ಅಪ್ಲಿಕೇಶನ್ ಅಂದರೆ ಒಂದು ಕವರ್‌ನಲ್ಲಿ ಹಾಕಿ ಕೊಟ್ಟರೆ ಆಯಿತು. ಕೋಟ್ಯಾಂತರ ರೂಪಾಯಿಗಳನ್ನು ಒಳಗೊಂಡಂಥ ವಿಷಯ ಇದು. ಅರ್ಜಿ ಕರೆದರು, ಒಟ್ಟು ೧೩೫ ಅರ್ಜಿಗಳು ಬಂದವು. ಇನ್ನು ಯಾರಿಗೆ ಕೊಡಬೇಕು ?.........

ಶ್ರೀ ರಮೇಶ ಜಿಗಜಿನಗಿ (ಅಬ್ಕಾರಿ ರಾಜ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ, ಮಾನ್ಯ ವಿರೋಧಪಕ್ಷದ ನಾಯಕರು ನನಗೆ ಸಂಬಂಧಪಟ್ಟಿರತಕ್ಕಂಥ ಇಲಾಖೆಯ ಮೇಲೆ, ಬೇಡಿಕೆಗಳ ಮೇಲೆ ಮಾತನಾಡುತ್ತಿದ್ದಾರೆ. ಅವರ ವಿಚಾರಗಳನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಒಂದು ವಿಚಾರ ಮಾತ್ರ ಹೇಳಿದರು ಏನೆಂದರೆ ಎಂಟು ಜನ ಬಾಟ್ಲಿಂಗ್ ಗುತ್ತಿಗೆದಾರರಿಗೆ ಗುತ್ತಿಗೆ ಕೊಟ್ಟಿರುವ ಬಗ್ಗೆ ಯಾವ ಆಧಾರದ ಮೇಲೆ ಕೊಟ್ಟಿದ್ದಾರೆ, ಎಷ್ಟು ಅರ್ಜಿಗಳು ಬಂದಿದ್ದವು, ಎನ್ನುವ ವಿಚಾರದಲ್ಲಿ ಅವರು ಮಾತನಾಡುತ್ತಿದ್ದಾರೆ.

೩-೦೦ ಪಿ.ಎಂ.

ಶ್ರೀ ಎಸ್. ಬಂಗಾರಪ್ಪ.—೧೩೫ ಅರ್ಜಿಗಳಲ್ಲಿ ೮ ಜನರನ್ನು ಮಾತ್ರ ಆರಿಸಿಕೊಂಡಿದ್ದಾರೆ. ಟೆಂಡರ್ ಕರೆದಿಲ್ಲ. ಹಿಂದೆ ಇದೇ ರೀತಿ ಒರಿಸ್ಸಾ ಕೇಸ್ ಬಗ್ಗೆ ಕೋರ್ಟ್ ಮುಂದೆ ಬಂದಾಗ, ಆ ಕೇಸ್ ಬಗ್ಗೆ ಈ ರೀತಿ ಕೊಟ್ಟಿದ್ದಾರೆ. When it was done like calling for applications it was struk down by the Court. ಟೆಂಡರ್ ಕರೆಯದೆ ಕೊಟ್ಟರೆ, ಅದು ಅವರ ಸ್ವಂತ ಆಸ್ತಿಯ ವ್ಯವಹಾರ ಮಾಡಿದಹಾಗೆ ಆಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಅಬ್ಕಾರಿ ಖಾತೆಯ ಸಚಿವರು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತಂದರು. ಬಾಟಲಿಂಗ್ ವಿಚಾರದಲ್ಲಿ ಒಂದು ಕೇಸ್ ಹೈಕೋರ್ಟ್ ಮುಂದೆ ಇದೆ ಎಂದು. ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಯಾವ್ಯಾವ ಆಕ್ಷೇಪ ಅಥವಾ ಆರೋಪಣೆಯನ್ನು ಮಾಡುತ್ತಿದ್ದಾರೋ, ಅದೇ ವಿಚಾರ ಅಲ್ಲಿ ಇದೆ. ಮೊದಲು ಎಕ್ಸೈಸ್ ಕಮೀಷನರ್ ರವರ ನಿರ್ಣಯದ ವಿರುದ್ಧವಾಗಿ ಕೆಲವು ಅರ್ಜಿದಾರರು ಹೈಕೋರ್ಟಿಗೆ ರಿಟ್ ಹಾಕಿದರು. ಆ ರಿಟ್‌ನಲ್ಲಿ ಆಗಿರತಕ್ಕಂತಹ Interim Order ಅನ್ನು ಇಲ್ಲಿ ಓದುತ್ತೇನೆ.

"Therefore, on taking into consideration all the facts and circumstances of the case and in the absence of allegations of *mala-fides*, it appears to me that public interest is better served by refusing the interim order. Accordingly, the interim prayer is rejected."

ಈಗ ಈ ಕೇಸು ಹೈಕೋರ್ಟ್ ಮುಂದೆ ಇದೆ. ಹೈಕೋರ್ಟಿನಲ್ಲಿ ಒಬ್ಬ ಪಿಟಿಷನರ್ ಏನು ಹೇಳಿದ್ದಾರೆಂದರೆ, ಒಬ್ಬ ಕಂಟ್ರಾಕ್ಟರ್ ಹೆಗಡೆ ಎಂದು ಇದ್ದಾರೆ. ಅವರು ಮುಖ್ಯಮಂತ್ರಿಗಳ ಸಂಬಂಧಿಕರೆಂದು ಆರೋಪಣೆ ಮಾಡಿದ್ದಾರೆ. ಹೆಗಡೆಯವರು ಒಕ್ಕಲಿಗರು. ಅವರನ್ನು ನನಗೆ ಯಾವ ರೀತಿ ಸಂಬಂಧವನ್ನು ಮಾಡಿದರೋ ಗೊತ್ತಾಗಲಿಲ್ಲ. ಅವರು ಚಿಕ್ಕಮಗಳೂರಿನವರು. ಇದರಿಂದ ಯಾರ್ಯಾರಿಗೆ ಎಫೆಕ್ಟ್ ಆಗಿದೆಯೋ ಅಂತಹ ಅರ್ಜಿದಾರರು ಹೈಕೋರ್ಟಿಗೆ ಹೋಗಿದ್ದಾರೆ. ಹೈಕೋರ್ಟಿನಲ್ಲಿ ನ್ಯಾಯವನ್ನು ಕೇಳುತ್ತಿದ್ದಾರೆ. ತಾತ್ಕಾಲಿಕ ತೀರ್ಮಾನ ಬಂದಿದೆ, ಕೊನೆ ತೀರ್ಮಾನ ಬಾಕಿ ಇರುವುದರಿಂದ, ಆ ವಿಚಾರದಲ್ಲಿ ಯಾವುದೇ ರೀತಿಯ ಚರ್ಚೆಯನ್ನು ಅದಕ್ಕೆ ಮುಂಚಿತವಾಗಿ ಮಾಡಿದರೆ, ಅದು ಸಂಪೂರ್ಣವಾಗಿ ತಪ್ಪಾಗುತ್ತದೆ. ಸಬ್‌ಜುಡೀಸ್ ಆಗುತ್ತದೆ. ಇದಕ್ಕೆ ಇನ್ನು ಮುಂದೆ ಚರ್ಚೆಗೆ ಅನುಮತಿ ಕೊಡಕೂಡದೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಅದು Ugar Sugar Factory.

ಶ್ರೀ ರಾಮಕೃಷ್ಣ ಹೆಗಡೆ.—ಉಗರ್ ಶುಗರ್ ಕಾರ್ಖಾನೆಯದ್ದಲ್ಲ. ಹೈಕೋರ್ಟಿನಲ್ಲಿ ನವೆಂಬರ್ ೧೯೮೪ರಲ್ಲಿ ಡಾ|| ನಾರಾಯಣ ಸ್ವಾಮಿ, ಸನ್ ಆಫ್ ಶ್ರೀ ಪಿಳ್ಳಪ್ಪ. ಪಿಟಿಷನ್ ನಂ. ೧೭೨೧೧/೮೪ ಇದೆ. ಇದರಲ್ಲಿ ಉಗಾರ್ ಬರುವುದಿಲ್ಲ.

"In this writ petition under Article 226 and 227 of the constitution, the Petitioners have sought for quashing the order dated 29th Septemer 1984 bearing no......... passed by the State Government produced as Annexure 'CI. The petitioner has also sought for issue of Writ in the nature of Mandamus directing the first respondent to allot one of the 19 contracts of the bottling arrack to the Petitioner."

So, the same question is pending and it cannot be discussed here and it is subjudice.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಇದು ಸಬ್‌ಜುಡೀಸ್ ಆಗುತ್ತದೆಂದು, ಇದನ್ನು ಚರ್ಚೆ ಮಾಡುವುದಕ್ಕಾಗುವುದಿಲ್ಲವೆಂದು ಸದನದ ಮುಂದೆ ಇಟ್ಟರು. In Kaul and Shakdher, on page 911. it has been stated thus:

"A matter does not become sub-judice if a writ Petition for admission is pending before a Court."

SRI RAMAKRISHNA HEGDE.—It is not for admission.

SRI M. VEERAPPA MOILY.—It is alright.

SRI RAMAKRISHNA HEGDE.—An interim order has been passed.

MR. SPEAKER.—You are telling that the Writ is pending for admission.

SRI M. VEERAPPA MOILY.—That is one aspect of it.

MR. SPEAKER.—It is already admitted.

SRI RAMAKRISHNA HEGDE.—Not only admitted, an interim order has been passed and the Court has held even the Petitioners have not alleged *malafides* in this.........

SRI M. VEERAPPA MOILY.—May be, that is the opinion of the Court, It is a Writ Petition filed by one individual. If you are not admitting it, O.K. ಇದರಲ್ಲಿ ವಿಸಾಗಿದೆಯೆಂದರೆ, ಒಬ್ಬ ಇಂಡಿವಿಜ್ಯುಯಲ್ ರಿಟ್ ಪಿಟಿಷನ್ ಹಾಕಿದ ಕೂಡಲೇ ಅದು ಸಬ್‌ಜುಡಿಸ್ ಆಗುವುದಿಲ್ಲ.

MR. SPEAKER.—If the Writ Petition is pending for admission.........

SRI RAMAKRISHNA HEGDE.—It is already admitted.

SRI M. VEERAPPA MOILY.—That is one aspect of it there.

are different process. An interim order is one aspect of it. ಅಡ್ಮಿಷನ್‌ಗೆ ಬರುತ್ತದೆ. ಸಬ್‌ಜುಡಿಸ್ ಹೇಗೆ ಆಗುತ್ತದೆ. ಇದು ಒಬ್ಬ ಇಂಡಿವಿಜ್ಯುಯಲ್ ಪರ್ಸನ್, ಅವನ ಹಕ್ಕಿನ ಬಗ್ಗೆ ಪ್ರತಿಷ್ಠಾಪನೆ ಮಾಡುವುದಕ್ಕೆ ಅವನು ಕೋರ್ಟಿಗೆ ಹೋದಕೂಡಲೇ, ಸಬ್‌ಜುಡೀಸ್ ಆಗುವುದಿಲ್ಲ. ಇದನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಮಾನ್ಯ ವಿರೋಧ ಪಕ್ಷದ ನಾಯಕರು ನಿಂತಿಲ್ಲ, ಒಂದು ವ್ಯವಹಾರದ ಮತ್ತು ಸಾರ್ವಜನಿಕ ದೃಷ್ಟಿಯಿಂದ ಇದು ಎಷ್ಟರ ಮಟ್ಟಿಗೆ ಸಾಧುವಾಗಿದೆ ಅನ್ನುವುದನ್ನು ನೋಡಬೇಕು ಇದು ಕೋಟ್ಯಾಂತರ ರೂಪಾಯಿಗಳ ವ್ಯವಹಾರ ಸಾರ್ವಜನಿಕ ದೃಷ್ಟಿಯಿಂದ ಇದರ ಬಗ್ಗೆ ಮಾತನಾಡಲು ಅಷ್ಟು ಸ್ವಾತಂತ್ರ್ಯ ಇಲ್ಲದೇ ಇದ್ದ ಪಕ್ಷದಲ್ಲಿ, ಬಹುಶಃ ನಾವು ಇಡೀ ಡಿಪಾರ್ಟ್‌ಮೆಂಟನ್ನೇ ಈಗ ಚರ್ಚೆಗೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಬಾಟ್ಲಿಂಗ್ ಮುಖಾಂತರ ಮಾಡುವ ವ್ಯವಹಾರದಲ್ಲಿ ಚರ್ಚೆ ಮಾಡುವುದಕ್ಕೆ ಸಾಧ್ಯವಿಲ್ಲವೆಂದರೆ we canno discuss that particular case which is before the Court. i. e. the dispute as between those parties, namely the petitioners and the respondents, yes, it is pending before the Court and it is subjudice. ನ್ಯಾಯಾಲಯದ ಮುಂದಿರುವ ವಿಷಯದ ಬಗ್ಗೆ ವಿಶ್ಲೇಷಣೆ ಮಾಡುವುದಕ್ಕೆ ಅಥವಾ ಚರ್ಚೆ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ ಎಂದಾದರೆ, ಒಟ್ಟು ವ್ಯವಹಾರದ ವಿಚಾರದಲ್ಲಿ ಚರ್ಚೆ ಮಾಡಲಿಕ್ಕೆ ಏನೂ ಆಕ್ಷೇಪಣೆ ಇಲ್ಲ ಎಂದು ಕಾಣುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ನಾನು ಮುಖ್ಯ ಮಂತ್ರಿಗಳ ಮಾತನ್ನೇ ಉದಾಹರಣೆಯಾಗಿ ಕೊಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಇದು ಒಂದು ಆಳವಾಗಿರತಕ್ಕಂತಹ ಪ್ರಶ್ನೆ. ಇದರ ಬಗ್ಗೆ ಚರ್ಚೆ ಮಾಡಿದರೆ ಸಬ್‌ಜುಡಿಸ್ ಆಗುವುದಿಲ್ಲ ಎನ್ನುವ ವಾದವನ್ನು ಮಾನ್ಯ ಮೊಯಿಲಿಯವರು ತಮ್ಮ ಮುಂದಿಟ್ಟಿದ್ದಾರೆ. ಆದರೆ ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳುತ್ತಾರೆ ಎಂದರೆ ಅದು ಸಬ್‌ಜುಡಿಸ್ ಆಗುತ್ತದೆ ಎಂದು ಅದರ ಬಗ್ಗೆ ಏನು ಸ್ಟೇ ಆರ್ಡರ್ ಕೊಟ್ಟಿದ್ದಾರೆ ಅದನ್ನು ಓದಿದ್ದಾರೆ. ನಾನು ಬಹಳ ವಿನಯಪೂರ್ವಕವಾಗಿ ಮತ್ತು ಬಹಳ ಗೌರವದಿಂದ ಹೇಳುತ್ತಿದ್ದೇನೆ ಈ ಒಂದು ರಿಟ್ ಪಿಟೀಷನ್‌ನಲ್ಲಿ ಏನು ವಿಷಯ ಇದೆ ಅದರ ಬಗ್ಗೆ ನಾವು ಮಾತನಾಡುತ್ತಿಲ್ಲ. ಸ್ಪೆಸಿಫಿಕ್ ಇಶ್ಯೂಸ್ ಬಗ್ಗೆ ನಾವು ವಿಚಾರವನ್ನು ಎತ್ತಿಲ್ಲ ಆದುದರಿಂದ ಇದು ಸಬ್‌ಜುಡಿಸ್ ಆಗುವುದಿಲ್ಲ. ಕೋರ್ಟಿನವರು ಕೊಟ್ಟಿರತಕ್ಕ ವಿಷಯಗಳ ಮೇಲೆ ಚರ್ಚೆ ಮಾಡುವುದು ಇದಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುವುದು ಈ ಬಾಟ್ಲಿಂಗ್ ವ್ಯವಹಾರದ ಬಗ್ಗೆ. ಅದರ ಬಗ್ಗೆ ನಾವು ಚರ್ಚೆ ಮಾಡುತ್ತೇವೆ, ಕೋರ್ಟ್ ಮುಂದೆ ಇರತಕ್ಕ ವಿಷಯದ ಮೇಲೆ ನಾವು ಮಾತನಾಡುವುದಿಲ್ಲ. ಈ ಬಾಟ್ಲಿಂಗ್ ಲೈಸನ್ಸನ್ನು ಯಾವ ಪಾಲಿಸಿ ಮೇಲೆ ಕೊಟ್ಟಿದ್ದಾರೆ, ಯಾವ ರೀತಿ ಕೊಟ್ಟಿದ್ದಾರೆ, ಯಾವ ರೀತಿ ಕೊಡಬೇಕಾಗಿತ್ತು, ಮತ್ತು ಯಾವುದು ಸರಿಯಿಲ್ಲ ಎನ್ನುವುದರ ಬಗ್ಗೆ

ನಾವು ಮಾತನಾಡಬೇಕು. ಯಾರೋ ಕೋರ್ಟಿಗೆ ಹೋಗಿದ್ದಾರೆ ರಿಟ್‌ಪಿಟೀಷನ್ ಹಾಕಿದ್ದಾರೆ ಎಂದು ಹೇಳುತ್ತೀರಿ. ಅವರು ಇಲ್ಲದ ವಿಷಯಗಳ ಮೇಲೆಲ್ಲಾ ರಿಟ್ ಪಿಟೀಷನ್ ಹಾಕಿದ್ದಾರೆ. ಅದರ ಬಗ್ಗೆ ತರ್ಕ ಮಾಡಬಾರದು ಎಂದು ಹೇಳತಕ್ಕಂತದ್ದು ಸರಿಯಲ್ಲ. ಅರ್ಜಿದಾರರು ಏನು ಇದ್ದಾರೆ ಆ ಅರ್ಜಿದಾರರನ್ನು ಬಿಟ್ಟು ತಡೆ ಆಜ್ಞೆಯನ್ನು ನಿವೇ ತರಿಸಿರಬೇಕು. ನಾವೂ ಹಿಂದೆ ರಾಜ್ಯಭಾರ ಮಾಡಿದ್ದೇವೆ. ನಾವು ಅರ್ಜಿದಾರರನ್ನು ಹೈಕೋರ್ಟಿಗೆ ಕಳುಹಿಸಿ ತಡೆ ಆಜ್ಞೆಗಳನ್ನು ತೆಗೆದುಕೊಂಡು ಬಾ ಎಂದು ಕಳುಹಿಸುತ್ತಿದ್ದೆವು. ಅದೇ ರೀತಿಯಾಗಿ ಇದೂ ಇರಬಹುದು. ಅಥವಾ ಇಲ್ಲದೇ ಇರಬಹುದು. ಶ್ರೀಮಾನ್ ಬಂಗಾರಪ್ಪನವರು ಹೇಳುವ ವಿಷಯ ಏನೆಂದರೆ, ಇದು ಕೋರ್ಟಿಗೆ ಸಂಬಂಧಪಟ್ಟ ವಿಚಾರವಲ್ಲ, ಅದರ ಬಗ್ಗೆ ನಾವು ಚರ್ಚೆ ಮಾಡುತ್ತೇವೆ ಆದರಿಂದ ಸಬ್‌ಜುಡಿಸ್ ಏನೂ ಆಗುವುದಿಲ್ಲವೆಂದು. ಮುಖ್ಯ ಮಂತ್ರಿಯವರಿಗೆ ಹೇಳುತ್ತೇನೆ ಇದು ಸಬ್‌ಜುಡಿಸ್‌ಗೆ ಬರುವ ಕಾರಣವಿಲ್ಲ. ಒಂದನೆಯದಾಗಿ ಈ ರಿಟ್‌ಪಿಟಿಷನ್ ಪೆಂಡಿಂಗ್ ಬಿಫೋರ್ ದಿ ಹೈಕೋರ್ಟ್ ಎನ್ನತಕ್ಕ ಅಭಿಪ್ರಾಯವನ್ನು ಹೇಳಿದ್ದಾರೆ. ಎರಡನೆಯದಾಗಿ ರಿಟ್‌ಪಿಟಿಷನ್ ಹಾಕಿರುವವರೇ ಬೇರೆ, ನಾವು ಮಾತನಾಡತಕ್ಕ ವಿಚಾರವೇ ಬೇರೆ.

ಶ್ರೀ ಎಸ್. ಬಂಗಾರಪ್ಪ.—ಇವರು ಹೇಳುವ ರಿಟಿಪಿಟಿಷನ್ ನಂಬರ್ ಮತ್ತು ಪಾರ್ಟಿ ಹೆಸರನ್ನು ನಾನು ತೆಗೆದುಕೊಂಡರೆ ಅದು ಸಬ್‌ಜುಡಿಸ್ ಆಗುತ್ತದೆ. ಆ ವಿಚಾರವನ್ನು ಬಿಟ್ಟು ನಾನು ವಿಷಯವನ್ನು ತೆಗೆದುಕೊಳ್ಳುತ್ತೇನೆ. ಈ ವಿಷಯವನ್ನು ಚರ್ಚೆ ಮಾಡಲೇ ಬೇಕು. ಇಲ್ಲದಿದ್ದರೆ ನಾವು ಸುಮ್ಮನೆ ಈ ಸದನದಲ್ಲಿ ಸೇರುವುದು ಅವಶ್ಯಕತೆ ಇರುವುದಿಲ್ಲವೆಂದು ಕಾಣುತ್ತದೆ. ಅವರು ಹೇಳಿರುವ ಪ್ರಕಾರ ಆ ರಿಟ್‌ಪಿಟಿಷನ್ ನಂಬರ್ ತೆಗೆದುಕೊಂಡರೆ ಅದು ತಪ್ಪಾಗುತ್ತದೆ. ಆದ್ದರಿಂದ ಮಾನ್ಯ ಸಭಾಧ್ಯಕ್ಷರೇ ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ಈ ವಿಚಾರವನ್ನು ತಂದು ನನ್ನ ಮಾತನ್ನು ಮುಂದುವರಿಸಬಹುದೆಂದು ತಿಳಿದು ಮಾತನಾಡುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಯಾವ ಇಶ್ಯೂಸ್ ಮೇಲೆ, ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಇಲ್ಲಿ ಮಾತನಾಡಲಿಕ್ಕೆ ಬಯಸುತ್ತಿದ್ದಾರೋ ಅದೇ ಇಶ್ಯೂಸ್ ಹೈಕೋರ್ಟಿನಲ್ಲಿ ಇವೆ. ಇದರಬಗ್ಗೆ ಒಂದು ರಿಟ್‌ಪಿಟಿಷನ್ ಅಲ್ಲ ೫ ಪಿಟಿಷನ್ಸ್ ಇದೇ ವಿಚಾರದಲ್ಲಿ ಇವೆ. ಈ ರಿಟ್‌ಪಿಟಿಷನ್‌ಗಳ ಮೇಲೆ ಕೋರ್ಟ್ ಇಂಟ್ರೀಯಮ್ ಆರ್ಡ್‌ರನ್ನು ಕೊಟ್ಟಿದೆ, ಉಳಿದವುಗಳು ವಿಚಾರಣೆಗಾಗಿ ಪೆಂಡಿಂಗ್ ಇದೆ. ಹೈಕೋರ್ಟ್‌ನವರು ಆರ್ಡ್‌ರ್ ಮಾಡಿರುವ ವಿಷಯವನ್ನು ಇಲ್ಲಿ ಒಂದು ಪ್ಯಾರ ಓದುತ್ತೇನೆ ಅದು ಈ ರೀತಿ ಇದೆ.—

"the contention of the writ petitioners is that the contracts in question have been disposed of arbitrarily" ಎಂದು.

ಅವರು ಹೇಳಿರುವ ಪ್ರಕಾರ, ನಾವು ಟೆಂಡರ್‌ಗಳನ್ನು ಕರೆಯದೆ ಅರ್ಜಿಗಳನ್ನು ಕರೆಯದೆ ಕಂಟ್ರಾಕ್ಟ್‌ನ್ನು ಕೊಡುವುದರಲ್ಲಿ ಯಾವುದೇ ತರದ ಅರ್ಥ ಇಲ್ಲ. ಅವರು ಅದೇ ಮಾತನ್ನು ಹೇಳಿದ್ದಾರೆ. ಈಗ ಹೈಕೋರ್ಟಿನವರು ಈ ವಿಚಾರವನ್ನು ತನಿಖೆಗಾಗಿ ತೆಗೆದುಕೊಂಡಿದ್ದಾರೆ, ಅವರ ಜಡ್ಜ್‌ಮೆಂಟಿನ ಮೇಲೆ ಪ್ರಭಾವ ಬೀರತಕ್ಕಂತಹ ಯಾವುದೇ ಮಾತನಾಡಿದರೆ ಅದು ಸಬ್‌ಜುಡಿಸ್ ಆಗುತ್ತದೆ. It is stated:

"the contracts in question have been disposed of arbitrarily without applying any norm and as such the impugned order of the State Government is violative of Article 14 of the Constitution of India."

ಈ ಇಶ್ಯೂಸ್‌ನಲ್ಲಿ ಎಕ್ಸೈಸ್ ಕಮೀಷನರ್‌ರವರು ಏನು ಆರ್ಡ್‌ರ್ ಮಾಡಿದ್ದಾರೆ ಅದು ಅರ್‌ಬಿಟ್ರರಿಯಾಗಿದೆಯೋ ಹೇಗೆ? ಮತ್ತು ಯಾವುದೇ ರೀತಿಯ ನಾರಮ್ಸ್ ಫಿಕ್ಸ್ ಮಾಡಿದ್ದಾರೋ ಇದು ಯಾವುದೇ ರೂಲ್ಸ್‌ಗೆ ವಿರುದ್ಧವಾಗಿದೆಯೋ ಹೇಗೆ ಎಂಬ ಮೂಲ ವಿಚಾರದಲ್ಲಿ ಹೈಕೋರ್ಟಿನವರು ವಿಚಾರಣೆ ಇಟ್ಟುಕೊಂಡಿರುವಾಗ ಅದರ ಮೇಲೆ ಯಾವುದೇ ರೀತಿಯ ಕಾಮೆಂಟ್ ಮಾಡುವುದು ಅಥವಾ ಅಭಿಪ್ರಾಯವನ್ನು ವ್ಯಕ್ತ ಮಾಡತಕ್ಕಂತಾದ್ದು ಸರಿಯಲ್ಲ. ಅದು ಸಬ್‌ಜುಡಿಸ್ ಆಗುತ್ತದೆ. ದಯವಿಟ್ಟು ಅದಕ್ಕೆ ಆಸ್ಪದ ಕೊಡಬಾರದೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಈ ಆರ್ಬಿಟ್ರರಿ ಎನ್ನತಕ್ಕ ಪದವನ್ನು ಏನು ಪ್ರಯೋಗ ಮಾಡಿದ್ದಾರೆ, ಕೋರ್ಟಿನಲ್ಲಿ ಯಾರು ರಿಟ್‌ಪಿಟಿಷನ್ ಹಾಕಿದ್ದಾರೆ ಅವರ ಮೇಲೆ ನಾನು ಮಾತನಾಡುತ್ತಿಲ್ಲ. ಬಾಟ್ಲಿಂಗ್ ವ್ಯವಹಾರ ಮಾಡತಕ್ಕವರು ಬಹಳ ಮಂದಿ ಇದ್ದಾರೆ, ಅವರ ಬಗ್ಗೆ ಮಾತನಾಡಲು ನಮಗೆ ಹಕ್ಕು ಇದೆ. ಇವತ್ತು ಅರ್ರ್ಯಾಕ್ ಕಂಟ್ರಾಕ್ಟ್‌ನಿಂದ ಎಷ್ಟು ಹಣ ಬರುತ್ತದೆ ಎನ್ನುವುದನ್ನು ಅವರ ವರದಿಯಲ್ಲೇ ತಿಳಿಸಿದ್ದಾರೆ. ಸರಕಾರವೇ ಮಂಡಿಸಿರತಕ್ಕಂಥಹ ಈ ವಿಚಾರವನ್ನು ಚರ್ಚೆ ಮಾಡತಕ್ಕಂತಾದ್ದು ನಮಗೆ ಸಂಬಂಧ ಪಟ್ಟಿರತಕ್ಕಂತಹ ವಿಚಾರವಲ್ಲವೇ ಜೊತೆಗೆ ಕೋರ್ಟಿನಲ್ಲಿರುವ ವಿಚಾರ ನಮಗೆ ಸಂಬಂಧ ಇಲ್ಲವೇ ಸದನದಲ್ಲಿ ನಮಗೆ ಇರತಕ್ಕಂತಹ ಹಕ್ಕುಗಳನ್ನು ನಾವು ಪ್ರತಿಪಾದನೆ ಮಾಡಬೇಕಾಗಿದೆ. ೧೯೮೫–೮೬ರಲ್ಲಿ ಎಷ್ಟು ಇದರಿಂದ ಆದಾಯ ಬರುತ್ತದೆ ? ಎಷ್ಟು ಸೋರಿಕೆ ಆಗಿದೆ ? ಎಷ್ಟು ಅನ್ಯಾಯ ವಾಗಿದೆ ? ಅಥವಾ ಎಷ್ಟು ಹಣ ನಮಗೆ ಬರತಕ್ಕಂತಹ ನಿರೀಕ್ಷೆ ಇದೆ ? ಇದನ್ನೆಲ್ಲಾ ನಾವು ಇಲ್ಲಿ ಚರ್ಚೆ ಮಾಡಲೇ ಬೇಕು. ಅದು ರಾಜ್ಯದ ವ್ಯವಹಾರ. ಈ ವ್ಯವಹಾರವನ್ನು ನಿಲ್ಲಿಸುವುದಕ್ಕೆ ಯಾವ ಕೋರ್ಟಿನ ರಿಟ್ ಪಿಟೀಷನ್ ಕೂಡಾ ನಮಗೆ ಅಡ್ಡ ಬರುವುದಿಲ್ಲ ಆದುದರಿಂದ ಮಾನ್ಯ ಮುಖ್ಯ ಮಂತ್ರಿಗಳು ಅಬ್ಜೆಕ್ಷನ್ ಎತ್ತುವುದಕ್ಕೆ ಕಾರಣವೇ ಇಲ್ಲ. ಎಕ್ಸೈಜ್ ಇಲಾಖೆ ಬಹಳ ಮುಖ್ಯವಾಗಿರ ತಕ್ಕಂತಹ ಇಲಾಖೆ. ನಾಲ್ಕು ವರ್ಷಗಳ ಅವಧಿಯಲ್ಲಿ ವರ್ಷಕ್ಕೆ ೧೨ ಕೋಟಿ ರೂಪಾಯಿಗಳ ಲಾಭ, ಆದಾಯ ತರುತ್ತದೆಂದು ನಮ್ಮ ಲೆಕ್ಕಾಚಾರ. ನಾಲ್ಕು ವರ್ಷಗಳಿಗೆ ೪೮–೫೦ ಕೋಟಿ ರೂಪಾಯಿ ಗಳಷ್ಟು ಲಾಭವನ್ನು ಇವರು ಮಾಡುತ್ತಾರೆ ಎನ್ನತಕ್ಕಂತಹ ವಿಚಾರ ಇಲ್ಲಿ ಇರುವುದರಿಂದಲೇ ನಾನು ಇಲ್ಲಿ ಪ್ರಮುಖವಾದ ವಿಚಾರವನ್ನು ಹೇಳಲಿಚ್ಛಿಸುತ್ತೇನೆ.

ಅಧ್ಯಕ್ಷರು.—ದಯವಿಟ್ಟು ಇಲ್ಲಿ ಕೋರ್ಟಿನಲ್ಲಿರುವಂತಹ ವಿಚಾರವನ್ನು ಬಿಟ್ಟು ಮಾತಾಡಬೇಕು.

ಶ್ರೀ ಎಸ್. ಬಂಗಾರಪ್ಪ.—ಅದು ಬಿಟ್ಟು ಮಾತನಾಡುತ್ತೇನೆ. ಪಾರ್ಟಿ ಹೆಸರು ನಾನು ತೆಗೆದುಕೊಳ್ಳುವುದಿಲ್ಲ. ಅದು ನಮಗೆ ಸಂಬಂಧವೇ ಇಲ್ಲ. ಉಳಿದಿರತಕ್ಕಂತದ್ದನ್ನು ನಾವು ಮಾತ ನಾಡುತ್ತೇವೆ.

SRI VEERANNA.—ತಾವು ಏನು ಹೇಳಿದ್ದೀರಿ, ಈ ಬಗ್ಗೆ ಕೋರ್ಟಿನಲ್ಲಿ ನಾನು ತಿಳಿದು ಕೊಂಡಿರುವ ಪ್ರಕಾರ The matter which is directly involved before the court amounts to subjudice and cannot be discussed in this House pending disposal of the matter which is before the Court. ಮಾನ್ಯ ಬಂಗಾರಪ್ಪನವರು ಹೇಳಿದರು, ಯಾರು ಕೋರ್ಟಿಗೆ ರಿಟ್ ಹೋಗಿದ್ದಾರೆ, ಅವರ ವಿಷಯ ಹೇಳುವುದಿಲ್ಲ, ಅವರನ್ನು ಬಿಟ್ಟು ಎಂದು ಅಂದರೆ the issue is that a particular gentleman has challanged the validity of the order by the Government. That is the issue which is directly involved before the court and now my learned friend Sri Bangarappa wants to raise it berore this House. If he speaks on other matters, we have no objection. There cannot be any dicussion with regard to the challenge made before the court.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ, ವಾದ ಬಹಳ ಆಯಿತು. ಸುಮಾರಾಗಿ ನಮ್ಮ ಸದನದ ಬೇರೆ ಕಾರ್ಯಕಲಾಪಗಳನ್ನು ನಿಲ್ಲಿಸತಕ್ಕಂತಹ ವಾದ ಇದು ಆಗಬಹುದು. ಉದಾಹರಣೆಗೆ ಮೆಡಿಕಲ್ ಕಾಲೇಜು ಸೀಟು ವಿಚಾರದಲ್ಲಿ ಇಂಜಿನಿಯರಿಂಗ್ ಕಾಲೇಜು ಸೀಟು ವಿಚಾರದಲ್ಲಿ, ಒಬ್ಬರು ಕೋರ್ಟಿನಲ್ಲಿ ರಿಟ್ ಪಿಟೀಷನ್ ಹಾಕುತ್ತಾರೆ ಸೀಟಿಗೆ ಧಕ್ಕೆ ಆಗಿದೆ, ಸರಕಾರದ ನೀತಿ ಸರಿಯಾಗಿಲ್ಲ ಎಂದು ಹೇಳುತ್ತಾರೆ. ಅದನ್ನು ನಾವು ಇಲ್ಲಿ ಚರ್ಚೆ ಮಾಡಬಾರದೇ? ಒಬ್ಬರು ಸರ್ವೀಸ್‌ರೂಲ್ಸನ್ನು ಪ್ರಶ್ನೆ ಮಾಡುತ್ತಾರೆ. ಅದರ ಬಗ್ಗೆ ನಾವು ಚರ್ಚೆ ಮಾಡಬಾರದೇ ? ಲಿಕ್ಕರ್ ಲೈಸನ್ಸ್ ಬಗ್ಗೆ ಯಾರೋ ಒಬ್ಬರು ಪ್ರಶ್ನೆ ಮಾಡುತ್ತಾರೆ. ಆಗ ನಾವು ಇಲ್ಲಿ ಚರ್ಚೆ ಮಾಡಬಾರದೇ ಹಾಗಾದರೆ ನಮಗೆ ವಿಧಾನ ಸಭೆಯಲ್ಲಿ ಯಾವ ಕಾರ್ಯಕಲಾಪಗಳಲ್ಲಿ ಯಾವುದೇ ಕೆಲಸವೂ ಇಲ್ಲ ಎಂದು ತೀರ್ಮಾನಕ್ಕೆ ಬರಬೇಕಾಗುತ್ತದೆ. ಆದುದರಿಂದ ಇದನ್ನು ಅಷ್ಟು ಸುಲಭವಾಗಿ ಪರಿಗಣಿಸುವಂತಹ ವಿಚಾರವಲ್ಲ. ಅಧ್ಯಕ್ಷರೇ, ಈ ಸಂದರ್ಭದಲ್ಲಿ ನಾವು ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ. ೧೧–೪–೮೫ರ ಪ್ರಕಾರ, ಕೋರ್ಟಿನಲ್ಲಿರತಕ್ಕ ವಿಚಾರದಲ್ಲಿ ಇಲ್ಲಿ ಚರ್ಚೆಗೆ ಬರಬಾರದು.

ಅಧ್ಯಕ್ಷರು.—ರೂಲ್ ನಂಬರ್ ೩೧೦ ನೋಡಿ.

ಶ್ರೀ ರಾಮಕೃಷ್ಣ ಹೆಗಡೆ.—ಅಧ್ಯಕ್ಷರೇ, Rule 310 says.

"A member while speaking shall not refer to any matter of fact on which a judicial decision is pending.",

Here a judicial decision is pending, Except that matter the Hon'Leader of opposition can refer to any other matters. ಇಡೀ ಎಕ್ಸೈಜ್ ಡಿಪಾರ್ಟ್‌ಮೆಂಟಿನೊಳಗೆ ಯಾವ ವಿಚಾರ ಬೇಕಾದರೂ ಅವರು ಹೇಳಲಿ ಈ ವಿಚಾರದಲ್ಲಿ ಎಕ್ಸೈಜ್ ಕಮೀಶನ್‌ರವರ ಆರ್ಡರ್ ವಿಚಾರದಲ್ಲಿ ಇಲ್ಲಿ ಅವರು ಅಭಿಪ್ರಾಯವನ್ನು ಅಥವಾ ಬೇರೆ ಯಾವ ಸದಸ್ಯರೇ ಆಗಲೀ, ಅವರ ಅಭಿಪ್ರಾಯವನ್ನು ವ್ಯಕ್ತಮಾಡತಕ್ಕಂತಾದ್ದು ರೂಲ್ಸ್ ಪ್ರಕಾರವೂ ಬರುವುದಿಲ್ಲ. ಅದು ಸಬ್ ಜೂಡೀಸ್ ಆಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ೧೯೮೪ರಲ್ಲಿಯೂ ಕೂಡಾ ಇದೇ ವಿಚಾರದಲ್ಲಿ ರಿಟ್ ಪಿಟಿಷನ್ ಬಂದಿತ್ತು ಸರ್ಕಾರದವರು ಕಾಂಪ್ರಮೈಸ್ ಮಾಡಿಕೊಂಡಿದ್ದಾರೆ. ಕಳೆದ ವರ್ಷ ೧೯೮೪-೮೫ರ ಎಕ್ಸೈಜ್ ಇಯರ್‌ನಲ್ಲಿ ಅದು ಜಾರಿಗೆ ಬರಬಾರದು, ಅದು, ೧೯೮೫-೮೬, ಅಂದರೆ ಜುಲೈ ಒಂದನೇ ತಾರೀಖಿನಿಂದ ಈ ಬಾಟ್ಲಿಂಗ್ ಸಿಸ್ಟಮ್ ಜಾರಿಗೆ ಬರಬೇಕು ಎಂಬ ಒಂದು ವಿಚಾರ ಕೂಡಾ ಕಾಂಪ್ರಮೈಸ್ ಆಗಿದೆ. ಇದು ಮುಗಿದು ಹೋಗಿರತಕ್ಕಂತಹ ವಿಚಾರ. ಮತ್ತೊಬ್ಬ ರಿಟ್ ಪಿಟಿಷನರ್ ಬೇರೆ ಕಾರಣಗಳಿಂದ ಹೋಗಿ ಇವನ್ನು ಪ್ರಸ್ತಾಪ ಮಾಡಿರಬಹುದು. ರಾಜಿಯಾಗಿ ಆ ಕೆಲಸ ಅಲ್ಲಿಯೇ ಮುಗಿದಿರತಕ್ಕಂತಹ ವಿಚಾರ ಆಗಿ ಇರಬಹುದು. ನಂಬರ್ ಬೇರೆ, ಬೇರೆ ಇರಬಹುದು ನಾವು ಅವರ ಹೆಸರು ಹೇಳಲಿಲ್ಲವಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಅಧ್ಯಕ್ಷರೆ, ಎರಡೂ ವಿಚಾರಗಳೂ ಒಂದಕ್ಕೊಂದು ಸಂಬಂಧ ಇಲ್ಲ ಈಗ ಅವರು ಏನು ಹೇಳಿದ್ದಾರೆ ಎಂದರೆ ಸರಕಾರದವರು ರಾಜಿ ಮಾಡಿಕೊಂಡರು ಎಂದು. ಸರಕಾರ ರಾಜಿ ಮಾಡಿಕೊಂಡಿಲ್ಲ. ಈ ಹೊಸ ಪದ್ಧತಿಯನ್ನು ಡಿಸೆಂಬರ್ ತಿಂಗಳಿನಿಂದಲೋ, ಜುಲೈ ತಿಂಗಳಿನಿಂದಲೋ ಕಳೆದ ವರ್ಷ ಜಾರಿಗೆ ತರಬೇಕೆಂದಿರತಕ್ಕಂತಾದ್ದು ಸರಕಾರದ ಇಚ್ಛೆ ಇತ್ತು, ಆಗ ಅರಾಕ್ ಕಂಟ್ರಾಕ್ಟರು ಹೇಳಿದರು, ಈ ಸಂದರ್ಭದಲ್ಲಿ ನೀವು ಜಾರಿಗೆ ತಂದರೆ ನಮಗೆ ನಷ್ಟ ಆಗುತ್ತದೆ, ಅದಕ್ಕಾಗಿ ಇದನ್ನು ಜಾರಿಗೆ ತರಕೂಡದು ಎಂದು ಹೇಳಿದರು. ಅವರು ಹೈಕೋರ್ಟಿಗೂ ಹೋದರು. ಹೈಕೋರ್ಟಿಗೆ ಹೋದಮೇಲೆ, ಅಲ್ಲಿ ಅವರ ಪಕ್ಷದ ವಕೀಲರು ಮತ್ತೊಂದು ಪಕ್ಷದ ವಕೀಲರು, ಇಬ್ಬರಲ್ಲಿಯೂ ಒಂದು ರಾಜಿ ಆಯಿತು. ಏನು ಅಂದರೆ, ಇಲ್ಲ, ಇದನ್ನು ಸರ್ಕಾರದವರು ಕಂಪಲ್ಸರಿಯಾಗಿ ಕಡ್ಡಾಯವಾಗಿ ಜಾರಿಗೆ ತರಕೂಡದು, ಈ ವರ್ಷದ ಕಂಟ್ರಾಕ್ಟ್ ಮುಗಿಯುವರೆಗೆ ಅಂದರೆ ಜೂನ್ ೩೦, ೧೯೮೫ರ ವರೆಗೆ ಹಿಂದಿನ ಪದ್ಧತಿಯಲ್ಲಿಯೇ ಹೋಗಬೇಕು. ಒಂದೊಮ್ಮೆ ಬಾಟಲ್ ಮುಖಾಂತರ ಮಾರಾಟ ಮಾಡಲು ಅವರಿಗೆ ಇಚ್ಛೆ ಇದ್ದರೆ ಮಾರಾಟ ಮಾಡಲಿ. ಅದಲ್ಲದೇ ಇದ್ದರೆ, ಹಿಂದಿನಂತೆ ಹೋಗಬೇಕು, ಕಡ್ಡಾಯವಾಗಿ ಬಾಟಲ್ ಮುಖಾಂತರವೇ ಮಾರಾಟ ಮಾಡತಕ್ಕದ್ದು ಎನ್ನತಕಂತದನ್ನು ಅವರು ಜಾರಿಗೆ ತರಕೂಡದು ಎಂದು ಅವರದ್ದೇ ಒಂದು ಒಡಂಬಡಿಕೆ ಆಯಿತು ಕಂಟ್ರಾಕ್ಟರ್‌ರಿಗೆ ಯಾವುದೇ ತರಹದ ಸಂಬಂಧವಿಲ್ಲ. ಈಗ ಅವರು ಎತ್ತಿರತಕ್ಕಂತಾದ್ದು, ಎಕ್ಸೈಜ್ ಕಮಿಷನರ್‌ರವರು ಆರ್ಡರ್ ವಿಚಾರದಲ್ಲಿ ಬಾಟ್ಲಿಂಗ್ ಕಾಂಟ್ರಾಕ್ಟ್ ಕೊಟ್ಟಿರತಕ್ಕಂತಹ ಆರ್ಡರ್ ವಿಚಾರದಲ್ಲಿ. ಅದೇ ಆರ್ಡರ್‌ನ್ನು ಹೈಕೋರ್ಟಿನಲ್ಲಿ ಇವೊತ್ತು ಚಾಲೇಜ್ ಮಾಡಿದ್ದಾರೆ. ಆರು ರಿಟ್‌ಪಿಟಿಷನ್‌ಗಳು ಇವೆ. ಆದುದರಿಂದ ಆ ವಿಚಾರವನ್ನು ಬಿಟ್ಟು ಬೇರೆ ಯಾವುದೇ ವಿಚಾರವನ್ನು ಮಾತನಾಡಿ. ಒಂದು ವಿಚಾರ ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ತಿಳಿಸಲಿಚ್ಛಿಸುತ್ತೇನೆ. ಇದರಲ್ಲಿ ಒಂದು ವೇಳೆ ಏನಾದರೂ ಅಪ್ಯವಹಾರ ನಡೆದಿದೆ ಎಂದು ಇದ್ದರೆ, ಕೋರ್ಟ್ ಆರ್ಡರ್, ಜಡ್ಜ್‌ಮೆಂಟ್ ಬಂದುಬಿಡಲಿ, ಬಂದಮೇಲೆ, ಮತ್ತೆ ಪುನಃ ಚರ್ಚೆ ಮಾಡಲಿ ನನ್ನದೇನೂ ಆಕ್ಷೇಪಣೆ ಇಲ್ಲ. ಅಷ್ಟೇ ಅಲ್ಲ, ಎಲ್ಲಿಯೇ ಅವ್ಯವಹಾರ ಆಗಲೀ, ಯಾರೇ ಮಾಡಲೀ, ಯಾವ ಡಿಪಾರ್ಟ್‌ಮೆಂಟಿನಲ್ಲಿಯೇ ನಡೆಸಲಿ, ಆ ಅವ್ಯವಹಾರವನ್ನು ನಾವು ಖಂಡಿಸುತ್ತೇವೆ. ಸರಕಾರಕ್ಕೆ ನಷ್ಟ ಆಗುವುದಾದರೆ ಆ ನಷ್ಟವನ್ನು ನಿಲ್ಲಿಸತಕ್ಕಂತಹದ್ದು ನಮ್ಮ ಕರ್ತವ್ಯ. ಸೂಚನೆ ಮಾಡತಕ್ಕಂತಹದ್ದು ನಿಮ್ಮ ಹಕ್ಕು. ಆಗ ಅದರ ಬಗ್ಗೆ ನಮ್ಮ ಆಕ್ಷೇಪಣೆ ಇಲ್ಲ. ಹೈಕೋರ್ಟಿನಲ್ಲಿ ವಿಷಯ ಪೆಂಡಿಂಗ್‌ನಲ್ಲಿರುವಾಗ ಇಲ್ಲಿ ಎತ್ತಬಾರದು ಹಾಗಾದರೆ ಏಕೆ ಹೈಕೋರ್ಟ್ ಇರಬೇಕು. ಪ್ರತಿಯೊಂದನ್ನೂ

ಇಲ್ಲಿಯೇ ಎತ್ತ ಬಹುದಲ್ಲ ಹೈಕೋರ್ಟ್ ಹೇಳತಕ್ಕಂತಾದ್ದರ ಅಗತ್ಯ ಏನೂ ಇರುವುದಿಲ್ಲವಲ್ಲ? ಹೈಕೋರ್ಟಿಗೂ ಪ್ರತ್ಯೇಕವಾದಂತಹ ಜೂರಿಸ್‌ಡಿಕ್ಷನ್ ಇದೆ. ವಿಷಯದ ಬಗ್ಗೆ ಹೈಕೋರ್ಟಿನಲ್ಲಿ ಹಕ್ಕು ಬಾಧ್ಯತೆಗಳನ್ನು ಕಾಯತಕ್ಕಂತಹ ಒಂದು ಜವಾಬ್ದಾರಿ ಇದೆ. ಅವರು ಏನಾದರೂ ಹೈಕೋರ್ಟಿಗೆ ಹೋಗದಿದ್ದರೆ, ಮಾನ್ಯ ಬಂಗಾರಪ್ಪನವರ ಹತ್ತಿರ ಅವರೆಲ್ಲರೂ ಬಂದಿದ್ದರೆ, ಅವರು ಇದನ್ನು ಎತ್ತ ಬಹುದಾಗಿತ್ತು. ಆಗ ನನ್ನ ಆಕ್ಷೇಪಣೆ ಇರುತ್ತಿರಲಿಲ್ಲ. ಆದುದರಿಂದ ದಯಮಾಡಿ, ಹೈಕೋರ್ಟಿನಲ್ಲಿರತಕ್ಕಂತಹ ವಿಚಾರಗಳಿಗೆ ಎಂದಿಗೂ ಅವಕಾಶ ಕೊಡಬಾರದು. ಇವರ ಪರಿಣಾಮ ಬಹಳ ಘೋರ ಆಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಶ್ರೀ ಮಾನ್ ರಾಮಕೃಷ್ಣ ಹೆಗಡೆಯವರು ಈ ಸಭೆಯ ಮುಂದಿಟ್ಟಿರತಕ್ಕಂತಹ ವಾದಕ್ಕೆ ಅದಕ್ಕೆ ಸರಿಯಾಗಿ ಇರತಕ್ಕಂತಹ ಸಮಜಾಯಿಷಿ, ಅವರಿಗೆ ಸಿಕ್ಕಿಲ್ಲ ಎಂದು ಕಾಣುತ್ತದೆ. ನಾವು ಇವೊತ್ತಿನ ದಿವಸ ಬಜೆಟ್‌ನ ಮೇಲೆ ಚರ್ಚೆ ಮಾಡುತ್ತಾ ಇದ್ದೇವೆ. ಈ ವಿಷಯ ಬಾಟ್ಲಿಂಗ್‌ನ್ನು ಕೆಲವು ಜನಗಳಿಗೆ ಕೊಟ್ಟಿರತಕ್ಕಂತಹ ವಿಚಾರಆಗಿದೆ. ಎಕ್ಸೈಜ್ ಕಮೀಷನರ್ ಒಂದು ಆರ್ಡರ್‌ನ್ನು ಮಾಡಿದ್ದಾರೆ. ಆರ್ಡರನ್ನು ಯಾವ ಹಿನ್ನೆಲೆಯಲ್ಲಿ ಮಾಡಿರುತ್ತಾರೆ. ಹೇಗೆ ಮಾಡಿರುತ್ತಾರೆ, ಕಂಟ್ರಾಕ್ಟ್ ಆಕ್ಟ್‌ನಲ್ಲಿ ಏನೆನು ಹೇಳಿದೆ ಎಂಬುದನ್ನು ನೋಡಬೇಕು. ಕಾನೂನಿನಲ್ಲಿ ನಮೂದಿಸಿದ ಪ್ರಕಾರ ಮಾಡಬೇಕು.

೩-೩೦ ಪಿ.ಎಂ.

ಟೆಂಡರ್ ಪ್ರಕಾರ ಕಂಟ್ರಾಕ್ಟ್‌ದಾರರ ಷರತ್ತುಗಳು ಟೆಂಡರ್ ಆಫರಿಂಗ್ ಮತ್ತು ಷರತ್ತುಗಳಿಗೆ ಒಪ್ಪುವುದು ಇವೆಲ್ಲಾ ಇದ್ದೇ ಇರುತ್ತವೆ. ಅದನ್ನು ಯಾರು ಯಾರು ಮಾಡಿರುತ್ತಾರೆ, ಮತ್ತು ಯಾರ ಟೆಂಡರನ್ನು ಆದರೂ ಸರ್ಕಾರದವರು ಒಪ್ಪಿದ್ದಾರೆಯೇ ? ಹಾಗಿದ್ದಲ್ಲಿ ಯಾರ ಟೆಂಡರನ್ನು ಒಪ್ಪಿದ್ದಾರೆ, ಯಾರ ಟೆಂಡರನ್ನು ಒಪ್ಪಿಲ್ಲ ಎಂಬುದರ ಬಗ್ಗೆ ಒಂದು ನೀತಿಯ ವಿಚಾರ ಇಲ್ಲಿದೆ. ಕಾಂಟ್ರಾಕ್ಟ್ ಆಕ್ಟ್ ಪ್ರಕಾರ ತರ್ಕಮಾಡತಕ್ಕ ವಿಚಾರ ಇದು. ಬಜೆಟ್ ಮೇಲೆ ಭಾಷಣ ಮಾಡುವಾಗ, ಯಾವುದೋ ಒಂದು ವಿಷಯದಲ್ಲಿ, ಯಾರೋ ಕೋರ್ಟಿಗೆ ಹೋಗಿ, ತನಗೆ ತೊಂದರೆಯಾಗಿದೆ ಎಂದು ಸ್ಟೇ ಆರ್ಡರ್ ತೆಗೆದುಕೊಂಡು ಬಂದರೆ ಅಥವಾ ಅದನ್ನು ಅವರು ತಿರಸ್ಕರಿಸಿದ್ದಾರೆಯೇ ಎಂಬುದು ತಿಳಿಯಬೇಕು. ಒಟ್ಟಿನಲ್ಲಿ, ವೈಯಕ್ತಿಕ ಕುಂದುಕೊರತೆಗಳು ಏನಿವೆ ಅವು ಇಲ್ಲಿ ಬೇಕಾಗಿಲ್ಲ. ಬೇರೆಯವರಿಗೆ ಇದನ್ನು ಕೊಟ್ಟಿದ್ದಾರೆ, ಕೊಟ್ಟಿರತಕ್ಕಂಥಾದ್ದು ಕಾಂಟ್ರಾಕ್ಟ್ ಆ್ಯಕ್ಟ್ ಪ್ರಕಾರ ಸರಿಯಾಗಿಲ್ಲ. ಇದನ್ನು ತರ್ಕ ಮಾಡಬಾರದು, ಇದು ಸರಿಯಲ್ಲ, ಎಂಬ ಯಾವ ವಾದ ಇದೆ, ಅದು ಸರಿಯಲ್ಲ. ಅವರೂ ಅನುಭವಿಗಳೂ ಇದ್ದಾರೆ, ನಾವೂ ಅನುಭವಿಗಳು ಇದ್ದೇವೆ. ಆದರೆ ಸಬ್‌-ಜ್ಯುಡೀಸ್ ಎನ್ನತಕ್ಕದ್ದು ಏನಿದೆ, ಈ ಸಭೆಗೆ ಇಲ್ಲದಿರತಕ್ಕ ಅಧಿಕಾರ ಹೈಕೋರ್ಟಿಗೆ ಇದೆ ಎಂದಲ್ಲ, ಹೈಕೋರ್ಟಿನಲ್ಲಿರತಕ್ಕ ಯಾವ ಅಂಶಗಳ ವಿಚಾರವನ್ನು ಚರ್ಚೆ ಮಾಡಬಾರದು ಎಂಬುದು ಒಂದು ನೀತಿ. ಆದರೆ, ಮಾಡಲೇ ಬಾರದು ಎಂದು ಎಲ್ಲಿ ಹೇಳಿದೆ ? ಈ ಶಾಸಕಾಂಗದ ಒಂದು ಫೋರಂ ಏನಿದೆ, ಇದು ಸಾರ್ವಭೌಮತ್ವದ ಸಭೆ, ಸಾವರಿನ್ ಬಾಡಿ ಮತ್ತು ಸುಪ್ರೀಂ ಬಾಡಿ, ಏನು ಬೇಕಾದರೂ ತರ್ಕ ಮಾಡಲಿಕ್ಕೆ ಇದಕ್ಕೆ ಅಧಿಕಾರ ಉಂಟು. ಆದರೆ ಸಬ್‌ಜ್ಯುಡಿಸ್ ಇದ್ದರೆ ಅದನ್ನು ಇಲ್ಲಿ ಎತ್ತಬಾರದು ಎಂದು ನಾವು ಒಂದು ಮಿತಿಯನ್ನು ಹಾಕಿಕೊಂಡಿದ್ದೇವೆ ಅಷ್ಟೆ. ಮಾಡಬಾರದೆಂದು ಏನೂ ಇಲ್ಲ. ಮಾನ್ಯ ಬಂಗಾರಪ್ಪನವರ ವಾದ, ತಮ್ಮ ಮುಂದಿರತಕ್ಕ ವಾದ, ಇದೇ ಕಾಂಟ್ರಾಕ್ಟ್ ಆಕ್ಟ್ ಪ್ರಕಾರ, ಬಾಟಲಿಂಗ್ ಕಾಂಟ್ರಾಕ್ಟ್ ಯಾರಿಗೆ ಕೊಡಬೇಕು, ಯಾರಿಗೆ ಕೊಡಬಾರದು. ನೀತಿ ಏನು, ಎಂದು ಕಾಂಟ್ರಾಕ್ಟ್ ಆಕ್ಟ್ ಪ್ರಕಾರ ವಾದವನ್ನು ಮುಂದಿಡುವಾಗ, ಅದು ಸಬ್‌ಜ್ಯುಡೀಸ್ ಆಗುತ್ತದೆ ಎಂದು, ಎಕ್ಸೈಸ್ ಡಿಪಾರ್ಟ್‌ಮೆಂಟ್ ಮೇಲೆ ತರ್ಕವನ್ನೇ ಬಿಟ್ಟು ಬಿಡುವುದು, ನಾವು ಅದರ ಮೇಲೆ ಮಾತನಾಡಬಾರದು, ಎಂದರೆ ಹೇಗೆ ? ಹಾಗಾದರೆ ಎಕ್ಸೈಸ್ ಡಿಪಾರ್ಟ್‌ಮೆಂಟ್‌ಗೂ ಬಾಟಲಿಂಗ್ ಕಾಂಟ್ರಾಕ್ಟ್‌ಗೂ ಸಂಬಂಧವೇ ಇಲ್ಲವೇ ? ಯಾರೋ ಒಬ್ಬ ಮನುಷ್ಯ ತನ್ನ ಕಷ್ಟ ಸುಖ ಹೇಳಲಿಕ್ಕೆ ಹೋಗಿದ್ದಾನೆ. ಅದರ ಹಿನ್ನೆಲೆಯಲ್ಲಿ ಇಲ್ಲಿ ನಾವು ತರ್ಕ ಮಾಡಬಾರದು, ನಮಗೆ ಅಧಿಕಾರ ಇಲ್ಲ, ಎಂದು ಹೇಳತಕ್ಕದ್ದು ಸರಿಯಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಈ ನಿಲುವನ್ನು ತಳೆಯಬಾರದು. ಇಂತಹ ನಿಲುವನ್ನು ತಳೆಯಬಾರದು. ಇವರ ಬಗ್ಗೆ ಫ್ರೀಯಾಗಿ ಸ್ವತಂತ್ರವಾಗಿ ತರ್ಕ ಮಾಡಬೇಕು. ನೀತಿ ಲೋಪ ಆಗಿದ್ದರೆ ಅದನ್ನು ತಿದ್ದಿಕೊಳ್ಳಲಿ. ಅದನ್ನು ಬಿಟ್ಟು ತರ್ಕ ಮಾಡಬೇಡಿ ಎಂದರೆ, ಅದು ಬುಡವಿಲ್ಲದ ಮಾತು, ಅದಕ್ಕೆ ಅರ್ಥವಿಲ್ಲ ಎಂದು ಹೇಳುತ್ತೇನೆ.

ಶ್ರೀ ಬಿ. ರಾಚಯ್ಯ.—ಸ್ವಾಮಿ, ಪ್ರಾಕ್ಟೀಸ್ ಅಂಡ್ ಪ್ರೊಸೀಜರ್ ಇನ್ ಪಾರ್ಲಿಮೆಂಟ್ಸ್ ಇದರಲ್ಲಿ ಪೇಜ್ ೯೧೧ ರಲ್ಲಿರುವ ಕೆಲವು ಅಂಶಗಳನ್ನು ನಾನು ಓದುತ್ತೇನೆ. ಈ ರೀತಿ ಇದೆ.

> "Further, in case the Chair holds that a matter is subjudice, the effect of this ruling is that the discussion of the matter is postponed till judgement of the court is delivered."

ಎಂದು ಜಡ್ಜ್‌ಮೆಂಟ್ ಆದಮೇಲೆ ಏನಾದರೂ ಮಾಡಿಕೊಳ್ಳಬಹುದು. ಅಲ್ಲಿ ಇದಕ್ಕೆ ಸಂಬಂಧ ಪಟ್ಟಹಾಗೆ ಸಸ್ಪೆನ್ಸ್ ಇದ್ದರೆ ಅವುಗಳನ್ನು ಡಿಸ್ಕಸ್ ಮಾಡಕೂಡದು. ಇಲ್ಲಿ ಅದೇ ಮ್ಯಾಟರ್ ಸಬ್‌ಜುಡೀಸ್ ಇರುವುದರಿಂದ ಅದಕ್ಕೆ ಸಂಬಂಧಪಟ್ಟ ಹಾಗೆ ಬಿಟ್ಟು ನೀವು ಮಾತನಾಡುವುದಕ್ಕೆ ಅಭ್ಯಂತರ ಇಲ್ಲ.

ಅಧ್ಯಕ್ಷರು.—ಅದನ್ನು ಬಿಟ್ಟು ಮಾತನಾಡಿ.

ಶ್ರೀ ಕೆ.ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಮಾನ್ಯ ರಾಚಯ್ಯನವರು ೯೧೧ನೇ ಪೇಜ್ ಕೋಟ್ ಮಾಡಿರುತ್ತಾರೆ. ತಾವು ಸಭಾಧ್ಯಕ್ಷರಾಗಿದ್ದೀರಿ. ತಾವು ವಕೀಲರು ಆಗಿದ್ದಿರಿ. ಇದರೊಳಗೆ ಸ್ಪಷ್ಟವಾಗಿ ನಮೂದು ಮಾಡಿದೆ. ಫ್ರೀಡಮ್ ಆಫ್ ಸ್ಪೀಚ್ ಯಾವ ಮನುಷ್ಯ ಇರುತ್ತಾನೆ, ಅವನಿಗೆ ಈ ಸದನದಲ್ಲಿ ಮಾತನಾಡುವ ಹಕ್ಕನ್ನು ಮೊಟಕುಗೊಳಿಸಬಾರದು. ಸಬ್‌ಜ್ಯುಡೀಸ್ ಆಧಾರದ ಮೇಲೆ ಯಾರ ಒಂದು ಹಕ್ಕಿಗೂ ಚ್ಯುತಿ ತರಬಾರದು. ಯಾವುದು ಸಬ್‌ಜ್ಯುಡೀಸ್ ಎಂಬುದನ್ನು ತಾವು ವಿವೇಚನೆ ಮಾಡಿ ನಿರ್ಣಯ ಕೊಡುವಂತಹ ಅಧಿಕಾರ ತಮಗಿದೆ. ಸಬ್-ಜ್ಯುಡೀಸ್ ಯಾವ ಯಾವುದು ಆಗುತ್ತದೆ ಎಂಬುದನ್ನು ನಿರ್ಣಯ ಮಾಡುವ ಹಕ್ಕು ತಮಗಿದೆ.

ಶ್ರೀ ರಮೇಶ್ ಜಿಗಜಿಣಗಿ.—ಅವರು ನಿರ್ಣಯ ಕೊಟ್ಟಿದ್ದಾರೆ.

ಅಧ್ಯಕ್ಷರು.—ನಾನು ಹಿಂದಿನ ಕೆಲವು ರೂಲಿಂಗ್ಸ್ ಇದೆ, ಅದನ್ನು ನೋಡುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಈ ಪುಸ್ತಕದಲ್ಲಿ ೯೧೧ರಿಂದ ೯೧೪ನೇ ಪೇಜ್ ವರೆಗೆ ತಾವೇ ಓದಿ ನೋಡಿ, ನಾನು ಓದಿದರೆ ತಡವಾಗುತ್ತದೆ. ಕೆಲವು ಅಂಶಗಳನ್ನು ಮಾತ್ರ ಇಲ್ಲಿ ಹೇಳುತ್ತೇನೆ. "The rule of subjudice applies only in regard to the specific issues before the Court." ಅಲ್ಲೇನಿದೆ, ಒಬ್ಬ ಮನುಷ್ಯ ತನಗೆ ಸಿಕ್ಕತಕ್ಕಂಥಾದ್ದು ಏನಿದೆ, ಅದು ಎಕ್ಸೈಸ್ ಕಮಿಷನರ್ ಆರ್ಡರ್ ಪ್ರಕಾರ ತನಗೆ ಸಿಗಲಿಲ್ಲ. ಬೇರೆ ಯಾವರಿಗೆ ಸಿಕ್ಕಿದೆ, ನನಗೆ ಅದನ್ನು ಕೊಡಿಸಿಕೊಡಿ ಎಂದು ರಿಟ್ ಫೈಲ್ ಮಾಡಿರುತ್ತಾನೆ. ಬಂಗಾರಪ್ಪನವರು ಹೇಳುತ್ತಿರುವುದು ಎಕ್ಸೈಸ್ ಕಮಿಷನರ್ ಆರ್ಡರ್ ಬಗ್ಗೆ ಅಲ್ಲ, ನೊಂದವನ ಬಗ್ಗೆ ಅಲ್ಲ. ಅವರ ವಾದ ಇರುವುದು ಗೌರ್ನಮೆಂಟ್ ಇದರೊಳಗೆ ಹೊಂದಿರುವ ಲಾಸ್ ಆಫ್ ರೆವೆನ್ಯೂ ಬಗ್ಗೆ, ಆದಕಾರಣ ಅದರ ಬಗ್ಗೆ ವಿಚಾರ ಮಾಡಬೇಕೆಂದು ಹೇಳುತ್ತೇನೆ. ಈ ಮಾತನ್ನು ಈ ಸದನದಲ್ಲಿ ಮಾತನಾಡುವುದು ಬಿಡುವುದು ಅದು ತಮಗೆ ಬಿಟ್ಟಿದ್ದು. ಈ ನಿರ್ಣಯ ಎಜುಕೇಷನ್ ಬಿಲ್‌ನಲ್ಲಿ ತಾವು ಮಾಡಿರುತ್ತೀರಿ. ಎಜುಕೇಷನ್ ಬಿಲ್ ಮೇಲೆ ಕೋರ್ಟಿನಲ್ಲಿ ಆರ್ಗ್ಯುಮೆಂಟ್ ನಡೆಯುತ್ತಿದೆ. ನಿನ್ನೆ ನಡೆಯಿತು, ಇವತ್ತು ನಡೆಯುತ್ತಿದೆ, ನಾಳೆ ನಡೆಯುತ್ತದೆ. ಈ ವಿಷಯ ಬಂದಾಗ ತಾವು ರೂಲಿಂಗ್ ಕೊಟ್ಟಿದ್ದೀರಾ ? ಯಾವುದಾದರೂ ಒಬ್ಬ ಮನುಷ್ಯ ಹೈಕೋರ್ಟಿಗೆ ಹೋಗಿ ನನಗೆ ಪ್ರಮೋಷನ್ ಕೊಟ್ಟಿಲ್ಲ ಎಂದು ರಿಟ್ ಫೈಲ್ ಮಾಡಿದರೆ, ಅದು ಅವನ ಪ್ರಮೋಷನ್‌ಗೆ ಸ್ಟೇ ಆಗುತ್ತದೆ. ಅದರ ಬಗ್ಗೆ ಮುಂದೆ ಯಾವ ರೀತಿಯಾಗಿಯೂ ಮಾತನಾಡದೇ ಇರಬೇಕೆ ? ಇದನ್ನು ನಾನು ಒಪ್ಪುವುದಿಲ್ಲ, ನಿಜವಾಗಿಯೂ ಸಬ್‌ಜ್ಯುಡೀಸ್ ಎಂಬ ನಿರ್ಣಯ ಈ ಸದನದಲ್ಲಿ ಮಾಡಿ ನಮ್ಮ ಭಾಷಣ ಮಾಡುವ ಹಕ್ಕನ್ನು ಮೊಟಕುಗೊಳಿಸಿದರೆ ಹೇಗೆ ? ಹಾಗಾದರೆ ಬಜೆಟ್ ಏತಕ್ಕೆ ಇಟ್ಟಿರಿ ? ಹಾಗಾದರೆ ಬಾಟಲಿಂಗ್ ಇದರ ಬಗ್ಗೆ ಇವತ್ತು ಆ ಐಟಮ್ ಬಿಟ್ಟು ಬಿಡೋಣ. ಅದಕ್ಕೆ ಇವತ್ತು ನಾವು ಓಟು ಹಾಕಬೇಕಾ ? Are you expecting us to vote for that demand.

SRI RAMAKRISHNA HEGDE —There is no separate......

SRI K.H. PATIL. —I can understand that. The Speaker should also take extra care that the judgment should not be either prejudiced or affected. With this caution let him proceed.

ಶ್ರೀ ರಾಮಕೃಷ್ಣ ಹೆಗಡೆ.—ಮೊನ್ನೆ ತಾನೆ ರಾಯಭಾಗ್‌ನಲ್ಲಿ ನಡೆದಿರತಕ್ಕಂಥ ಒಂದು ಘಟನೆಯ ವಿಚಾರದಲ್ಲಿ, ಈ ವಿಚಾರ ಇಲ್ಲಿ ಬಂದಾಗ. ಆ ಕಡೆ ಕುಳಿತಂಥ ಸದಸ್ಯರೂ ಒಪ್ಪಿದರು, ತಾವು ಒಪ್ಪಿದಿರಿ. ಈ ವಿಚಾರ ಹೈಕೋರ್ಟ್‌ನಲ್ಲಿ ಪೆಂಡಿಂಗ್ ಇರುವುದರಿಂದ ಚರ್ಚೆ ಆಗಕೂಡದು. ಎಜುಕೇಷನ್ ಬಿಲ್ ಬೇರೆ. ಅದು legality ವಿಚಾರದಲ್ಲಿ ಮಾತ್ರ ಇದೆ. ಮತ್ತೊಂದು ಪಾರ್ಲಿಮೆಂಟರಿ ಪ್ರೊಸೀಜರ್ ಇನ್ ಇಂಡಿಯಾ ಇದರಿಂದ ನಾನು ಮತ್ತೊಂದು ಎರಡು ವಾಕ್ಯವನ್ನು ಓದಲಿಕ್ಕೆ ಬಯಸುತ್ತೇನೆ. ಇದರಿಂದ ಇದು ಮತ್ತಷ್ಟು ಸ್ಪಷ್ಟವಾಗುತ್ತದೆ. ಏತಕ್ಕೆ ಸಬ್‌ಜ್ಯುಡೀಸ್ ಮಾಡಬೇಕೆಂದು ಅವರು ಹೇಳಿದ್ದಾರೆ.

> "...because no contempt proceedings may be drawn up. If comments are made in the House in regard to any matter pending before a court by reason of the privilege of freedom of expression. *the House itself prohibits* any such comments. for it is of paramount importance that the stream of justice must be kept clear and pure."

ಅಲ್ಲೂ ಚರ್ಚೆ ನಡೆಯುತ್ತಿದೆ, ಇಲ್ಲೂ ನಡೆಯುತ್ತಿದೆ ಎಂದರೆ ಏನು ಅರ್ಥ ? ಯಾರು ಜಡ್ಜ್‌ಮೆಂಟ್ ಕೊಡುತ್ತಾರೆ ಅವರು ನಿಷ್ಪಕ್ಷಪಾತವಾಗಿ, ಯಾವುದೇ ರೀತಿಯ ಹೊರಗಿನ ಪ್ರಭಾವ ಇಲ್ಲದೆ ಜಡ್ಜ್‌ಮೆಂಟ್ ಕೊಡಬೇಕೆಂದು ಉದ್ದೇಶ ಅಷ್ಟೆ. So the stream of justice must be kept clea r and pure.

> "It seems therefore that only those comments which may amount to contempt of court will not be allowed to be made in the House. A matter becomes subjudice as soon as a person is brought before a court whether actually trial is taking place or not; a matter is subjudice when a Writ Petition is pending before the High Court but not when a Petition for admission is pending; a matter decided by the court but open to appeal is not subjudice unless an appeal has actually been filed."

If it has gone to appellate court, then also it becomes subjudice.

> "It has been ruled that the test of subjudice should be that the matter sough to be raised in the House is substantially identical with the one on which a court of law has to adjudicate. The bar of subjudice will not however apply after the judgement is delivered unless the matter again becomes subjudice on an appeal being filed in a High Court."

ಈಗ ಅವರು ಹೇಳಿದರು—ಎಕ್ಸೈಸ್ ಡಿಪಾರ್ಟ್‌ಮೆಂಟ್ ಚರ್ಚೆ ಬಿಡಬೇಕು, ಚರ್ಚೆ ಬೇಡ ಬಿಡಿ ಎಂದು ಹೇಳಿದರು. ಎಕ್ಸೈಸ್ ಡಿಪಾರ್ಟ್‌ಮೆಂಟ್ ಒಳಗೆ ಒಳ್ಳೆಯ ಕೆಲಸ ಆದದ್ದು ನಿಮ್ಮ ಕಣ್ಣಿಗೆ ಕಾಣಲಿಕ್ಕಿಲ್ಲ. ಕೆಟ್ಟ ಕೆಲಸ ಏನಾಗಿದೆ ಅದನ್ನು ಹೇಳಿ. ಇದೊಂದು ವಿಚಾರ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಇನ್ನೂ ಬಹಳ ಕೆಟ್ಟ ಕೆಲಸಗಳು ಇವೆ.

ಶ್ರೀ ರಾಮಕೃಷ್ಣ ಹೆಗಡೆ.—ಯಾರಿಗೆ ಗೊತ್ತು. ಹೋದ ವರ್ಷ ರೆಕ್ಟಿಫೈಡ್ ಸ್ಪಿರಿಟ್ ವಿಚಾರವಾಗಿ ಇಲ್ಲಿ ಆಗ್ರಹಪೂರ್ವಕವಾಗಿ ಕೇಳಿದರು. ಜ್ಯುಡಿಷಿಯಲ್ ಕಮಿಷನ್ ಮಾಡಿ ಎಂದು ಹೇಳಿದರು ಆಗ ನಾನು ಹೇಳಿದೆ, ಜ್ಯುಡಿಷಿಯಲ್ ಕಮಿಷನ್ ಮಾಡುತ್ತೇನೆ, ಸರಕಾರದವರು ಮಾಡಿದ್ದು

ತಪ್ಪು, ಅವ್ಯವಹಾರ ಆಗಿದೆ ಎಂದರೆ ನಾನು ರಾಜೀನಾಮೆ ಕೊಡುತ್ತೇನೆ, ಇಲ್ಲದೇಹೋದರೆ ನೀವು ರಾಜೀನಾಮೆ ಕೊಡುತ್ತೀರಾ ಎಂದು ನಾನು ಕೇಳಿದೆ. ನಾನು ಕೊಡುವುದಿಲ್ಲ ಏತಕ್ಕೆ ಕೊಡಬೇಕು ಎಂದು ಅವರು ಕೇಳಿದರು.

ಶ್ರೀ ರಾಮಕೃಷ್ಣ ಹೆಗಡೆ.—ಈ ಸಲ ಸಹ ಈ ವಿಚಾರ ಎತ್ತಿದ್ದಾರೆ. ಈ ವಿಚಾರದಲ್ಲಿ ಜುಡಿಷಿಯಲ್ ಕಮಿಷನ್ ಮಾಡಬೇಕೆಂದರೆ ತಯಾರಾಗಿದ್ದೇನೆ. ಆದರೆ ಈ ವಿಚಾರ ಕೋರ್ಟ್ ಮುಂದೆ ಇರುವುದರಿಂದ ಸಾಧ್ಯವಾಗುವುದಿಲ್ಲ. ನಾವು ಈಗ್ಗೆ ಕಳೆದ ಎರಡೂವರೆ ವರ್ಷಗಳಿಂದ ಕೆಲವೊಂದು ಪದ್ಧತಿಯನ್ನು ಅನುಸರಿಸಿಕೊಂಡು ಬಂದಿದ್ದೇವೆ. ಆ ಪದ್ಧತಿಯಂತೆ ಮುಂದೆ ಕೂಡ ಹೋಗಬೇಕು. ಸಾರ್ವಜನಿಕರ ಮನಸ್ಸಿನಲ್ಲಿ, ಸರ್ಕಾರದ ಅಥವಾ ಸರ್ಕಾರದ ಯಾವುದೇ ಒಬ್ಬ ಮಂತ್ರಿ, ಅವರು ಮುಖ್ಯಮಂತ್ರಿಯಾಗಿರಲಿ ಅಥವಾ ಬೇರೆ ಯಾರೇ ಆಗಿರಲಿ, ಅವರ ವ್ಯವಹಾರದ ಬಗ್ಗೆ, ಅವರ ತೀರ್ಮಾನದ ಬಗ್ಗೆ ದುರುದ್ದೇಶವಿದೆ ಅಥವಾ ಅದರಲ್ಲಿ ಅಪ್ರಮಾಣಿಕತೆ ಇದೆ ಎಂದು ಹೇಳತಕ್ಕಂಥ ಒಂದು ಸಂದೇಹ ಸಾರ್ವಜನಿಕರ ಮನಸ್ಸಿನಲ್ಲಿ ಬಂದರೆ ಅದನ್ನು ಕ್ಲಿಯರ್ ಮಾಡುವುದಕ್ಕೆ, ಅದನ್ನು ತೆಗೆದುಹಾಕುವುದಕ್ಕೆ ನಾವು ಕ್ರಮ ತೆಗೆದುಕೊಳ್ಳಲೇಬೇಕು. ನಾವು ಹೋದ ಸಲವೂ ಜುಡಿಷಿಯಲ್ ಕಮಿಷನ್ ಮಾಡತಕ್ಕ ಅಗತ್ಯ ಇರಲಿಲ್ಲ. ನಾನೂ ಕೂಡ ಹೇಳಬಹುದಿತ್ತು. ಹಿಂದಿನ ಮುಖ್ಯ ಮಂತ್ರಿಗಳೂ ಕೂಡ ಅನೇಕ ಸಲ ಹೇಳಿದ್ದಾರೆ. ಕೇಂದ್ರ ಸರ್ಕಾರ ಹೇಳಿದೆ. ನಾವು ವಿರೋಧ ಪಕ್ಷದಲ್ಲಿದ್ದಾಗ ನಿಮ್ಮ ಸರ್ಕಾರ ಹೇಳಿದೆ. ಇದು ಎಲ್ಲಿಯವರೆಗೆ ಬಂತು ಎಂದರೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯವರು ಒಮ್ಮತದಿಂದ ಜುಡಿಷಿಯಲ್ ಕಮೀಷನ್ ಆಗಬೇಕು, ಅವ್ಯವಹಾರ ಆಗಿದೆ ಎಂದು ತೀರ್ಮಾನ ಮಾಡಿದರೂ ಕೂಡ ಹಿಂದಿನ ಸರ್ಕಾರ ಜುಡಿಷಿಯಲ್ ಕಮಿಷನ್ ಮಾಡಲಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರ ಸರ್ಕಾರ ಆಗ ಇತ್ತು. ಆದರೆ ಇಂದು ನಾವು ಮಾಡುತ್ತಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಎನ್‌ಕ್ವೈರಿ ಕಮಿಷನ್ ಮಾಡಿ ಎಂದು ಹೇಳಿದರೂ, ಈ ಸರ್ಕಾರ ಮಾಡಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ನೀವು ಎಲ್ಲೆಲ್ಲಿ ಕೇಳಿದರೂ ಜುಡಿಷಿಯಲ್ ಕಮಿಷನ್ ಮಾಡಿದ್ದೇವೆ. ಅಷ್ಟೇ ಅಲ್ಲ, ಶ್ರೀಮಾನ್ ವೀರಪ್ಪಮೊಯ್ಲಿಯವರು ಯಾವ ಒಂದು ಉದ್ವೇಗದ ಆವೇಶದಲ್ಲಿ ಜುಡಿಷಿಯಲ್ ಕಮಿಷನ್ ಮಾಡಿ ಎಂದು ಹೇಳಿದರು ಆದರೆ ನಮಗೆ ಮಾಡುವ ಇಷ್ಟವಿರಲಿಲ್ಲ. ಶ್ರೀಮಾನ್ ಬೈರೇಗೌಡರು ಅಲ್ಲಿ ಕುಳಿತುಕೊಂಡಿದ್ದರು, ಅವರೂ ಹೇಳಿದರು, ಇವರೂ ಹೇಳಿದರು. ಮಾಡುವಂತಹ ಒಂದು ಪ್ರಸಂಗ ಬಂತು. ನಿಜವಾದ ಕಾರಣ ಇರಲಿಲ್ಲ. ನಾವು ಮಾಡದೇ ಬಿಡಬಹುದಾಗಿತ್ತು ಸುಳ್ಳು ಎಂಬುದನ್ನು ಅವರವರ ಆತ್ಮಕ್ಕೆ ಬಿಡಬಹುದಾಗಿತ್ತು. ಆದರೆ ಇಬ್ಬರೂ ಚಾಲೆಂಜ್ ಮಾಡಿಕೊಂಡರು, ಆಗ ನನಗೆ ಬೇರೆ ಉಪಾಯ ಇರಲಿಲ್ಲ, ಸಾರ್ವಜನಿಕರ ಮನಸ್ಸಿನಲ್ಲಿ ಸಂದೇಹ ಉಂಟಾಗತಕ್ಕ ಮಾತನ್ನು ನಾವು ಸುಲಭವಾಗಿ ಹೇಳಬಹುದು. ಆದರೆ ಸಂದೇಹ ನಿವಾರಣೆಗೆ ನಾವು ಕ್ರಮ ತೆಗೆದುಕೊಳ್ಳಲೆ ಬೇಕಾಗುತ್ತದೆ. ಈಗ ಒಂದು ತತ್ವದ ವಿಚಾರ ಹೇಳುತ್ತಿದ್ದೇನೆ. ಇದೇ ಒಂದು ಪರಿಪಾಠವಾಗಿ ಹೋಗುತ್ತದೆ. ಕೋರ್ಟಿನ ಮುಂದೆ ವಿಚಾರ ಇದ್ದಾಗ, ಜಡ್ಜ್‌ಮೆಂಟ್ ಇದ್ದಾಗ, ಇದರ ಬಗ್ಗೆ ಚರ್ಚೆ ಮಾಡಿದರೆ, ಮಾನ್ಯ ವಿರೋದಪಕ್ಷದವರು ಏನು ಹೇಳಿದರು, ಅದಕ್ಕೆ ಸಂಬಂಧಪಟ್ಟವರು ಉತ್ತರ ಕೊಡುತ್ತಾರೆ. ಆ ಮೇಲೆ ಇದು ಇಲ್ಲಿಗೇ ಮುಕ್ತಾಯವಾಗುವುದಿಲ್ಲ. ಈ ಸರ್ಕಾರ ಎಲ್ಲೂ ಹೊರಟು ಹೋಗುವುದಿಲ್ಲ. ಈ ಸರ್ಕಾರ ಇರುತ್ತದೆ. ಆದ್ದರಿಂದ ಎರಡು ತಿಂಗಳು ತಡವಾಗಿ ತೆಗೆದುಕೊಳ್ಳಿ. ಮುಂದಿನ ಅಧಿವೇಶನದಲ್ಲಿ ತೆಗೆದುಕೊಳ್ಳಿ. ನನಗೆ ಏನೂ ಆಕ್ಷೇಪ ಇಲ್ಲ ಅವ್ಯವಹಾರ ಆಗಿದ್ದರೆ, ಅವ್ಯವಹಾರ ಮಾಡಿದವರಿಗೆ, ಸ್ವಾರ್ಥ ಸಾಧಿಸಿದಂತಹವರಿಗೆ ಶಿಕ್ಷೆ ಆಲೇಗಬೇಕು. ಅದನ್ನು ಇಲ್ಲಿ ಪ್ರಕಟ ಮಾಡಲೇಬೇಕು. ಆದ್ದರಿಂದ ನಾನು ಅವರಿಗೆ ಪುನಃ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ತಮಗೂ ಕೂಡ ಹೇಳುತ್ತೇನೆ. ಈ ಒಂದು ಹೊಸ ಪರಿಪಾಠವನ್ನು ದಯವಿಟ್ಟು ಹಾಕಬೇಡಿ. ಈ ರೀತಿ ಆದರೆ ಮುಂದೆ ರೂಲ್ಸ್ ಪ್ರಕಾರ ನಡೆಯತಕ್ಕ ಅಗತ್ಯ ಇಲ್ಲ, ಎನ್ನುವ ಭಾವನೆ ಎಲ್ಲರಲ್ಲೂ ಉಂಟಾಗುತ್ತದೆ. ಇದಕ್ಕೆ ಅವಕಾಶ ಕೊಡಬೇಡಿ. ಸಬ್‌ಜುಡೀಸ್ ವಿಚಾರದಲ್ಲಿ ಅತ್ಯಂತ ನಿಶ್ಚಿತವಾದ, ಮತ್ತು ಸ್ಪಷ್ಟವಾದ ರೂಲಿಂಗ್ ಇದೆ. ಹಿಂದೆ ಇದ್ದವರೂ ಬೇಕಾದಷ್ಟು ರೂಲಿಂಗ್ ಕೊಟ್ಟಿದ್ದಾರೆ. ಶ್ರೀಮಾನ್ ಬಾಳಿಗಾರವರೂ ಕೂಡ ಹೇಳಿದ್ದಾರೆ. ದಯವಿಟ್ಟು ನೋಡಿ. ವಿರೋಧ ಪಕ್ಷದವರಲ್ಲಿ ಈ ವಿಚಾರವಾಗಿ ಎಷ್ಟು ಮಾಹಿತಿ ಇದೆಯೋ ಅಷ್ಟನ್ನೂ ಸಂಗ್ರಹಿಸಿ ಇಟ್ಟುಕೊಂಡಿರಲಿ ಏನು ಮಾಹಿತಿ ಬೇಕಾದರೂ ತರಿಸಲಿ. ೨-೩ ತಿಂಗಳ ನಂತರ ಅಧಿವೇಶನದಲ್ಲಿ ಏನಾದರೂ ಬೇಕಲ್ಲ. ಈ ವಿಷಯವೊಂದನ್ನು ಬಿಟ್ಟು. ಎಕ್ಸೈಸ್ ಡಿಪಾರ್ಟ್‌ಮೆಂಟ್ ಬೇರೆ ಬೇರೆ ವಿಚಾರದಲ್ಲಿ ಮಾತನಾಡಿ. ಏನಾದರೂ ಬೇರೆ ಅವ್ಯವಹಾರ ಇದ್ದರೆ ಅದನ್ನೂ ಹೇಳಿ.

ಈ ಒಂದು ಎಕ್ಸೈಸ್ ಕಮಿಷನರ್ ಆರ್ಡರ್‌ಗೆ ಸಂಬಂಧಪಟ್ಟಂತೆ ದಯವಿಟ್ಟು ಚರ್ಚೆ ಆಗಕೂಡದೆಂದು ಹೇಳುತ್ತೇನೆ.

ಅಧ್ಯಕ್ಷರು.—ಅಷ್ಟು ಮಾಡಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಸಬ್‌ಜುಡೀಸ್ ವಿಚಾರದಲ್ಲಿ ಇಷ್ಟೆಲ್ಲಾ ಮಾತು ಕತೆ ಆಗಿರುವ ತಾತ್ಪರ್ಯ ಏನೆಂದರೆ, ಈ ಒಂದು ಶಬ್ದವನ್ನು ಸುಮ್ಮನೆ ಜಗ್ಗಿಕಾ ಮಗ್ಗಿ ಹೇಳಿ, ಈ ಚರ್ಚೆಯನ್ನು ಪ್ರತಿಬಂಧಕ ಮಾಡುವುದು ಸಾಧ್ಯವಿಲ್ಲ. ಮತ್ತು ಸಾಧುವೂ ಅಲ್ಲ. ಇದರ ತಾತ್ಪರ್ಯ ನಾವು ಇಲ್ಲಿ ಮಾಡಬೇಕಾದ ಚರ್ಚೆ ನ್ಯಾಯಾಲಯದಲ್ಲಿ ನಡೆಯುತ್ತಿರತಕ್ಕ ವ್ಯವಹಾರದ ಮೇಲೆ ಪೂರ್ವಾಗ್ರಹ ರೂಪದಲ್ಲಿ ಪರಿಣಾಮ ಆಗಬಾರದು. ಈ ತಾತ್ಪರ್ಯವನ್ನು ಇಟ್ಟುಕೊಂಡು ನಾವು ಯೋಚನೆ ಮಾಡ ಬೇಕು. ಮಾನ್ಯ ಅಧ್ಯಕ್ಷರೇ, ನಿಯಮ ೩೧೦ ರಲ್ಲಿ ಶಬ್ದಗಳ ಪ್ರಯೋಗ ಏನಿದೆ ನೋಡೋಣ.

> "A member while speaking shall not refer to any matter of fact on which a judicial decision is pending."

Normally in a writ jurisdiction, the High Court will confine itself only to a matter of law. ಅಷ್ಟೇ ಲಾ ಪ್ರಕಾರ ಏನು ತಪ್ಪಾಗಿ ಬಿಟ್ಟಿದೆ, ಅದನ್ನು ನೋಡುತ್ತೇವೆಯೇ ಹೊರತು, ಬಾಟ್ಲಿಂಗ್ ವ್ಯವಹಾರವಾಗಿ ಮುಖ್ಯವಾದ ಮೇಲೆ, ಬಾಟ್ಲಿಂಗ್ ಕತೆಗಳು ಹೇಗೆ ಹೈಕೋರ್ಟಿನಲ್ಲಿ ಪ್ರಸ್ತಾಪವಾಗಿದೆ. ಮತ್ತು ಬಾಟ್ಲಿಂಗ್ ವ್ಯವಹಾರ ಹೇಗಾಯಿತು ಎನ್ನುವುದನ್ನು ಪ್ರಸ್ತಾಪ ಮಾಡುತ್ತಿದ್ದೇವೆ. ಈಗ ಒಂದು ಮರ್ಡರ್ ಕೇಸ್ ಇದೆ. ಅದ ರಲ್ಲಿ ಫ್ಯಾಕ್ಟ್ ಪ್ರಶ್ನೆ ಇದೆ ಲಾ ಪ್ರಶ್ನೆ ಇದೆ. ಫ್ಯಾಕ್ಟ್ ಬಗ್ಗೆ ಇಲ್ಲಿ ಮಾತನಾಡುವುದಕ್ಕೆ ಹೋದರೆ, ಅದು ಕೋರ್ಟಿನಲ್ಲಿ ಪ್ರಿಜುಡೀಸ್ ಆಗುತ್ತದೆ. ಅದನ್ನು ಮಾತನಾಡಬಾರದು ಎಂದು ಹೇಳುವುದು. ಇಲ್ಲಿಯೂ ಕೂಡ ಮಾತನಾಡಬೇಕಾದರೆ, ಒಂದು ಗಡಿ ಮಾಡಲಾಯಿತು. ಎಲ್ಲೋ ಒಂದುಕಡೆಗೆ, we may like to overstep. ಇದು ಆಗದಂತೆ ನಾವು ತಡೆಯಬೇಕು. ವ್ಯವಹಾರವನ್ನು ಪ್ರಸ್ತಾಪ ಮಾಡುವುದು ಸರಿಯಲ್ಲ. ಬಾಟ್ಲಿಂಗ್ ಒಳಗಡೆ ಇರುವುದು ಸಬ್‌ಜುಡೀಸ್ ಅಷ್ಟೆ. ಬಾಟ್ಲಿಂಗ್ ವ್ಯವಹಾರವೆಲ್ಲಾ ಸಬ್‌ಜುಡೀಸ್ ಅಂತ ನೋಡುವುದಲ್ಲ. ಬಾಟಲ್ ಹಿಡಿಯುವಷ್ಟು ತುಂಬಿ ಅದಕ್ಕೆ ಸಬ್‌ಜುಡಿಸ್ ಎಂದು ಹೇಳಿ. ಬಾಟ್ಲಿಂಗ್ ವ್ಯವಹಾರವೆಲ್ಲಾ ಸಬ್‌ಜುಡಿಸ್ ಎಂದು ಹೇಳಿ, ಚರ್ಚೆ ಆಗುವುದು ಬೇಡವೆಂದು ಹೇಳುವುದು ಸರಿಯಲ್ಲ. ಇದು ಹೈಕೋರ್ಟಿನವರಿಗೆ ಹೋದಾಗ, ಆಗ ತಡೆಯಿರಿ. ಅವರೆ ವಿಧಾನ ಸೌಧದೊಳಗೆ ಇದನ್ನು ತಡೆಯುವುದು ಅಗತ್ಯವಿಲ್ಲ.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ಅದೊಂದು ವಿಷಯ ಬಿಟ್ಟು ಬೇರೆ ವಿಷಯಕ್ಕೆ ಹೋಗಿ.

ಶ್ರೀ ಎಂ. ವೀರಪ್ಪಮೊಯ್ಲಿ.—ನಮ್ಮ ನಾಯಕರನ್ನು ತಾವು ಈ ವಿಚಾರವಾಗಿ ಪ್ರಸ್ತಾಪ ಮಾಡುವುದಕ್ಕೆ ಬಿಡುವುದು ಇದ್ದರೆ, ನಮ್ಮದೇನೂ ಚರ್ಚೆ ಇಲ್ಲ. ತಾವು ಒಂದು ತೀರ್ಮಾನ ಹೇಳ ಬೇಕಾಗುತ್ತದೆ.

ಅಧ್ಯಕ್ಷರು.—ಈಗ ತೀರ್ಮಾನ ಏನೂ ಹೇಳುವುದಿಲ್ಲ. ಈ ಬಾಟ್ಲಿಂಗ್ ವಿಷಯ ಬಿಟ್ಟು ಬೇರೆ ಮಾತನಾಡಿ.

ಶ್ರೀ ಎಂ. ವೀರಪ್ಪಮೊಯ್ಲಿ.—ತಾವು ಈ ವಿಚಾರದಲ್ಲಿ ರಿಟ್‌ಗೆ ಅವಕಾಶ ಕೊಡುವುದಾದರೆ ಸರಿ. ಆದರೆ ಇಲ್ಲಿ ಬಹಳ ವ್ಯತ್ಯಾಸ ಇದೆ. ಲೆಜಿಸ್ಲೇಚರ್‌ನಲ್ಲಿ ಬಂದಕೂಡಲೇ, we always express ignorance of law. Here We are the law makers. It should not be reflected outside that we do not know the difference between lis pendence and sub judice. What is pending in the Court, cannot become sub judice. Automatically we come to a conclusion. ಇದರಲ್ಲಿ ಬಹಳ ವ್ಯತ್ಯಾಸ ಇದೆ. ಕೋರ್ಟಿನಲ್ಲಿ ಇದ್ದಕೂಡಲೇ ಸಬ್‌ಜುಡೀಸ್ ಎಂದು ಹೇಳುವುದಕ್ಕಾಗುವುದಿಲ್ಲ. Even under the General Clauses Act, all that is pending before the Court, lis pendence, cannot become subjudice. ತಾವು ದಯವಿಟ್ಟು ನೋಡಿ, Otherwise we cannot

become model law makers. We become, I cannot say, law breakers, but slaves, under the law interpreters. We should not be enslaved by the law interpreters. ಅನೇಕ ವಿಚಾರಗಳು ಕೋರ್ಟಿನಲ್ಲಿ ಪೆಂಡಿಂಗ್ ಇರಬಹುದು, ಇವೆಲ್ಲಾ ಸಬ್‌ಜುಡೀಸ್ ಆಗುವುದಿಲ್ಲ. ಇದು ಗಂಭೀರವಾಗಿ ಆಲೋಚನೆ ಮಾಡಬೇಕಾದ ವಿಚಾರ. ಇದು ಬಹುಶಃ ಸದನದ ಸಂಪೂರ್ಣವಾದ ಸ್ವಾಯತ್ತತೆಗೆ ಧಕ್ಕೆ ಬರತಕ್ಕ ಕೆಲಸ. ಕಾನೂನು ರಚನೆ ಮಾಡುವವರೇ ಈ ರೀತಿ ಹೋದರೆ, it will not be good. ಈ ಕೆಲಸ ಇಲ್ಲಿ ನಡೆಯಬಾರದು. I agree on the question raised by the leader of the House. We cannot equate the word Lis Pendence with the word subjudice. ಇದರಿಂದ ಬಹಳ ಅನಾಹುತವಾಗುತ್ತದೆ. ಏಕೆಂದರೆ ಇಲ್ಲಿ ಇದನ್ನು ತಾವು ದಯವಿಟ್ಟು ನೋಡಬೇಕು. Subjudice which will be before the House is a limited restriction, but not an absolute restricton. It is there in the book, Kaul and Shakdher. ಇದನ್ನು ನಾನು ಪ್ರತ್ಯೇಕವಾಗಿ ಓದಿ ಹೇಳಬೇಕಾಗಿಲ್ಲ. ಎಲ್ಲದರಲ್ಲೂ ಕೂಡ ಇದೆ. It is a limited restriction and an absolute restriction. Case pending before a court become an umbrella to cover everything and take away the effect of the law makers. ಮಾನ್ಯ ಅಧ್ಯಕ್ಷರೇ ಈ ವಿಚಾರದಲ್ಲಿ ಸ್ವಲ್ಪ ಆಲೋಚನೆ ಮಾಡಬೇಕು. Mr. Srinivas raised this point but the crux of the matter got lost, as he had cut a joke. ಸನ್ಮಾನ್ಯ ಸದಸ್ಯರಾದಂಥ ಶ್ರೀಮಾನ್ ಕೆ.ಹೆಚ್. ಶ್ರೀನಿವಾಸ್‌ರವರು ಸೂಕ್ಷ್ಮವಾಗಿ ಈ ವಿಚಾರ ಹೇಳಿದರು. ಆಮೇಲೆ ನಗಬೇಕಾಗಿ ಬಂತು ಕೆಲವು ಜೋಕ್ ಅನ್ನು ಕಟ್ ಮಾಡಿದರು. The crux of the matter got lost, He said "A member shall not refer" "to any matter of fact". ತಾವು ಒಬ್ಬರು ವಕೀಲರಿದ್ದೀರಿ. ತಮಗೆ ಗೊತ್ತಿದೆ. ಹೈಕೋರ್ಟಿನಲ್ಲಿ ಅಪೀಲ್ ಪೆಂಡಿಂಗ್ ಇದ್ದರೆ ಅದು ಸಬ್‌ಜ್ಯುಡೀಸ್ ಆಗುತ್ತದೆ ಎಂದು It is the matter of fact that will be discussed there. That becomes sub judice. ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ತೀರ್ಮಾನವಾದರೂ ಸಹ ಅದರ ಮೇಲೆ ಹೈಕೋರ್ಟಿಗೆ ರಿಟ್ ಹೋಗುತ್ತಾರೆ. ಹಾಗೆ ರಿಟ್ ಹೋದರೆ ಕಾನೂನು ರೀತ್ಯಾ ಅವರಿಗೆ ಅಲ್ಟಿಮೇಟ್ ಡಿಸಿಷನ್ ಕೊಡುವುದಕ್ಕಾಗುವುದಿಲ್ಲ. ಹೈಕೋರ್ಟ್ ರಿಟ್ ಪಿಟಿಷನ್ಸ್ ಬಗ್ಗೆ ಅವರು ತೀರ್ಮಾನ ಮಾಡುವುದಕ್ಕಾಗುವುದಿಲ್ಲ. What is decided is writ. which is vindicated by means of Writ of Mandamus. In that factual things will not come. He rose to speak on that point. What the Leader of the Opposition insisted, is on a matter of a fact. What will be interpreted there, will not be said here. In page 910 of Practice and Procedure of Parliament, this has been dealt with. What is an absolute privilege, we are making it a restricted privilege. We cannot interpret the rights of this House as a restricted right of privilege. It is an obsolute right of privilege. ಅದನ್ನು ನೀವು ತಿರುಗುಮುರುಗು ಮಾಡಿದ್ದೀರಿ. ಈ ಸದನದಲ್ಲಿ ಈ ಕೆಲಸ ಮಾಡಬಾರದು. ತಿರುಗು ಮುರುಗು ಮಾಡುವುದಕ್ಕೆ ಹೋಗಬಾರದು. ನಮ್ಮಲ್ಲೂ ಕಾನೂನು ಪಂಡಿತರು, ಕಾನೂನು ಅನುಭವಿಗಳು ಇದ್ದಾರೆ. ಇವರಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. We will be shrinking the rights of the members of the House. ಇದನ್ನು ಯಾವ ಕಾರಣದಿಂದ ಮಾಡಬೇಕೆನ್ನುವುದನ್ನು ಸ್ಪಷ್ಟವಾಗಿ ಮಂಡಿಸಿದರೆ ಚೆನ್ನಾಗಿತ್ತು. We cannot function in the legislature with that restricted privilege, I will read the relevant portion:

"It is the absolute privilege of the Legislature and members thereof to discuss and deliberate upon all

> matters pertaining to the governance of the country and its people. Freedom of speech on the floor of the House is the essence of Parliamentary democracy."

Certain restrictions, please note these words.

> "Certain restrictions on this freedom to a limited degree been self-imposed".

One such restriction; it is a limited restriction.

> "One such restriction is that the discussions on matters pending adjudication before Courts of Law should be avoided on the floor of the House so that the Courts function uninfluenced by anything said outside the ambit of trial in dealing with certain matters".

That is a limited imposition which we are having. The matter which is in question is a state matter. Sale of arrack is the substantive matter. Sale of arrack absolutely links with the bottling plant or contractors. Is it the desire of the Hon. Speaker to postpone this issue of excise matter where 90% of the matter is covered under subject upon which the Leader of the Opposition has risen to speak. ಅವರು ೧೦ ಪರ್ಸೆಂಟ್ ಮಾತ್ರ ಮಾತಾಡಬೇಕು ಎಂದರೆ ಅವರ ಎಲ್ಲ ಹಕ್ಕುಗಳನ್ನು ಸಹ ಸಂಪೂರ್ಣವಾಗಿ ಮೊಟಕು ಮಾಡಿದಂತಾಗುತ್ತದೆ. ಇದರಲ್ಲಿ ಸಬ್‌ಜ್ಯುಡೀಸ್ ಉಂಟಾಗುವುದಿಲ್ಲ. There is no appeal pending before the High Court of Karnataka to decide over the matter of contract and rejection of certain other applications in reference to contract. ಇನ್ನೊಬ್ಬ ಅರ್ಜಿ ಹಾಕಿದ್ದಕ್ಕೆ ಅವನಿಗೆ ಸಿಕ್ಕಿದೆ. This is not a matter as between these two individuals only. It is a state affair. ಆದ್ದರಿಂದ ಇದು ಸಬ್‌ಜ್ಯುಡಿಸ್ ಆಗುವುದಿಲ್ಲ. Entire gamut of this situation should not be restricted. It is not subjudice. It is lis pendence, at the most.

> "Under the rules of Lok Sabha any matter which is matter under adjucation by a Couut of Law having jurisdiction in any part of India cannot be raised in the House in any form, such as questions etc."

> "If the subject matter of adjournment motion consists of two parts and one part becomes subjudice, after leave of the House to the moving of the motion has been granted, discussion on the motion is restricted to the other part, which is not subjudice."

ನನ್ನ ಒಂದು ವಿಚಾರದ ಪ್ರಕಾರ ಇದು ಸಬ್‌ಜುಡೀಸ್ ಆಗುವುದಿಲ್ಲ. ಇದರಲ್ಲಿ ದೋಷ ಇದೆ. ಒಂದು ವೇಳೆ ಸಬ್‌ಜುಡೀಸ್ ಅನ್ನುವುದಾದರೆ At the most it will be lis pendence which cannot take away the rights of the Hon. Members to raise this issue. The contract to one Mr. Hegde and another person. where his tender application rejected; you can disallow this. It is a matter of fact. ಅಪ್ಲಿಕೇಷನ್ ಅನ್ನು ರಿಜೆಕ್ಟ್ ಮಾಡಿದ್ದೀರಿ. ಇದನ್ನು ಡಿಸ್

ಅಲೋ ಮಾಡಿ ಅಲ್ಲೇ ಡಿಸ್ಪೈಡ್ ಆಗುವ ಉದ್ದೇಶ. ಪುನಃ ಅಪ್ಲಿಕೇಷನ್ ಕರೆಯಬೇಕು. ಇದು ಇಲ್ಲೇ ತೀರ್ಮಾನವಾಗುವುದಿಲ್ಲ ಎಂದು ಮಾಡಿದ್ದೀರಿ. ಈ ವಿಚಾರಗಳನ್ನು ಹೇಳಿದಾಗ ಇದನ್ನು ಬೆಳೆಸಿಕೊಂಡು ಇದು ಸಬ್‌ಜುಡಿಸ್ ವ್ಯಾಪ್ತಿಯಲ್ಲಿ ಬರುತ್ತದೆ ಎಂದು ಹೇಳಿ ಅವರ ಹಕ್ಕನ್ನು ಮೊಟಕು ಮಾಡುವಂಥಾದ್ದು ಸರಿಯಲ್ಲ. ಈ ಬಜೆಟ್ಟಿನಲ್ಲಿ, ಡಿಮ್ಯಾಂಡ್‌ನಲ್ಲಿ ಈ ವಿಚಾರ ಹೇಳಿದಾಗ ಇದನ್ನು ಪರಿಶೀಲಿಸಬೇಕು ಎನ್ನುವ ವಿಚಾರ ಬಂದಾಗ ಅನೇಕರು ಪರ್ಮಿಟ್ ಬಗ್ಗೆ ಹೇಳಿದ್ದಾರೆ. ಅನೇಕರು ಕಾಂಟ್ರಾಕ್ಟ್ ಕ್ಯಾರಿಯೇಜಸ್ ಬಗ್ಗೆ ಹೇಳಿದ್ದಾರೆ. ಬಸ್‌ನ್ನು ನಿಲ್ಲಿಸುವುದರ ಬಗ್ಗೆ ರಿಟ್‌ಪಿಟಿಷನ್ಸ್ ಇವೆ, ರೆವಿನ್ಯೂನಲ್ಲೂ ಸಹ ಬೇಕಾದಷ್ಟು ರಿಟ್ ಪಿಟಿಷನ್ಸ್ ಇವೆ. ಇದರ ಬಗ್ಗೆ ನಾವು ಚರ್ಚೆ ಮಾಡುವುದಕ್ಕಾಗುವುದಿಲ್ಲ. ಆದರೆ ಈ ಒಂದು ಅತಿರೇಕ ವಾದವನ್ನು ಈ ವ್ಯಾಖ್ಯಾನವನ್ನು ಇಟ್ಟು ಈ ಸದನವನ್ನು ಕೈಯಲ್ಲಿಟ್ಟುಕೊಳ್ಳುವಂಥ ಒಂದು ಕೆಲಸವನ್ನು ಸಭಾನಾಯಕರು ಮಾಡ ಬಾರದು. ಏನು ಬೇಕಾದರೂ ಕೂಡ ಇದರ ಬಗ್ಗೆ ವಿಚಾರ ಮಾಡಲಿ. ಎಂಟೈರ್ ಡಿಮ್ಯಾಂಡ್ ಬೇಕಾದರೆ ಪೋಸ್ಟ್‌ಪೋನ್ ಮಾಡೋಣ. ಈ ತರಹ ಮಾತನಾಡಬೇಕು ಎಂದರೆ, ಈ ತರಹ ಈ ಒಂದು ಗೆರೆಯಲ್ಲೇ ಮಾತನಾಡಬೇಕೆಂದು ಗೆರೆ ಹಾಕಿದರೆ ಬಹಳ ಕಷ್ಟವಾಗುತ್ತದೆ. ಆದುದರಿಂದ ಸಭಾನಾಯಕರು ಈ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ ಎಂದು ಹೇಳುತ್ತೇನೆ. In all demands, one or the other will be of this kind. And by point of order, this is said subjudice, perhaps the entire world will laugh at us. I am not for the ignorance of law that we have pronounced or enunciated. ಆದುದರಿಂದ ಇದು ಬಹಳ ಗಂಭೀರವಾದಂಥಾ ವಿಚಾರ. ಇಂತಹ ಒಂದು ಅನಾಗರೀಕ ಪರಿಸ್ಥಿತಿ ಉಂಟಾಗಿರುವುದು ದುರದೃಷ್ಟಕರ. ಈ ವಿಚಾರದಿಂದ ಬಹಳ ಅನುಭವವಾಗಿದೆ. ಇದರ ಬಗ್ಗೆ ಅವರು ಏನು ಒಂದು ಶಬ್ದವನ್ನು ಉಪಯೋಗಿಸಿದ್ದಾರೆ. ಈ ದೇಶ ಇಂತಹ ಒಂದು ಕಷ್ಟವನ್ನು ಅನುಭವಿಸಬೇಕಾದರೆ It may amount to shame to the legislature which will be shrinking and shrinking on its own length. This will be the most fateful day of the legislature of any country.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ವೀರಪ್ಪ ಮೊಯ್ಲಿ ಅವರು ಹೈಕೋರ್ಟ್ ಮುಂದೆ ವಾದ ಮಾಡಿದ ಹಾಗೆ ಮಾಡಿದರು. ಪುನಃ ತಮ್ಮ ಪರೀಕ್ಷೆಯನ್ನು ಪ್ರಾರಂಭ ಮಾಡಿದ್ದಾರೆ. ಅಭ್ಯಾಸ ಚೆನ್ನಾಗಿ ಮಾಡಿಕೊಂಡಿದ್ದಾರೆ. ಆದರೆ ಅವರನ್ನು ನೋಡಿದ ತಕ್ಷಣ ನನ್ನ ದುಃಖ ಇಷ್ಟೇ. He has been trying to defend a case which is totally indefensible. ಅದಕ್ಕಾಗಿ ಅವರು ಎಷ್ಟೇ ವಾದ ಮಾಡಲಿ ಆ ವಾದದಲ್ಲಿ ಹುರುಳಿಲ್ಲ. ಹುರುಳಿಲ್ಲದ ವಾದವನ್ನು ಅವರು ಹೇಳಿದರು. ಕೆಲವೊಂದು ರಿಸ್ಟ್ರಿಕ್ಷನ್ ಬಗ್ಗೆ ಹೇಳಿದರು ಅದನ್ನು ನಾನು ಒಪ್ಪುತ್ತೇನೆ. ಕೋರ್ಟಿನಲ್ಲಿರುವ ವಿಚಾರ ಯಾವುದನ್ನೂ ಕೂಡ ತೀರ್ಮಾನ ಮಾಡುವುದಕ್ಕಾಗುವುದಿಲ್ಲ. ಅದು ಮಾಡಿದರೆ ಅವ್ಯವಹಾರವಾಗುತ್ತದೆ. ಅದನ್ನೇ ಎತ್ತಿ ಅವರು ಹೇಳುತ್ತಾರೆ. It is substantially the same issue.

೪–೦೦ ಪಿ.ಎಂ.

ಈಗ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರು. ಎಜುಕೇಷನ್ ಬಿಲ್ ಸುಪ್ರೀಂ ಕೋರ್ಟಿನಲ್ಲಿದೆ ಎಂದು ಅದರ ಬಗ್ಗೆ ಚರ್ಚೆ ಮಾಡುತ್ತಾ ಇಲ್ಲ. ಹಾಗೇ ಯಾವುದೋ a piece of legislation which is pending before the High court or the supreme Court there is no bar to discuss that matter in the Legislature. ಅದೇ ರೀತಿ ಟ್ರಾನ್ಸ್‌ಪೋರ್ಟ್ ವಿಚಾರದಲ್ಲಿ ಕೆಲವು ಜನ ಹೋಗಿರಬಹುದು ಆ ವಿಚಾರವನ್ನು ನಾವು ಇಲ್ಲಿ ಚರ್ಚೆ ಮಾಡುವುದಿಲ್ಲ. ಸಾರಿಗೆ ವ್ಯವಸ್ಥೆ ಸರಿ ಇದೆಯೋ ಇಲ್ಲವೋ, ಟ್ಯಾಕ್ಸೇಷನ್ ಪಾಲಿಸಿಯಲ್ಲಿ ಟ್ರಾನ್ಸ್‌ಪೋರ್ಟ್ ವಿಚಾರದಲ್ಲಿ ಸರಿ ಇದೆಯೋ ಇಲ್ಲವೋ, ಟ್ಯಾಕ್ಸ್ ಹೆಚ್ಚು ಮಾಡಿದರೆ ಹೆಚ್ಚಾಯಿತೋ, ಕಡಿಮೆಯಾಯಿತೋ, ಕೆ.ಎಸ್.ಆರ್.ಟಿ.ಸಿ. ವಿಚಾರದಲ್ಲಿ ಹೇಳುವುದು ಇದೆಯೆಲ್ಲಾ ಇದೆಲ್ಲಾ ಚರ್ಚೆ ಮಾಡಬಹುದು. ಆದರೆ ನ್ಯಾಷನಲೈಸೇಷನ್ ಮಾಡಿದ್ದು ಒಂದು ಕಡೆ, ಆ ವಿಚಾರ ಹೈಕೋರ್ಟಿನಲ್ಲಿದೆ ಎಂದು ಇಟ್ಟುಕೊಳ್ಳಿ, ಅದರ ವಿಚಾರದಲ್ಲಿ ಚರ್ಚೆ ಮಾಡಲಿಕ್ಕೆ ಆಗುವುದಿಲ್ಲ ಅಷ್ಟೇ ವ್ಯತ್ಯಾಸ. ಪ್ರಿಸೈಡಿಂಗ್ ಆಫೀಸರ್ಸ್ ಕಾನ್‌ಫರೆನ್ಸ್‌ನಲ್ಲಿ ಕಮಿಟಿಯವರು ಇಂಥಾದ್ದರ ಬಗ್ಗೆ ಕೂಲಂಕಷವಾಗಿ ಚರ್ಚೆಮಾಡಿ ಯಾವುದನ್ನು ಸಬ್‌ಜುಡೀಸ್ ಎಂದು ಟ್ರೀಟ್ ಮಾಡಬೇಕು ಎಂದು ಅವರೇ ಹೇಳಿಬಿಟ್ಟಿದ್ದಾರೆ. ನಮ್ಮ ಇಡೀ ದೇಶದ ಸ್ಪೀಕರ್ಸ್ ಎಲ್ಲರೂ ಸೇರಿ ಕಮಿಟಿ ಮಾಡಿ ಆ

ಸಭೆಯಲ್ಲಿ ಪಾಸ್ ಮಾಡಿದ್ದಾರೆ. A Committee of Presiding Officers has recommended the following Principles :

The rule of subjudice does not apply to matters of privilege.

The rule applies to the proceedings before the Civil or Criminal Courts and not ordinarily to the proceedings before other Tribunals or Commissions of Inquiry.

The rule applicable during a period in Criminal matters from the time charge-sheet is framed till judgement is delivered.

The rule is applicable during a period in Civil matters from the time the issues are framed till judgement is delivered.

The rule is applicable during a period in Writ Petitions from the time they are admitted till orders are passed.

The rule is applicable during a period in injunction matters from the time applications are admitted till orders are passed and in appeal from the time appeal is admitted till judgement is delivered. ಈಗ ರಿಟ್ ಪಿಟಿಷನ್ ಹಾಕಿದ್ದಾರೆ, ಆ ರಿಟ್ ಪಿಟಿಷನ್ ಅಡ್ಮಿಟ್ಟಾಗಿದೆ, ಇಂಟಿರೀಯಮ್ ಆರ್ಡರ್ ಕೂಡ ಪಾಸ್ ಆಗಿದೆ. ಇದೇ ವಿಚಾರದಲ್ಲಿ ಚರ್ಚೆಮಾಡುವುದು ಈ ಪ್ರಿಸೈಡಿಂಗ್ ಆಫೀಸರ್ಸ್ ಕಮಿಟಿಯವರು ಏನು ತೀರ್ಮಾನ ಮಾಡಿದ್ದಾರೋ ಅದಕ್ಕೆ ವಿರುದ್ಧವಾಗಿದೆ. ಅದು ಮೂಲಭೂತವಾದಂಥ ಸಿದ್ಧಾಂತಕ್ಕೆ ವಿರೋಧವಾಗುತ್ತದೆ. ಮಾನ್ಯ ಮೊಯಿಲಿಯವರು ಅಧಿಕಾರದ ಬಗ್ಗೆ ಹೇಳಿದರು. ಈ ಮನೆಯ ಅಧಿಕಾರ ಈ ಮನೆಗೆ ಇದೆ. ಕಾರ್ಯಾಂಗಕ್ಕೆ ಇರತಕ್ಕಂಥ ಅಧಿಕಾರ ಅದಕ್ಕೆ ಇದೆ. ನಮ್ಮ ಸಂವಿಧಾನದಲ್ಲಿ ಮೂರು ಅಂಗಗಳಿವೆ. ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ. ಈ ಮೂರು ಅಂಗಗಳಿಗೆ ತಮ್ಮದೇ ಆದಂಥ ಸಾರ್ವಭೌಮತ್ವ ಇದೆ. ಈ ಮೂರು ಅಂಗಗಳು ತಮ್ಮ ಸಾರ್ವಭೌಮತ್ವವನ್ನು ಕಾನ್‌ಸ್ಟಿಟ್ಯೂಷನ್ ಕೆಳಗೆ ಉಪಯೋಗಿಸಬೇಕು. ಒಬ್ಬರ ಅಧಿಕಾರದ ಮೇಲೆ ಮತ್ತೊಬ್ಬರು ಕೈಹಾಕಲಿಕ್ಕೆ ಹೋದರೆ ಕಾನ್‌ಸ್ಟಿಟ್ಯೂಷನಲ್ ಕ್ರೈಸಿಸ್ ಆಗುತ್ತದೆ ಆಗುತ್ತದೆ ಗೊಂದಲವಾಗುತ್ತದೆ. ಆದುದರಿಂದಲೇ ಇದು ಕೇವಲ ಒಂದು ಕರ್ಟಸಿ ಅಲ್ಲ ಜುಡಿಶಿಯರಿ ಬಗ್ಗೆ, ಇದು ಒಂದು ಸಿದ್ಧಾಂತ.

SRI K.H. PATIL.—Mr. Speaker, Sir, I will draw your attention to the linked matters. In case of a linked matter where matter is subjudice and some part of it is not subjudice, in that case what the House can do? Part of it is subjudice and part of it is not subjudice in those cases how are we to proceed. Can we discuss the part of it which is not subjudice ?

ಶ್ರೀ ರಾಮಕೃಷ್ಣ ಹೆಗಡೆ.—ಈ ಒಂದು ಎಕ್ಸೈಜ್ ಕಮಿಷನರ್ ಆರ್ಡರ್ ಏನಿದೆ ಅದು ಒಂದೇ ಆರ್ಡರ್ ಅಲ್ಲ ಹೊರಡಿಸಿರುವುದು, ಪ್ರತಿ ದಿವಸ ಸರ್ಕಾರಿ ಆಜ್ಞೆ ಹೊರಡುತ್ತದೆ ಬೇರೆ ಎಲ್ಲಾ ಸರ್ಕಾರದ ಆರ್ಡರನ್ನು ತೆಗೆದುಕೊಳ್ಳಿ. ಆದರೆ ಹೈಕೋರ್ಟ್ ಮುಂದೆ ಇದು ಇರುವುದರಿಂದ ಈ ಆರ್ಡರ್ ಬಗ್ಗೆ ಚರ್ಚೆ ಮಾಡುವುದಕ್ಕಾಗುವುದಿಲ್ಲ. ಲಿಂಕ್ಡ್ ಮ್ಯಾಟರ್ ಯಾವುದೇ ತೆಗೆದುಕೊಳ್ಳಿ, ಎಕ್ಸೈಜ್ ಉತ್ಪಾದನೆಗೆ ಸಂಬಂಧಪಟ್ಟಿದ್ದಾಗಲಿ... ಅಥವಾ ಇತರ ವಿಷಯದ ಬಗೆಯಾಗಲೀ, ಈಗಾಗಲೇ ಮಾನ್ಯ ವಿರೋಧಪಕ್ಷದ ನಾಯಕರು ಅರಕ್ ಮೇಲೆ ಟ್ಯಾಕ್ಸ್ ಹೆಚ್ಚು ಮಾಡಿದ್ದೀರಿ, ದರ ಹೆಚ್ಚಾಗುತ್ತದೆ ಅಥವಾ ಬಾಟ್ಲಿಂಗ್ ಇಂಡರ್‌ಡ್ಯೂಸ್ ಮಾಡಿದ್ದರಿಂದ ದರ ಹೆಚ್ಚಾಗುತ್ತದೆ ಎಂದು ಹೇಳಿದರು, ಅದನ್ನು ಬೇಕಾದರೆ ಹೇಳಲಿ ಅದರ ಬಗ್ಗೆ ಆಕ್ಷೇಪಣೆ ಎತ್ತಲಿಲ್ಲ. ಯಾವಾಗ ಎಕ್ಸೈಜ್ ಕಮಿಷನರ್ ಆರ್ಡರ್ ಮೆರಿಟ್ ವಿಚಾರದಲ್ಲಿ ಮಾತನಾಡುವುದಕ್ಕೆ ಶುರು ಮಾಡಿದರು ಆಗ ಮಾತ್ರ ಅಬ್ಕಾರಿ

ಸಚಿವರು ಈ ವಿಚಾರವನ್ನು ಎತ್ತಿದರು, ಅದಕ್ಕೆ ನಾನು ಪುಷ್ಟೀಕರಣಕೊಟ್ಟೆ, ನನ್ನ ಹತ್ತಿರ ಜಡ್ಜ್‌ಮೆಂಟ್ ಕಾಪಿ ಇದ್ದುದರಿಂದ ಆದುದರಿಂದ ಪ್ರಿಸೈಡಿಂಗ್ ಆಫೀಸರ್ಸ್ ಕಮಿಟಿಯವರು ಏನು ಒಂದು ತೀರ್ಮಾನ ಮಾಡಿದ್ದಾರೋ ಆ ತೀರ್ಮಾನಕ್ಕೆ ವಿರುದ್ಧವಾಗಿ ದಯವಿಟ್ಟು ತಾವು ನಿರ್ಣಯ ಕೊಡಕೂಡದು ಈ ಮನೆಯಲ್ಲಿ ಹಿಂದಿನಿಂದಲೂ ಬಂದಿರತಕ್ಕ ಪರಂಪರೆಯನ್ನು ಕಾಯ್ದುಕೊಂಡು ಹೋಗಬೇಕು ಇದು ಒಂದು ಬಿಟ್ಟು ಬೇರೆ ಎಲ್ಲಾ ವಿಚಾರದಲ್ಲಿ ಮಾತನಾಡಲಿ.

ಅಧ್ಯಕ್ಷರು.—ಬಾಟ್ಲಿಂಗ್ ವಿಚಾರ ಬಿಟ್ಟು ಬೇರೆ ಮಾತನಾಡಲಿ.

ಶ್ರೀ ರಾಮಕೃಷ್ಣ ಹೆಗಡೆ.—ಎಕ್ಸೈಜ್ ಕಮಿಷನರ್ ಆರ್ಡರ್ ಏನಿದೆ ಅದನ್ನು ಬಿಟ್ಟು ಅಂದರೆ ಯಾವ ಆರ್ಡರ್ ಹೈಕೋರ್ಟ್ ಮುಂದೆ ಇದೆ ಅದನ್ನು ಬಿಟ್ಟು ಬಾಕಿ ಎಲ್ಲಾ ಚರ್ಚೆ ಮಾಡಲಿ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾದ ವಾದವನ್ನು ಸಭೆಯ ಮುಂದೆ ಇಟ್ಟಿದ್ದಾರೆ ಈಗ ಏನು ರಿಟ್ ಪಿಟಿಷನ್ ಹಾಕಿದ್ದಾರೆ, ಆ ರಿಟ್ ಪಿಟಿಷನ್‌ನಲ್ಲಿ ಇಷ್ಯೂಸ್ ಯಾವುದು ಇದೆ ೧,೨,೩ ಎಂದು ಹೇಳಲಿ, ಆ ಇಷ್ಯೂಸನ್ನು ಬಿಟ್ಟು ನಾವು ಮಾತನಾಡುತ್ತೇವೆ. ಅವರು ಇನ್ನೊಂದು ಮಾತನ್ನು ಹೇಳಿದರು. There should be flow of stream of justice. ಎಂದು ಹೇಳಿದರು. ಈ ದೇಶದಲ್ಲಿ ಅದಿದ್ದರೆ ಎಷ್ಟೋ ಮುಂದುವರಿಯುತ್ತಿತ್ತು, ಅದು ಇಲ್ಲ. ಯಾವ ನಿರ್ಣಯಕ್ಕೋಸ್ಕರ ಚರ್ಚೆಯನ್ನು ಮುಂದೂಡಬೇಕು ಎಂದು ಅರ್ಥವಾಗುವುದಿಲ್ಲ. There is always obstructed justice in this country. Therefore, we have to think progressively. I don't think that we can withold discussion on this point. The matter we art discussing now may or may not involved in the Writ Petition pending before the Court. So kindly tell us what are the issues on which we should not argue. Then only we can decide whether to continue or not to continue the discussion...

SRI RAMAKRISHNA HEGDE.—The impugned order is for the Excise Commissioner's Order, except that order you can discuss any other matter pertaining to that......

ಶ್ರೀ ವೈ.ಕೆ. ರಾಮಯ್ಯ.—ಮಾನ್ಯ ಅಧ್ಯಕ್ಷರೆ, ಈ ವಿಷಯದ ವ್ಯಾಪ್ತಿ ಬಗ್ಗೆ ಮಾತನಾಡಲಿಕ್ಕೆ ನಾನು ಎದ್ದು ನಿಂತಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ಶ್ರೀಮಾನ್ ವೀರಪ್ಪಮೊಯಿಲಿಯವರು ಮಾತನಾಡುವಾಗ ದಿಸ್ ಈಸ್ ಎ ಲಿಸ್ಪಾಂಡೆನ್ಸಿ ನಾಟ್ ಎ ಸಬ್‌ಜುಡೀಸ್ ಎನ್ನುವ ಮಾತನ್ನು ಹೇಳಿದರು. ನಾನು ಲಾಯರ್ ಕೆಲಸ ಬಿಟ್ಟು ೩ ವರ್ಷವಾಗಿದೆ. ಆದರೂ ಕೂಡ ಜ್ಞಾಪಕ ಇಟ್ಟುಕೊಂಡಿರುವುದನ್ನು ಹೇಳುವುದಾದರೆ ನಾನು ಲಿಸ್ಪಾಂಡನ್ಸಿಗೂ ಸಬ್‌ಜುಡೀಸ್‌ಗೂ ವ್ಯತ್ಯಾಸವೇನು ಎಂದು ಜ್ಞಾಪಿಸಿಕೊಂಡೆ ಅದನ್ನು ತಮ್ಮ ಗಮನಕ್ಕೆ ತರುತ್ತೇನೆ. ಲಿಸ್ಪಾಂಡೆನ್ಸಿ ಅಂದರೆ If there is any suit pending filed earlier in respect of the same matter the subsequent suit if there is any in a court it is lispendency. It is between the two courts. If the subject matter pending in a court if a lawyer for the purpose of taking fee sub sequently file a suit in other Court on the same subject because the subject matter is pending in other court—it ls caled Lispondency according to me ನಮ್ಮ ನಾಯಕರು ಚೆನ್ನಾಗಿ ಹೇಳಿದ್ದಾರೆ, ಯಾವುದೇ ವಿಷಯ ಕೋರ್ಟ್ ಮುಂದೆ ಇದ್ದಾಗ ನಾವು ಮಾಡತಕ್ಕ ವಾದ ವಿವಾದ ತೀರ್ಪಿನ ಮೇಲೆ ಪ್ರಭಾವ ಬೀರತಕ್ಕದ್ದು ಇದ್ದರೆ ಅದು ಸಬ್‌ಜ್ಯುಡೀಸ್ ಆಗುತ್ತದೆ. ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ರಮೇಶ್ ಜಿಗಜಿಣಗಿ.—ಅಧ್ಯಕ್ಷರೆ, ನನ್ನ ಇಲಾಖೆಗೆ ಸಂಬಂಧಪಟ್ಟ ವಿಚಾರ ಇರುವುದರಿಂದ, ನಾನು ಒಂದು ವಿಚಾರ ಹೇಳಬೇಕಾಗಿದೆ. ಈ ವಿಚಾರ ಸದನದಲ್ಲಿ ಚರ್ಚೆ ಮಾಡಬೇಕೇ, ಬೇಡವೇ ಎಂದು, ಇಲ್ಲಿಯವರೆಗೆ ಒಂದು ಗಂಟೆ ಕಾಲ ಚರ್ಚೆ ಆಗಿದೆ. ಸವಿಸ್ತಾರವಾಗಿ ಹಿರಿಯ ಸದಸ್ಯರು ಹೇಳಿ

ದ್ದಾರೆ. ಮಾನ್ಯ ಸದಸ್ಯರು ತಮ್ಮ ಸಲಹೆಗಳನ್ನು ಕೊಟ್ಟಿದ್ದಾರೆ. ನಮ್ಮ ನಾಯಕರು ಇದರ ಬಗ್ಗೆ ಕೆಲವೊಂದು ವಿಚಾರಗಳನ್ನು ತಿಳಿಸಿದ್ದಾರೆ. ಆದರೆ ಒಂದು ಮಾತನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಇವೊತ್ತಿನ ಆಯವ್ಯಯ ಚರ್ಚೆಯಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು, ಸದಸ್ಯರು ಇಲಾಖೆಯಲ್ಲಿರತಕ್ಕ ಲೋಪದೋಷಗಳನ್ನು, ನಗಿರತಕ್ಕ ಅನ್ಯಾಯಗಳನ್ನು ಎತ್ತಿ ತೋರಿಸಿ ನಮ್ಮ ಇಲಾಖೆಯ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲಿ ನನಗೆ ನಡೆಸಿಕೊಂಡು ಹೋಗಲಿಕ್ಕೆ ಇನ್ನಷ್ಟು ಅನುಕೂಲ ಮಾಡಿಕೊಡುತ್ತಾರೆಂದು ಭಾವಿಸಿದ್ದೆ. ಆದರೆ ಅದನ್ನು ಬಿಟ್ಟು ಒಂದು ಗಂಟೆ ಕಾಲ ಚರ್ಚೆಯಾಗಿದೆ. ಆದ್ದರಿಂದ, ಮಾನ್ಯ ಅಧ್ಯಕ್ಷರ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ, ಇಲ್ಲಿಗೆ ಈ ವಿಚಾರ ಬಿಟ್ಟುಬಿಡೋಣ ಎಂದು ಪ್ರಾರ್ಥಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಗಂಡ ಹೆಂಡತಿ ಜಗಳದಲ್ಲಿ ಕೂಸು ಬಡವಾಯಿತು ಎನ್ನುವ ಹಾಗೆ ಆಯಿತು.

ಶ್ರೀ ಎಂ. ಪಿ. ಪ್ರಕಾಶ್.—ಅಧ್ಯಕ್ಷರೆ, ನನ್ನ ಗೆಳೆಯರು ಹೇಳಿದಂತೆ, Doctrine of rispendency has nothing to do with subjudice. The test that could be applied in this particular case as rightly pointed out is the test of subjudice, The important point which I would like to place here is no doubt the hon. Members have freedom of speech in this House - it is their primary duty no doubt but in respect of subjudice matters we should have self-restraint... ಎಲ್ಲಾದರೂ ಒಂದುಕಡೆ ಲಕ್ಷ್ಮಣ ರೇಖೆ ಹಾಕತಕ್ಕದ್ದು ಮುಖ್ಯ. ಯಾವ ವಿವಾದಗಳನ್ನು ಮಂಡಿಸುವಾದ ಆಕ್ರೋಶಭಾವನೆಗೊಳಪಟ್ಟು, ಪೂರ್ವಗ್ರಹಪೀಡಿತರಿಕ್ಕೊಳಗಾಗಿ, ಇಂತಹ ವಿಚಾರಗಳು ಪ್ರವೇಶ ಆಗಬಹುದು ಎನ್ನುವ ಕಾರಣದಿಂದ, ನಮ್ಮ ಸದನದ ನಾಯಕರು ಹೇಳಿದಂತೆ ಈ ವಿಚಾರವನ್ನು ಬಿಟ್ಟು, ಅನಕ್ಕೆ ಪೂರಕವಾದ ಎಲ್ಲಾ ವಿಷಯಗಳನ್ನು ಪ್ರಸ್ತಾಪ ಮಾಡಬಹುದು.

ಶ್ರೀ ವೇದಾಂತ ಹೆಮ್ಮಿಗೆ.—ನಿಯಮ ೩೧೦ರ ಪ್ರಕಾರ ಮಾತನಾಡಲಿಕ್ಕೆ ಬರುವುದಿಲ್ಲ ಎನ್ನುವುದು ಚರ್ಚೆಯಾಗಿದೆ. ಈಗ ಬಾಟ್ಲಿಂಗ್ ವಿಚಾರದಲ್ಲಿ ಹೇಳುವುದಾದರೆ, ಬಾಟ್ಲಿಯೊಳಗಡೆ ಬಿಟ್ಟು, ಬಾಟಿ ಹೊರಗಡೆ ಇದ್ದ ವಿಷಯ ಮಾತನಾಡಿದರೆ ಸಬ್‌ಜ್ಯುಡೀಸ್ ಆಗುವುದಿಲ್ಲ ಎಂದು ಹೇಳಿದರು. ಈಗ ಎಲ್ಲಾ ಬಾಟ್ಲಿಯಲ್ಲೇ ಹೋಗಿದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಈಗ ಇಲ್ಲಿ ಸ್ಪೀಕರ್ ಕಾನ್‌ಫರೆನ್ಸ್ ವಿಚಾರ ಪ್ರಸ್ತಾಪವಾಗಿದೆ. ಈಗ ಸಬ್‌ಜ್ಯುಡೀಸ್ ಅಂದರೆ ಅಷ್ಟಕ್ಕೆ ಮಾತ್ರ ನಾನು ಬೆಳಕು ಚೆಲ್ಲುತ್ತೇನೆ. ರಿಟ್ ಪಿಟಿಷನ್ ಅಡ್ಮಿಟ್ ಆಗರೆ, ತೀರ್ಮಾನವಾಗುವವರೆಗೆ, ಸಬ್‌ಸ್ಟ್ಯಾನ್‌ಷಿಯಲ್ ರಿಟ್‌ಪಿಟಿಷನ್ ಬಿಟ್ಟರೆ ಯಾವುದು ಮಾತನಾಡಬಾರದು ಎಂದು ಹೇಳಿಲ್ಲ. ಅದರ ಬಗ್ಗೆ ನಾವು ವಿಮರ್ಶೆ ಮಾಡಬೇಕಾಗುತ್ತದೆ. ರಿಟ್ ಪಿಟಿಷನ್ ಹಾಕಿದ್ದರಿಂದ ಸದನದಲ್ಲಿ ಮಾತನಾಡುವಾಗ ಹಾಗೆ ಇಲ್ಲ ಎನ್ನುವ ಅಭಿಪ್ರಾಯಕ್ಕೆ ಬಂದರೆ we will be driving away logically to absurdity... ಯಾರಾದರೂ ರಿಟ್ ಪಿಟಿಷನ್ ಹಾಕಿದರೆ ಅದೇ ಒಂದು ತರಹ ಸ್ಟೇ ಆರ್ಡರ್ ಎನ್ನುವ ತೀರ್ಮಾನ ಒಪ್ಪಿಕೊಳ್ಳಲಿಕ್ಕೆ ಸಾಧ್ಯವಿಲ್ಲ. ಈ ಮನೆಯಲ್ಲಿ ನಾವು ಏನು ಮಾತನಾಡಲಿಕ್ಕೂ ಹಕ್ಕು ಇದೆ. ನಾವು ನಮ್ಮ ನಮ್ಮಲ್ಲಿ ಹಾಕಿಕೊಂಡಿರತಕ್ಕ ರಿಸ್ಟ್ರಿಕ್ಷನ್ಸ್ ಇದು. ಹೈಕೋರ್ಟಿನವರು ಅಥವಾ ಇನ್ನೊಬ್ಬರು ನಮಗೆ ನಿರ್ಬಂಧ ಮಾಡಲಿಕ್ಕೆ ಆಗುವುದಿಲ್ಲ. ನಾವು ಈ ಮನೆಯ ಚರ್ಚೆ ಯಾವ ಚೌಕಟ್ಟಿನಲ್ಲಿರಬೇಕೆಂದು ನಮಗೆ ನಾವು ಹಾಕಿಕೊಂಡಿರತಕ್ಕ ನಿರ್ಬಂಧ. ರಾಜ್ಯಾಂಗದಲ್ಲಿ ಯಾವ ಒಂದು ನಿರ್ಬಂಧವೂ ಇಲ್ಲ. ನಮಗೆ ಸಂಪೂರ್ಣವಾಗಿ ವಿಚಾರವನ್ನು ಇಲ್ಲಿ ಚರ್ಚೆ ಮಾಡಲಿಕ್ಕೆ ಅಧಿಕಾರ ಇದೆ. ಅದರ ಬಗ್ಗೆ ಹೊರಗಡೆ ಯಾರೂ ಪ್ರಶ್ನೆ ಮಾಡಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ, ತಾವು ಹೇಳುವ ಹಾಗೆ ಲಕ್ಷ್ಮಣ ರೇಖೆ ಗುರುತಿಸುವಾಗ, ನಾವು ಉಸಿರು ಕಟ್ಟುವ ರೇಖೆ ಹಾಕಿ ಹೊರಗಡೆ ರಾವಣನನ್ನು ಇಟ್ಟು ಹೆದರಿಸುವುದು ಬೇಡ.

ಶ್ರೀ ಎಂ. ಪಿ. ಪ್ರಕಾಶ್.—ಸೀತಾಮಾತೆ ಲಕ್ಷ್ಮಣ ರೇಖೆ ಧಾಟಿ ಹೋದಾಗ ಏನಾಯಿತು ಎಂದು ಗೊತ್ತಿದೆ. ಆ ರೀತಿಯಲ್ಲಿ ಮಾನ್ಯ ಶ್ರೀನಿವಾಸ್ ಅವರಿಗೆ ಪಶ್ಚಾತ್ತಾಪ ಆಗಬಾರದು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಿಮ್ಮ ರಾವಣನನ್ನು ಹೆದರಿಸುವ ಪ್ರಸಂಗ ಬಂದರೆ ಹೆದರಿಸುತ್ತೇವೆ. ಸೀತಾಮಾತೆಗೆ ಆದಂತೆ ನಮಗೂ ಮೋಕ್ಷ ಸಿಕ್ಕುತ್ತದೆ. ಮಾನ್ಯ ಮುಖ್ಯಮಂತ್ರಿಗಳು

ಒಬ್ಬರೇ ಇದುವರೆಗೂ ಹೇಳುತ್ತಿದ್ದರು. ಈಗ ತಾವು ಕಾಲಹರಣದ ಬಗ್ಗೆ ಹೇಳುತ್ತಿದ್ದೀರಿ. ಅವರು ಮಾತನಾಡುತ್ತಿದ್ದಾಗ ಯಾರು ಅಬ್ಜೆಕ್ಷನ್ ತೆಗೆದಿದ್ದು. ಕೋರ್ಟ್‌ನವರು ನಮ್ಮನ್ನು ಎಕ್ಸ್‌ಪ್ಲನೇಷನ್ ಕೇಳಿದ ಕಾಲಕ್ಕೆ ಹೇಳೋಣ. ಈಗ ಕೋರ್ಟಿನಲ್ಲಿದೆ, ಮುಂದಿನ ಅಧಿವೇಶನದಲ್ಲಿ ಅಂದರೆ ಅದರಿಂದ ನಿಮಗೆ ಒಂದು ರಕ್ಷಣೆಯಾಗುತ್ತದೆ. ಈಗ ಚರ್ಚೆ ಮುಕ್ತಾಯ ಮಾಡಲಿಕ್ಕೆ ಅಭ್ಯಂತರವಿಲ್ಲ. ನಮ್ಮ ನಾಯಕರು ಅವರ ಧಾಟಿಯಲ್ಲಿ ಮಾತನಾಡಲಿಕ್ಕೆ ಅವಕಾಶ ಕೊಡಿ. ತಮ್ಮ ದೃಷ್ಟಿಯಲ್ಲಿ ಎಲ್ಲಿಯಾದರೂ ಗಡಿ ದಾಟಿ ಹೋದರೆ ತಾವು ಸೂಚನೆ ಕೊಡಿ ಅದಕ್ಕೆ ಒಪ್ಪಿಕೊಳ್ಳುತ್ತೇವೆ.

SRI K. B. KOLIWAD.—Sir, the issue before the Hon'ble High Court is whether the order of the Excise Commissioner is legal or not. The Hon'ble High Court is empowered to deliver the judgment, whether the order of the Excise Commissioner is legal or not, ನಾವು ಈ ಸದನದಲ್ಲಿ ಚರ್ಚೆ ಮಾಡತಕ್ಕ ವಿಷಯ ಡಿಮ್ಯಾಂಡ್ ಮೇಲೆ ; ನಮ್ಮ ಸರ್ಕಾರಕ್ಕೆ ಬರತಕ್ಕ ಆದಾಯ ಕಡಿಮೆಯಾಗಿದೆ, ಅದರ ಹಿನ್ನೆಲೆಯಲ್ಲಿ ಇರತಕ್ಕದ್ದು ಏನು ಎಂದು ವಿರೋಧ ಪಕ್ಷದ ನಾಯಕರು ಹೇಳಲಿಕ್ಕೆ ಹೊರಟಿದ್ದಾರೆ. ಈಗ ಎಕ್ಸೈಜ್ ಕಮಿಷನರ್ ಇಷ್ಯೂ ಮಾಡಿದಂಥ ಆರ್ಡರ್ ಲೀಗಲ್ ಇದೆಯೋ, ಇಲ್ಲೀಗಲ್ ಇದೆಯೋ ಎಂದು ಚರ್ಚೆ ಮಾಡಲಿಕ್ಕೆ ಇಷ್ಟ ಪಡುವುದಿಲ್ಲ. ಹೈಕೋರ್ಟ್ ಅಧಿಕಾರವೇ ಬೇರೆ, ನಮ್ಮ ಲೆಜಿಸ್ಲೇಚರ್ ಅಧಿಕಾರವೇ ಬೇರೆ. ನಮ್ಮ ಅಧಿಕಾರವನ್ನು ಮೊಟಕುಗೊಳಿಸುವಂತಹದ್ದು ಬೇಡ ಎಂದು ಬಿನ್ನವಿಸಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಒಂದು ಸಿಮಿಲರ್ ಕೇಸ್ ಕೋಟ್ ಮಾಡಿದ್ದಾರೆ... This is from Practice and Procedure of Parliament by Kaul and Shakdher.

> "A point of order was raised in the House that the Resolution which had been moved disapproving of the Essential Services Maintenance Ordinance, 1968, could not be discussed as the Ordinance was pending adjudication before courts of law. The point of order was ruled out on the ground that "the rule of subjudice does not apply to legislation and the Resolution to disapprove the Ordinance is in the nature of legislation because all it seeks to do is to disapprove the Ordinance, *i.e.*, to repeal the legislation which is in force, and that an Ordinance has the same force as a law of Parliament". It was held that "Parliament is supreme and sovereign in the exercise of its legislative powers and cannot be paralysed by reason only of the fact that a writ petition against the constitutionality of the existing legislation is pending in a court of law".

Further it is said :

> "As regards a matter which is subjudice and which has been referred to in a speech or debate or in any statement in the House, the Speaker has no power to order expunction of any words or phrases merely on the ground that they relate to a matter which is pending for a judicial decision in a court of law".

When the matter is so clear Sri Bangarappa himself must have self restraint without referring to it and proceed. But here, the matter it self cannot be subjudice. What is subjudice ?

One man has gone to the court saying that the order of the Excise Commissioner has come in the way of his right, he has challenged the legality of that order. But, here. Mr. speaker Sir, we are not considering the legality or otherwise of it. But we are saying here and also we have got every right is say that the Government is having under hand dealing. The Hon'ble Leader of the opposition has made it clear that the case is against the Excise Commissioner. And therefore, the matter be coming subjudice does not arise at all. Parties are different subjects are different and the matter is also different here. Where is the question of subjudice here ? If for every thing there is curtailment, then I should say, freedom of speech is curtailed.

Sri Ramakrishna Hegde.—Sir, I only regret the ruling quoted by the hon'ble Member Sri K.H. Patil is out of context. Now I would like to quote a few lines from the book on parliamentary procedure in India written by A.R. Mukherjea, page No. 184, which says as follows:

> " The rule of subjudice does not apply to legislation A bill to change or amend a law may be introduced or discussed although there may be proceedings pending on the aplicability of the law. Members however precluded from the reffering to the facts of any perticular case. It was ruled that parlimant is suprem and sovergin in the exercise of its legislative powers and cannot be paralysed by reason only of the fact that writ petition against constitutionality of the existing legislation is pending in a court of law. "

Here, it is totally out of context. It is not only the question of legality of the order of the Excise Commissioner but also of the propriety; the court has stayed it. The whole question is before the court. So, until the matter is decided, it would not be proper to discuss here.

Sri Y.K. Ramaiah.—I would like to know what will happen if this House and the high Court take a contrary dicision. Assuming for the argument sake, if this August House takes certain decision and comes to some conclusion and if the Court gives a contrary decision which will be prevailing and enforceable, what happens. I am posing this question with an academic intrest I want enlightement over this problem. This problem is ranging in mind sine my student career. I want to know whether the decision of this House prevails or that of the High Court Similar ocassion has arisen in the U. P. Assembly about 10 years back.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಸರ್ಕಾರದ ಆಡಳಿತ ನಡಸತಕ್ಕವರು........

ಅಧ್ಯಕ್ಷರು.—ಸಬ್‌ಜುಡೀಸ್ ಇಶ್ಯೂ ಬಗ್ಗೆ ಹೇಳಿ, ನನಗೆ ಎನ್‌ಲೈಟನ್ ಮಾಡಿ. ರೂಲಿಂಗ್ ಕೊಡಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಕಾನೂನು ವಿಚಾರದಲ್ಲಿ ಆ ಕಡೆ ಈ ಕಡೆ ಕೂತಿರತಕ್ಕ ಮಾನ್ಯ ಸದಸ್ಯರುಗಳು ಸಾಕಷ್ಟು ಬೆಳಕನ್ನು ಚೆಲ್ಲತಕ್ಕ ಪ್ರಯತ್ನ ಮಾಡಿದ್ದಾರೆ.

ಅಧ್ಯಕ್ಷರು.—ತಾವು ನನಗೆ ಎನ್‌ಲೈಟನ್ ಮಾಡಿ, ಪುಸ್ತಕ ಬೇಕಾದರೆ ನೋಡಿ.

ಶ್ರೀ ಎಸ್. ಬಂಗಾರಪ್ಪ.—ಪುಸ್ತಕದ ಅವಶ್ಯಕತೆ ಇದ್ದರೆ ನೋಡೋಣ. ವಿಷಯ ಸಾಕಷ್ಟು ದೀರ್ಘವಾಗಿ ಚರ್ಚೆಯಾಗಿದೆ......

ಅಧ್ಯಕ್ಷರು.—ನಿಮ್ಮ ಆರ್ಗ್ಯುಮೆಂಟ್ಸ್‌ಕೂಡ ಕೇಳಿದ್ದೇನೆ. ಮಾತನಾಡತಕ್ಕ ಸಂದರ್ಭದಲ್ಲಿ ಒಂದೆರಡು ಮಾತನ್ನು ಮುಖ್ಯ ಮಂತ್ರಿಯವರು ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಮುಂದಿನ ಸಭೆಗೆ ವಿಷಯಬೇಕಲ್ಲ, ಅದಕ್ಕಾಗಿ ಆ ಮಾತನ್ನು ಆಡುತ್ತಿದ್ದಾರೆಂದು ಹೇಳಿದ್ದಾರೆ. ಸಭೆಗೆ ಬಂದಾಗ ವಿಷಯ ಉದ್ಭವವಾದಾಗ, ಯಾರೂ ಉದ್ಭವ ಮಾಡಿರುತ್ತಾರೆ ? ರಾಜ್ಯದ ಜನತೆಯ ಹಿತವನ್ನು ಕಡೆಗಣಿಸಿರುತ್ತಾರೆ, ಅದನ್ನು ಇಲ್ಲಿ ಚರ್ಚೆ ಮಾಡ ಬೇಕಾಗುತ್ತದೆ.

ಅಧ್ಯಕ್ಷರು.—ಸಬ್‌ಜುಡೀಸ್ ಆಗುತ್ತದೋ ಇಲ್ಲವೋ ಅಷ್ಟು ಹೇಳಿ, ನಾನು ರೂಲಿಂಗ್ ಕೊಡ ಬೇಕಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮುಖ್ಯ ಮಂತ್ರಿಯವರು ಹೇಳಿದಂಥ ಮಾತು ರೆಕಾರ್ಡಿಗೆ ಹೋಗಿದೆ, ಅದಕ್ಕೆ ತಾವು ಅವಕಾಶ ಕೊಟ್ಟಿದ್ದೀರಿ.

ಶ್ರೀ ವೀರಣ್ಣ.—ಸ್ವಾಮಿ, ತಾವು ಇದರ ಬಗ್ಗೆ ರೂಲಿಂಗ್ ಕೊಡಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ವಾದ ಮಂಡನೆ ಮಾಡುವಂಥ ಸಂದರ್ಭದಲ್ಲಿ ಕೆಲವು ವಿಚಾರಗಳು ರೆಕಾರ್ಡಿಗೆ ಹೋಗಿವೆ. ಈ ಸಭೆಗೆ ಬಂದ ತಕ್ಷಣ ಮಾನ್ಯ ಮುಖ್ಯ ಮಂತ್ರಿಗಳು ಆವೇಶದಿಂದ ಒಂದು ಮಾತನ್ನು ಹೇಳಿದ್ದಾರೆ. ಅದಕ್ಕೆ ಉತ್ತರ ಹೇಳಬೇಕೋ ಬೇಡವೋ ತಾವೇ ಹೇಳಿ.

ಅಧ್ಯಕ್ಷರು.—ಮೊಯ್ಲಿಯವರು ಹೇಳಿದ್ದಾರೆ, ಕೆ. ಹೆಚ್. ಪಾಟೀಲರು ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮುಖ್ಯ ಮಂತ್ರಿಯವರು ಮುಂದಿನ ಸಭೆಗೆ ವಿಷಯ ಇರ ಬೇಕಲ್ಲ ಎಂದು ಹೇಳಿದ್ದಾರೆ. ಇವರು ಮಾಡತಕ್ಕ ಉದ್ಯೋಗವನ್ನು ಬೆಳಕಿಗೆ ತಂದರೆ ಬೆಂಕಿ ಇಟ್ಟಂತಾಗುತ್ತದೆ.

ಅಧ್ಯಕ್ಷರು.—ವಿಷಯಕ್ಕೆ ಬನ್ನಿ. ನಾನು ರೂಲಿಂಗ್ ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಈ ಸದನದಲ್ಲಿ ನಮಗೂ ಹಕ್ಕು ಇದೆ, ಒಂದು ವಿಚಾರದ ಬಗ್ಗೆ ಬೇರೆ ಅರ್ಥ ಬರುವಂತೆ ಎಡೆ ಮಾಡಿಕೊಡುವುದು ಬೇಡ.

೪-೩೦ ಪಿ.ಎಂ.

ತಾವು ಹೇಳಿದ್ದೀರಿ ಪತ್ರಿಕೆಗಳಲ್ಲಿ ಬರುತ್ತದೆ, ಅವರು ಹೇಳಿರುವುದು ರೆಕಾರ್ಡ್‌ನಲ್ಲಿ ಇದೆ ಅವರಿಗೆ ಜವಾಬ್ದಾರಿ ಇರಲಿಲ್ಲ ಅಂದರೆ, ನಮಗೆ ಜವಾಬ್ದಾರಿ ಇರಬೇಕಾಗುತ್ತದೆ ತಪ್ಪು ಆಗಿದ್ದರೆ ಅದನ್ನು ನಾವು ಖಂಡಿಸುತ್ತೇವೆಂದು ಹೇಳಿದ್ದಾರೆ. ಎಂತಹ ಮಾತು, ತಪ್ಪು ಮಾಡಿದವರೇ ಖಂಡಿಸ ತಕ್ಕ ಕೆಲಸ. ತಪ್ಪು ಮಾಡಿದ್ದರೆ ಅದನ್ನು ಖಂಡಿಸಲಿಕ್ಕೆ ನೀವು ಇದ್ದೀರಿ.

ಅಧ್ಯಕ್ಷರು.—ಸಬ್ ಜುಡೀಸ್ ಆಗುತ್ತದೋ ಇಲ್ಲವೋ ಅದನ್ನು ಹೇಳಿ.

ಶ್ರೀ ಎಸ್. ಬಂಗಾರಪ್ಪ.—ಆ ಮಾತಿಗೆ ನಾನು ಉತ್ತರ ಕೊಟ್ಟಿದ್ದೇನೆ. This is too much on the floor of the House.

ಅಧ್ಯಕ್ಷರು.—ಆ ಕಡೆಯವರಾಗಲೀ, ಈ ಕಡೆಯವರಾಗಲೀ ಆಡಬಾರದ ಮಾತುಗಳನ್ನು ಹೇಳಿದ್ದರೆ, ರೆಕಾರ್ಡ್ ತರಿಸಿ ನೋಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಸಬ್‌ಜುಡೀಸ್ ವಿಚಾರವಲ್ಲಿ ಅವಕ್ಕೆ ಉತ್ತರ ಕೊಟ್ಟಿದ್ದೇನೆ. This cannot go on for a long time. This is too much.

ಅಧ್ಯಕ್ಷರು.—ನೀವು ಉತ್ತರ ಕೊಟ್ಟರೆ ಅದು ಮುಗಿಯುತ್ತದೆಯೇ ?

ಶ್ರೀ ಎಸ್. ಬಂಗಾರಪ್ಪ.—ಸದನದಲ್ಲಿರತಕ್ಕ ಸದಸ್ಯರ ಹಕ್ಕು ಮೊಟಕು ಆಗದೇ ಇರತಕ್ಕ, ಸಂಬಂಧಪಟ್ಟ ಡಿಮಾಂಡನ್ನು ಸದನದ ಮುಂದೆ ಇಟ್ಟಿದ್ದೀರಿ. Bottling contract ಕೊಟ್ಟಿರ ತಕ್ಕದ್ದು ನಮ್ಮ ಮುಂದಿರತಕ್ಕ ವಿಚಾರ. I don't think it can be allowed on the floor of the House. This is the property of the House Now the House is seized of this matter ಸದನದ ವಿಷಯವಾಗಿದೆ, ಅದು ಸದನದ ಆಸ್ತಿಯಾಗಿದೆ. ಅದನ್ನು ನಾವು ಚರ್ಚೆ ಮಾಡತಕ್ಕ ವಿಚಾರವಾಗಿದೆ. ಮುಖ್ಯ ಮಂತ್ರಿಗಳ ವಾದ ಏನು? ಎಕ್ಸೈಜ್ ಕಮಿಷನರ ನೋಟೀಫಿಕೇಶನ್ ದಿನಾಂಕ ೧೧-೪-೧೯೮೪ ಅದನ್ನು ಕೋಟ್ ಮಾಡಿದ್ದಾರೆ. ಸಬ್ ಜುಡೀಸ್ ವಿಚಾರದಲ್ಲಿ ನಾನು ಬರುತ್ತಿದ್ದೇನೆ.

ಒಬ್ಬ ಮಾನ್ಯಸದಸ್ಯರು.—ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮಾತನಾಡುವುದಕ್ಕೆ ಏನೂ ಪಾಯಿಂಟ್ಸ್ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಸರ್ಕಾರದವರು ಏನೂ ವ್ಯವಹಾರ ಮಾಡಿದ್ದಾರೆಂಬುದು ನಿಮಗೆ ಏನು ಗೊತ್ತು ? ನಿಮಗೆ ಗೊತ್ತಿಲ್ಲ, ಏನೋ ಮಾತನಾಡುವುದಕ್ಕೆ ಹೋಗಬೇಡಿ.

ಅಧ್ಯಕ್ಷರು.— ಸಬ್ ಜುಡೀಸ್ ಆಗುತ್ತದೋ ಇಲ್ಲವೋ ಅದರ ಬಗ್ಗೆ ಹೇಳಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ನಾನು ಬೇರೆ ವಿಷಯಗಳಿಗೆ ಹೋಗುವುದಿಲ್ಲ. ಎಕ್ಸೈಜ್ ಕಮಿಷನರ ನೋಟಿಫಿಕೇಷನ್ ಅದನ್ನು ಪ್ರಸ್ತಾಪ ಮಾಡಿದಾಗ, ಅದು ಹೈಕೋರ್ಟಿನಲ್ಲಿದೆ ಅದರ ಬಗ್ಗೆ ಪ್ರಸ್ತಾಪ ಮಾಡಿದರೆ ಅದು ಸಬ್ ಜುಡಿಸ್ ಆಗುತ್ತದೆ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ನಾವು ಚರ್ಚೆ ಮಾಡತಕ್ಕ ನೋಟೀಫಿಕೇಶನ್ ಏನಿದೆ, ಅದರ ಬಗ್ಗೆ ಹೈಕೋರ್ಟ್‌ನಲ್ಲಿ ಫೈಲ್ ಮಾಡಿರತಕ್ಕ ವಿಚಾರದಲ್ಲಿ ಹೇಳಿದ್ದಾರೆ. ೧೧-೪-೧೯೮೪ರಲ್ಲಿ ಸರ್ಕಾರದವರು ಒಂದು ತೀರ್ಮಾನವನ್ನು ಮಾಡಿದ್ದಾರೆ, ೧೩೩ ಅಪ್ಲಿಕೇಷನ್‌ಗಳನ್ನು ತೆಗೆದುಕೊಂಡಿದ್ದಾರೆ ಟೆಂಡರ್ ಕರೆದಿಲ್ಲ ಎನ್ನತಕ್ಕ ಮಾತನ್ನು ಅವರು ಆಡಿಲ್ಲ. ವಿಷಯ ಇರತಕ್ಕದ್ದು, ಸದನದಲ್ಲಿ ಡಿಮಾಂಡನ್ನು ಇಟ್ಟಾಗ ಆ ಡಿಮಾಂಡ್‌ನ ಮೇಲೆ ಸಂಪೂರ್ಣವಾಗಿ ಚರ್ಚೆಯಾಗಬೇಕು, ನಮ್ಮೆಲ್ಲರ ಹಕ್ಕನ್ನು ನಾವು ಚಲಾವಣೆ ಮಾಡಬೇಕು. ಮುಖ್ಯಮಂತ್ರಿಗಳು ಹೇಳತಕ್ಕದ್ದು ಹೈಕೋರ್ಟಿನಲ್ಲಿ ಪೆಂಡಿಂಗ್‌ನಲ್ಲಿರತಕ್ಕ ವಿಷಯವನ್ನು ತೆಗೆದುಕೊಳ್ಳಬಹುದೇ ಎನ್ನುವ ಅರ್ಥದಲ್ಲಿ ಹೇಳಿದ್ದಾರೆ. ಮುಂದಿನ ಸಭೆಯಲ್ಲಿ ಈ ಬೇಡಿಕೆ ಬರುವುದಿಲ್ಲ. ಈ ಡಿಮಾಂಡನ್ನು ಪಾಸ್ ಮಾಡಿ ಕಳುಹಿಸಿದ ಮೇಲೆ ಕಾನೂನು ಪ್ರಕಾರ ಚರ್ಚೆಮಾಡುವುದಕ್ಕೆ ಅವಕಾಶವಿರುವುದಿಲ್ಲ. ಅದು ತಮ್ಮ ಗಮನದಲ್ಲಿ ಕೂಡ ಇದೆ. ಬೇಡಿಕೆಗಳ ಮೇಲಿನ ವಿಷಯ ಚರ್ಚೆಗೆ ಬಂದಾಗ ಬಾಟ್ಲಿಂಗ್ ಕಂಟ್ರಾಕ್ಟ್ ಕೊಟ್ಟಿರತಕ್ಕ ವಿಚಾರವನ್ನು ಅವರೇ ಸಭೆಯಮುಂದೆ ಇಟ್ಟಿದ್ದಾರೆ. ಅದನ್ನು ಚರ್ಚೆ ಮಾಡಬಾರದು ಅಂದರೆ ಹೇಗೆ ? ಅದು ಸದನದ ಹಕ್ಕು. ತಾವು ಏನಾದರೂ ರೂಲಿಂಗ್ ಕೊಟ್ಟರಿ ಅಂದರೆ.........

(ಗೊಂದಲ)

ಅಧ್ಯಕ್ಷರು.—ಮಾನ್ಯ ಎಲ್ಲಾ ಸದಸ್ಯರುಗಳು ದಯವಿಟ್ಟು ಕೂತುಕೊಳ್ಳಿ. ಅಧ್ಯಕ್ಷರು ಪೀಠ ದಿಂದ ಎದ್ದು ನಿಂತಮೇಲೆ ಎಲ್ಲರೂ ಕೂತುಕೊಳ್ಳಬೇಕು. ಎರಡೂ ಕಡೆಯವರು ಹೇಳತಕ್ಕ ವಾದವನ್ನು ಕೇಳತಕ್ಕದ್ದು ನನ್ನ ಇಚ್ಛೆ. ಸಭಾನಾಯಕರ ವಾದವನ್ನು ಕೇಳಬೇಕು, ಆಡಳಿತ ಪಕ್ಷದವರ ವಾದವನ್ನು ಕೇಳಬೇಕು. ವಿರೋಧ ಪಕ್ಷದ ನಾಯಕರ ವಾದವನ್ನೂ ಕೇಳಬೇಕು. ಹಾಗೆಯೇ ವಿರೋಧ ಪಕ್ಷದವರ ವಾದವನ್ನು ಕೇಳಬೇಕು ಇಬ್ಬರ ವಾದವನ್ನು ಕೇಳಿ ನಾನು ತೀರ್ಮಾನವನ್ನು ಕೊಡಬೇಕಾಗುತ್ತದೆ. ನಮ್ಮಂತೆ ತೀರ್ಮಾನವನ್ನು ಕೊಡಿಯೆಂದು ನೀವು ಹೇಳಬೇಡಿ, ಅವರು ಹೇಳಬಾರದು. ನಾನು ಇನ್ನೂ ತೀರ್ಮಾನ ಕೊಟ್ಟಿಲ್ಲ. ತೀರ್ಮಾನ ಕೊಡೋದು ಜಡ್ಜ್. ಜಡ್ಜ್ ತೀರ್ಮಾನ ಅಂತಿಮ ತೀರ್ಮಾನ ಆದೇರೀತಿ ಅಲ್ಲಿ ಸ್ಪೀಕರ್ ಅಂದಮೇಲೆ ಕೆಲವು ಜ್ಯುಡಿಷಿಯಲ್ ಪವರ್ಸ್ ಇರುತ್ತವೆ. ಇಂತಹ ಹೊತ್ತಿನಲ್ಲಿ ಒಂದು ತೀರ್ಮಾನ

ವನ್ನು ಕೊಡುವಾಗ, ಇಬ್ಬರ ಕಡೆಯ ವಾದವನ್ನು ಕೇಳಿ ತೀರ್ಮಾನ ಕೊಡಬೇಕಾಗುತ್ತದೆ. ಇಲ್ಲದಿದ್ದರೆ ನಾನು ಆಗಲೇ ಹೇಳಿಬಿಡಬಹುದಿತ್ತು. ಇಲ್ಲದಿದ್ದರೆ, ಇವರಿಗೆ ಯಾಕೆ ನಾನು ಇಷ್ಟೊಂದು ಅವಕಾಶ ಕೊಡಬೇಕಾಗಿತ್ತು ? ನಿಮಗೆ ಏಕೆ ಇಷ್ಟೊಂದು ಅವಕಾಶ ಕೊಡಬೇಕಾಗಿತ್ತು ಮತ್ತೆ, ವಿರೋಧಪಕ್ಷದ ನಾಯಕರಿಗೆ ನಾನು ಯಾಕೆ ಹೇಳಬೇಕಾಗಿತ್ತು ? ಇಲ್ಲವೆಂದರೆ, ಏನಾದರೂ ತೀರ್ಮಾನ ಕೊಟ್ಟರೆ, ಎರಡೂ ಕಡೆಯವರೂ ಕೂಡಾ ಒಳ್ಳೆಯರೀತಿಯಿಂದ ನಡೆದುಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ, ಈ ತರಹ ಮಾಡಿದರೆ ಅದು ಸರಿಯಲ್ಲವೆಂದು ನಾವು ಹೇಳಬೇಕಾಗುತ್ತದೆ. ನೀವು ''ಕೊಡದೇ ಇದ್ದರೆ'' ಎಂದು ತಾವು ಹೇಳಬಾರದು. ನೀವೂ ಹೇಳಬಾರದು. ಎಲ್ಲರೂ ದಯವಿಟ್ಟು ಈಗ ಇಲ್ಲಿ ಕೇಳಿ. ಎಲ್ಲರದ್ದೂ ನಾನು ಸಾಕಷ್ಟು ಕೇಳಿದ್ದೇನೆ. ಬಂಗಾರಪ್ಪನವರದ್ದೂ ಕೇಳಿದ್ದೇನೆ. ಈ ಕಡೆಯವರದ್ದೂ ಕೇಳಿದ್ದೇನೆ. ಎಲ್ಲರೂ ದಯವಿಟ್ಟು ಕೂತುಕೊಳ್ಳಿ. ಈ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಆದರೆ, ಯಾರೂ ಕೂಡ ಧ್ವನಿ ಏರಿಸಿ ಮಾತನಾಡುವುದು ಬೇಡ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೆ, ತಾವು ಹೇಳಿರತಕ್ಕಂತಹ ಮಾತನ್ನು ನಾನು ಒಪ್ಪುತ್ತೇನೆ. ಈ ರೀತಿ ನೀವು ಹೇಳಿದಹಾಗೆ, 'ಕೊಡದೇ ಇದ್ದರೆ' ಎಂದು ನಾನು ಹೇಳಿಲ್ಲ. ಒಂದು ವೇಳೆ ನೀವು ಕೊಟ್ಟರೆ ಅದು ಬ್ಯಾಡ್ ಪ್ರಿಸಿಡೆಂಟ್ ಆಗುತ್ತದೆಂದು ಎಲ್ಲರೂ ಕೂಡ ಹೇಳತಕ್ಕಂಥಾದ್ದು ನನಗೆ ಅರ್ಥವಾಗುತ್ತಿಲ್ಲ.

ಅಧ್ಯಕ್ಷರು.—ಬಂಗಾರಪ್ಪನವರೇ, ತಾವು ಬೇಗನೇ ಮುಗಿಸಿ, ಸಾಕಷ್ಟು ಸಮಯವಾಗಿದೆ ನಾನು ಇನ್ನೂ ತೀರ್ಮಾನಕ್ಕೆ ಬಂದಿಲ್ಲ. ದಯವಿಟ್ಟು ಕೂತುಕೊಳ್ಳಿ.

ಒಬ್ಬ ಮಾನ್ಯ ಸದಸ್ಯರು.—ಶ್ರೀ ರಮೇಶ್‌ಕುಮಾರ್‌ರವರಿಗೆ ಒಳ್ಳೆ ಟ್ರೈನಿಂಗ್ ಸಿಕ್ಕಿದೆ.

ಶ್ರೀ ರಮೇಶ್‌ಕುಮಾರ್.—ನನಗೆ ಸಿಕ್ಕಿರುವ ಟ್ರೈನಿಂಗ್ ಎಲ್ಲಾ ನಿಮ್ಮದೇ ಸ್ವಾಮಿ. ನೀವು ಹೇಗೆ ಮಾಡುತ್ತೀರೋ ನಾನೂ ಹಾಗೇ ಮಾಡುತ್ತೇನೆ.

ಅಧ್ಯಕ್ಷರು.—ಇದು ಸಬ್‌ಜುಡೀಸ್ ಆಗುತ್ತದೋ, ಇಲ್ಲವೋ ಎಂಬ ಬಗ್ಗೆ ಸಾಕಷ್ಟು ಕೇಳಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಪ್ರಿಸೈಡಿಂಗ್ ಆಫಿಸರ್ಸ್ ಆಫ್ ದಿ ಲೆಜಿಸ್ಲೇಚರ್ ಮೀಟಿಂಗ್‌ನಲ್ಲಿ ಏನು ತೀರ್ಮಾನ ಆಗಿದೆ ಎಂಬ ವಿಚಾರವನ್ನು ಕೂಡ ಹೇಳಿದರು. ಅದರಲ್ಲಿ ಅವರೂ ಸುಮಾರಾಗಿ ಓದಿರತಕ್ಕಂತಹ ಪಟ್ಟಿ ಏನು ಇದೆ, ಅದನ್ನು ಓದಿದರೆ ತಮಗೂ ಕೂಡ ಅನಿಸುತ್ತದೆ. ಅದರಲ್ಲಿ ಅರ್ಥ ಸಬ್‌ಜುಡೀಸ್ ಇನ್ನರ್ಥ ಸಬ್‌ಜುಡೀಸ್ ಅಲ್ಲ ಎನ್ನತಕ್ಕಂಥಾದ್ದು ನೋಡಿದರೆ, ಇದು ಚರ್ಚೆಗೆ ಒಳಪಟ್ಟ ವಿಚಾರವೆಂದು ಸಹಜವಾಗಿಯೇ ನಾವೂ ಕೂಡ ಒಪ್ಪಬೇಕಾಗುತ್ತದೆ. ಆದ್ದರಿಂದ ಇಲ್ಲಿ ನಾವು ತೀರ್ಮಾನ ಮಾಡತಕ್ಕಂತಹ ಸಂದರ್ಭದಲ್ಲಿ ಯಾವ ಒಂದು ಸರ್ಕಾರ ಒಂದು ತೀರ್ಮಾನ ಒಂದು ಆರ್ಡರ್ ರೂಪದಲ್ಲಿ ಬಂದರೆ ಅದನ್ನು ಒಬ್ಬ ಮಾನ್ಯ ಸದಸ್ಯರು ರೆಫರ್ ಮಾಡಿದಾಗ, ಅದು ಸಬ್‌ಜುಡೀಸ್ ಗ್ರೌಂಡ್‌ನಲ್ಲಿ ಬರುತ್ತದೆಯೇ, ಅಥವಾ ಇಲ್ಲವೇ ಎಂಬ ತೀರ್ಮಾನಮಾಡತಕ್ಕಂಥಾದ್ದು ಅಷ್ಟು ಸುಲಭವಾದ ವಿಚಾರವಲ್ಲ. ನನ್ನ ಪ್ರಕಾರ, ಅದು ಸಬ್‌ಜುಡೀಸ್ ಆಗುವುದಿಲ್ಲ ಎಂಬುದೇ ಅಭಿಪ್ರಾಯ. ಏಕೆಂದರೆ, ಪಾರ್ಟಿಯೇ ಬೇರೆ, ಕೇಸೇ ಬೇರೆ. ಸಂಬಂಧವಿಲ್ಲದ ವಿಚಾರ ಇರಬಹುದು ಅದಕ್ಕೆ ನಾವು ಹೇಳಿದ್ದೇವೆ. ಪ್ರತಿಯೊಂದು ಕೂಡ ಸಬ್‌ಜುಡೀಸ್ ಆಗುತ್ತವೆ ಎಂದು. ಯಾರಾದರೂ ಒಂದು ಗೌರ್ನಮೆಂಟ್ ಆರ್ಡರ್ ಬಗ್ಗೆ ಪ್ರಶ್ನೆ ಮಾಡಿದರೆ ಸಾಕು, ಯಾರೂ ಕೂಡ ಸದನದಲ್ಲಿ ಆಡುವುದಕ್ಕೆ ಸಾಧ್ಯವಿಲ್ಲ ಎಂದರೆ ನಮ್ಮ ಹಕ್ಕು ಮೊಟಕಾಗುತ್ತದೆ ಎಂಬ ಅಭಿಪ್ರಾಯವನ್ನು ಕೂಡ ಹೇಳಿದ್ದೇನೆ. ಈ ವಿಚಾರವನ್ನು ತಾವು ಗಮನಿಸಿದರೆ ಒಳ್ಳೆಯದೆಂದು ತಮ್ಮ ಗಮನಕ್ಕೆ ಇದನ್ನು ತರುತ್ತಿದ್ದೇನೆ. It is not so easy to decide what is subjudice and what is not subjudice. ಅಂದರೆ, ಸಬ್‌ಜುಡೀಸ್ ಒಂದು ವೇಳೆ ಆದರೂ ಕೂಡ, ಇಲ್ಲಿ ಪ್ರಸ್ತಾಪಮಾಡಿದರೆ ಅದನ್ನು ತೆಗೆದುಹಾಕುವುದಕ್ಕೆ ತಮಗೆ ಬರುವುದಿಲ್ಲ ಎಂಬ ಅಭಿಪ್ರಾಯವಿದ್ದಾಗ ಇಲ್ಲಿ ಇಂತಹ ವಿಚಾರವನ್ನು ಕೂಡ ಪ್ರಸ್ತಾಪ ಮಾಡಬಹುದು ಎಂಬ ಅರ್ಥ ಸ್ಪಷ್ಟವಾಗಿ ಇದರಿಂದ ಗೊತ್ತಾಗುತ್ತದೆ.

ಅಧ್ಯಕ್ಷರು.—ಅದನ್ನು ತಾವು ಪೂರಾ ಓದಿಬಿಡಿರಿ.

ಶ್ರೀ ಎಸ್. ಬಂಗಾರಪ್ಪ.—ಆಗಲಿ, ಓದುತ್ತೇನೆ.........

"As regards a matter which is subjudice and which has been referred to in a speech or debate or in any statement in the House, the Speaker has no power to order expunction of any words or phrases merely on the ground that they relate to a matter which is pending for a judicial decision."

ಅದು ತಾವು ಹೇಳಿದ ಮೇಲೆ ಈ ಸಬ್‌ಜುಡೀಸ್ ತಾವು ರೂಲಿಂಗ್ ಕೊಟ್ಟು, ಈ ಸ್ಟೇಜಿಗೆ ನಾವು ಇನ್ನೂ ರೀಚ್ ಆಗಿಲ್ಲ. ಅದು ಆಮೇಲೆ ಡಿಸ್‌ಕಂಟಿನ್ಯೂ ಮಾಡಬೇಕೆಂದು ಹೇಳಿದಾಗ, ಮಾಡಬೇಕಾಯಿತು.

"Where a member insists on referring to a matter which is subjudice in spite of the Chair asking him not to do so, the Chair may ask him to discontinue his speech forthwith. The Speaker may also observe that the Member should not have referred to a matter which was subjudice. Both the statements would then be on record. but the Speaker cannot and should not order expunction of such words."

ಮಾನ್ಯ ಸಭಾಧ್ಯಕ್ಷರೆ, ಇದರ ಅರ್ಥ ಏನೆಂದರೆ, ಒಂದು ವೇಳೆ ಕೋರ್ಟಿನಲ್ಲಿ ಈಗ ಒಂದು ವಿಷಯ ಇದೆ. ಅದನ್ನು ನಾವು ಪ್ರಸ್ತಾಪಮಾಡುತ್ತೇವೆ. ಅದು ಸಬ್‌ಜುಡೀಸ್ ಎನ್ನತಕ್ಕ ಅಭಿಪ್ರಾಯ ಇದ್ದರೂ ಕೂಡ, ಅದು ರಿಕಾರ್ಡಿನಲ್ಲಿ ಉಳಿಯಬೇಕು ಎಂಬುದೇ ನಮ್ಮ ಅಭಿಪ್ರಾಯ. "Both the statements would then be on record." Further it is stated. "the Speaker cannot and should not order expunction of such words" Therefore, this para strengthens our argument in the sense that the matter which is pending can be raised on the Floor of the House. ಮತ್ತು ಅದರ ಬಗ್ಗೆ ನೀವು ವ್ಯಾಖ್ಯಾನ ಮಾಡಬಹುದು. ಅದನ್ನು ನಾವು ಎಕ್ಸ್‌ಪ್ಯಾಂಡ್ ಮಾಡಬಾರದು ಎಂಬ ಉತ್ತರ ಇಲ್ಲಿ ಬರುತ್ತದೆ. ಆದ್ದರಿಂದ ಈ ಸಂದರ್ಭದಲ್ಲಿ ನಾನು ಇಲ್ಲಿ ತಮ್ಮ ಗಮನಕ್ಕೆ ತರುವುದೇನೆಂದರೆ, ಇವತ್ತು ಈ ಒಂದು ವಿಚಾರ ಬಂದು, ನಾವು ಈ ವಿಚಾರದ ಬಗ್ಗೆ ಬೆಳಕನ್ನು ಚೆಲ್ಲದೇಹೋದರೆ, ಕೋರ್ಟಿನಲ್ಲಿ ಒಂದು ವೇಳೆ ವಿಚಾರ ಪೆಂಡಿಂಗ್ ಇದ್ದರೆ, ನಾವು ನಮ್ಮ ಕರ್ತವ್ಯಕ್ಕೆ ಲೋಪತಂದುಕೊಳ್ಳುವ ಪ್ರಶ್ನೆ ಅಷ್ಟೇ ಅಲ್ಲ, ಇಲ್ಲಿ ಒಂದು ಇಕ್ಕಟ್ಟಿನ ಪ್ರಸಂಗ ಬಂದುಬಿಡಬಹುದು. ಇವತ್ತು ಕಾನೂನು ಪ್ರಕಾರ ಆರ್ಡರ್ ಮಾಡಿದ್ದರೂ ಅದರ ಪ್ರಶ್ನೆ ಬೇರೆ. ಕಾನೂನು ಬಾಹಿರವಾಗಿ ಅದನ್ನು ಪ್ರಸ್ತಾಪವನ್ನು ನಾವು ಮಾಡಿದಾಗ ಅದು ರಾಜ್ಯದ ಜನತೆಯ ಹಿತದೃಷ್ಟಿಯಿಂದ ಮತ್ತು income/revenue ಆದಾಯ ಬರತಕ್ಕಂಥ ವಿಚಾರದಲ್ಲಿ ಇನ್‌ಕಂ ಬರತಕ್ಕಂಥ ವಿಚಾರದಲ್ಲಿ if, for arguments sake, ಒಂದು ನೋಟಿಫಿಕೇಷನ್ ಡೇಟ್ ೧೧.೪.೮೪ ಇದನ್ನು ಟಚ್ ಮಾಡುವುದು ಬೇಡ ಎಂಬ ಅಭಿಪ್ರಾಯವನ್ನು ಕೊಟ್ಟಿರಿ.

ಅಧ್ಯಕ್ಷರು.—ವಿಷಯ ಕೋರ್ಟಿನಲ್ಲಿ ಇರುವುದರಿಂದ ಅದನ್ನು ಈಗ ಯಾಕೆ ಮಾತನಾಡುತ್ತೀರಿ ? ಬಂಗಾರಪ್ಪನವರೆ, ನೀವು ಹೆಸರಾಂತ ವಕೀಲರು. ದಯವಿಟ್ಟು ಆ ಮಾತನ್ನು ಆಡಬೇಡಿರಿ. ಆ ಮಾತು ಬೇಡ. This House has also got judicial powers.

ಶ್ರೀ ಎಸ್. ಬಂಗಾರಪ್ಪ.—ಈ ಸಂದರ್ಭದಲ್ಲಿ ನಾವು ಇಂತಹ ವಿಚಾರವನ್ನು ಪ್ರಸ್ತಾಪಮಾಡಲೇಬೇಕಾಗುತ್ತದೆ. ಜೊತೆಗೆ, here public money is involved. Courts cannot come and sit on our neck. They have no powers. They cannot prevent us. It is a case of misuse of powers. ಸರ್ಕಾರಕ್ಕೆ ನಷ್ಟವಾಗಿ ಕೋಟಿ ಕೋಟಿ ರೂಪಾಯಿ ಬೇರೆ ಬೇರೆಯವರಿಗೆ ಲಾಭ ಆದಾಗ ಅಥವಾ ಹಾಗೆ

ಆಗತಕ್ಕ ಸಂದರ್ಭ ಉದ್ಭವ ಮಾಡತಕ್ಕಂತಹ ಕಾರ್ಯಕಲಾಪವನ್ನು ಸರ್ಕಾರ ತಂದಾಗ. ಅದನ್ನು ಪ್ರಚಲಿತ ಮಾಡ ತಕ್ಕಂಥಾದ್ದು ನಮಗೆ, ಈ ಸದನಕ್ಕೆ ಇರತಕ್ಕಂತಹ ಹಕ್ಕು. ಹಿಂದೆ ಇದೇ ರೀತಿ ಯಾರು ಸುಪ್ರೀಂ ಎಂಬ ಪ್ರಶ್ನೆ ಬಂದಿತ್ತು. ಯಾರು ಸುಪ್ರೀಂ? ಲೆಜಿಸ್ಲೇಚರೇ ಅಥವಾ ಕೋರ್ಟೇ ಎಂಬ ಪ್ರಶ್ನೆ ಬಂದಾಗ ಲೆಜಿಸ್ಲೇಚರ್ ಸುಪ್ರೀಂ ಎಂದು ಉತ್ತರ ಪ್ರದೇಶ ಹೈಕೋರ್ಟಿನಲ್ಲಿ ಪ್ರಶ್ನೆ ಬಂದಾಗ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಆಗಿದೆ. ಅದು ತಮಗೂ ಗೊತ್ತಿದೆ. ಲೆಜಿಸ್ಲೇಚರ್ ಸುಪ್ರೀಂ ಎಂಬ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಆದ್ದರಿಂದ ಸಾರ್ವಜನಿಕ ಹಿತ ಹಾಳಾಗತಕ್ಕ ವಿಚಾರಕ್ಕೆ ಕೋರ್ಟಿನಲ್ಲಿ ಪೆಂಡಿಂಗ್ ಇದೆ ಎಂಬುದು ಅಡ್ಡಿ ಬರುವುದಿಲ್ಲ ಎಂಬ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಮ್ಮ ಸಭೆಯ ನಿಯಮಾವಳಿ ಪುಸ್ತಕದಲ್ಲಿ ನಿಯಮ ೩೧೦ ರಲ್ಲಿ ಏನಿದೆ ಎಂದರೆ—"A member while speaking shall not—(i) refer to any matter of fact on which a judicial decision is pending." ಎಂಬ ಮಾತು ಇದೆ. ಇದು ನಮ್ಮ ವಿಚಾರಕ್ಕೆ ಅಪ್ಲೈ ಆಗುವುದಕ್ಕೆ ಸಾಧ್ಯವೇ ಇಲ್ಲ. ಇದನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತಂದಿದ್ದೇವೆ. ನಮ್ಮ ಸರ್ಕಾರ ದವರು ಹೇಗಿರಬೇಕಾಗಿತ್ತು ಎಂದರೆ ಅದೇನೇ ಇರಬಹುದು, ಚರ್ಚೆ ಮಾಡೋಣ ಎಂದು ಹೇಳ ಬೇಕಾಗಿತ್ತು. ಮುಖ್ಯ ಮಂತ್ರಿಗಳು ಏನು ಹೇಳಿದರು ಎಂದರೆ ನಾವೇನಾದರೂ ಅಭಿಪ್ರಾಯ ವ್ಯಕ್ತಪಡಿಸಿದರೆ it will have effect on the writ petition pending in the High Court ಎಂಬ ಅಭಿಪ್ರಾಯದಲ್ಲಿ ಹೇಳಿದರು. It will not have any effect. ಇದು ಕೋರ್ಟಿನವರಿಗೂ ಗೊತ್ತಿದೆ. ಇಲ್ಲಿ ಕುಳಿತಿರುವ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯ ಗಳನ್ನು ವ್ಯಕ್ತಪಡಿಸಬೇಕಾದರೆ Public cause, public interest, ಎಂಬ ದೃಷ್ಟಿಯಿಂದ ಅಧಿಕಾರ ದುರುಪಯೋಗವಾಗಿದೆಯೋ ಇಲ್ಲವೇ ಎಂಬುದನ್ನು ಚರ್ಚೆ ಮಾಡುತ್ತಿದ್ದೇವೆ ಎಂಬುದು ಕೋರ್ಟಿಗೂ ಗೊತ್ತಿದೆ. ಆದ್ದರಿಂದ ಮಾನ್ಯ ಸಭಾಧ್ಯಕ್ಷರೆ ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ ಇದರಲ್ಲಿ ಯಾವುದೇ ವಿಚಾರ ಸಬ್‌ಜ್ಯುಡೀಸ್ ಆಗುವುದಕ್ಕೆ ಸಾಧ್ಯವಿಲ್ಲ. ಈ ವಿಚಾರ ಚರ್ಚೆ ಆಗದೇಹೋದರೆ ಈ ವಿಚಾರದಲ್ಲಿ ಬೆಳಕನ್ನು ಚೆಲ್ಲುವುದಕ್ಕೆ ಸಾಧ್ಯವೇ ಆಗುವುದಿಲ್ಲ ಎಂಬ ಮಾತನ್ನು ಹೇಳುತ್ತಾ ಇದರಿಂದ ನಮ್ಮ ಹಕ್ಕು ಸಂಪೂರ್ಣವಾಗಿ ಮೊಟಕಾಗುತ್ತದೆ. ಆದ್ದರಿಂದ ಪಾಯಿಂಟ್ ಆಫ್ ಆರ್ಡರ್ ಮುಖಾಂತರ ಅಥವಾ ಸಬ್‌ಜ್ಯುಡೀಸ್ ಆಗುತ್ತದೆ ಎಂಬ ವಿಚಾರವನ್ನು ಏನು ಪ್ರಸ್ತಾಪ ಮಾಡಿದ್ದಾರೆ ಅದನ್ನು ತಾವು ತಳ್ಳಿಹಾಕಬೇಕು.

ಅಧ್ಯಕ್ಷರು.—ನಾನು ಎರಡೂ ಕಡೆ ಮುಖಂಡರ ವಾದವನ್ನು ಕೇಳಿದ್ದೇನೆ. ಈ ಕಡೆ ಸಭಾ ನಾಯಕರು, ವಿರೋಧಪಕ್ಷದ ನಾಯಕರು ಮತ್ತು ಅನುಭವಸ್ಥರಾದ ತಾವು ಹೇಳಿದ್ದೀರಿ. ಅದಕ್ಕೆ ನಾನು ರೂಲಿಂಗ್ ಕೊಡುವುದೇನೆಂದರೆ ಕೋರ್ಟ್ ಮುಂದೆ ಅನೇಕ ವಿಷಯಗಳು ಇರುತ್ತವೆ. ಇರುವಂಥ ಎಲ್ಲ ವಿಷಯಗಳನ್ನೂ ಚರ್ಚೆ ಮಾಡುವುದಕ್ಕೆ ಸಬ್‌ಜ್ಯುಡೀಸ್ ರೂಲ್ ಅಡ್ಡ ಬರುವುದಿಲ್ಲ. ಆದರೆ ಒಂದು ನಿಖರವಾದ ವಿಷಯ ಕೋರ್ಟ್ ಮುಂದೆ ಇದ್ದರೆ ಆ ಬಗ್ಗೆ ಪ್ರಸ್ತಾಪ ಮಾಡುವುದಕ್ಕಾಗುವುದಿಲ್ಲ. ಇಲ್ಲಿ ಏನಾಗಿದೆ ಎಂದರೆ ಬಾಟ್ಲಿಂಗ್ ಕಾಂಟ್ರಾಕ್ಟ್ ವಿಷಯ ಹೈಕೋರ್ಟ್ ಮುಂದೆ ಪೆಂಡಿಂಗ್ ಇದೆ. ಈ ಬಾಟ್ಲಿಂಗ್ ವಿಷಯ ಬಿಟ್ಟು ಬೇರೆ ವಿಷಯ ಬೇಕಾದ್ದು ಮಾತನಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ. ಆದ್ದರಿಂದ ಬಾಟ್ಲಿಂಗ್ ಕಾಂಟ್ರಾಕ್ಟ್ ವಿಷಯ ಸಬ್‌ಜ್ಯುಡೀಸ್ ಆಗುವುದರಿಂದ ಆ ವಿಷಯ ಬಿಟ್ಟು ಬೇರೆ ವಿಷಯಗಳನ್ನು ಮಾತನಾಡಿ.

(ಗೊಂದಲ)

ಶ್ರೀ ಎನ್. ಮಲ್ಲಾರಗೌಡ ಪಾಟೀಲ್.—ಚಪ್ಪಾಳೆ ಹೊಡೆದರೆ ಏನಾಗುತ್ತದೆ......

(ಗೊಂದಲ)

ಅಧ್ಯಕ್ಷರು.—ತಮ್ಮೆಲ್ಲರ ಅಭಿಪ್ರಾಯದಿಂದ ನಾನು ಸ್ಪೀಕರ್ ಆಗಿರುವುದು. ಆದ್ದರಿಂದ ಪಕ್ಷಪಾತವಾಗಿ ನಾನು ಯಾವ ಕೆಲಸವನ್ನೂ ಮಾಡುವುದಕ್ಕಾಗುವುದಿಲ್ಲ. ನಾನು ಈಗ ತೀರ್ಮಾನ ಕೊಟ್ಟಿದ್ದೇನೆ. ಮುಂದೆ ಬೇರೆ ವಿಷಯ ಮಾತನಾಡಿ.

ಶ್ರೀ ಎಸ್. ಬಂಗಾರಪ್ಪ.—ಕ್ಷಮಿಸಬೇಕು ದಯವಿಟ್ಟು, ೧೧ನೇ ಏಪ್ರಿಲ್ ೧೯೮೪ರ ನೋಟಿಫಿಕೇಷನ್ ಏನಿದೆ ಅದರ ವಿಚಾರ ಮಾತ್ರ ಅವರು ಕೇಳಿದ್ದು. ತಾವು ಬಾಟ್ಲಿಂಗ್ ವಿಚಾರ ಪ್ರಸ್ತಾಪ ಮಾಡಬಾರದು ಎಂದು ಹೇಳುವುದು ಅವರಿಗೆ ಗ್ರೀನ್ ಸಿಗ್ನಲ್ ಕೊಟ್ಟಹಾಗೆ ಆಗಿದೆ. ಈ ರೂಲಿಂಗ್ ಪ್ರಕಾರ ಯಾರೂ ಕೂಡ ಆ ವಿಚಾರ ಪ್ರಸ್ತಾಪ ಮಾಡಬಾರದು.

ಅಧ್ಯಕ್ಷರು.—ಆ ವಿಚಾರ ಬೇಡ.

ಶ್ರೀ ಎಸ್. ಬಂಗಾರಪ್ಪ.—ತಮ್ಮ ರೂಲಿಂಗನ್ನು ದಯವಿಟ್ಟು ರಿವೈಸ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ತಾವು, ಸಭಾ ನಾಯಕರು ಎಲ್ಲಾ ಕೂಡಿ ವಿಚಾರ ಮಾಡೋಣ. ತಾವು ಬನ್ನಿ.

ಶ್ರೀ ಎಸ್. ಬಂಗಾರಪ್ಪ.—ಇಲ್ಲೇ ಆಗಲಿ. ಹಣ ಹೊಡೆದು ಮಾಡಿರುವ ವಿಚಾರ ಇಲ್ಲೇ ಚರ್ಚೆಯಾಗಲಿ.

ಅಧ್ಯಕ್ಷರು.—ಇಲ್ಲಿ ಆಗುವುದಿಲ್ಲ. ಇಲ್ಲಿ ಕೆ. ಎಚ್. ಪಾಟೀಲರು ಇದ್ದಾರೆ. ಮೊಯಿಲಿ ಯವರಿದ್ದಾರೆ. ಬಸವಲಿಂಗಪ್ಪನವರಿದ್ದಾರೆ. ತಾವು ಅನುಭವಸ್ಥರಿದ್ದೀರಿ. ತಾವೆಲ್ಲಾ ನನಗೆ ಬಂದು ಕನ್‌ವಿನ್ಸ್ ಮಾಡಿ. ನಾನು ಅವಕಾಶ ಕೊಡುತ್ತೇನೆ. ಅದರಿಂದ ಎಲ್ಲರಿಗೂ ಅನುಕೂಲವಾಗುತ್ತದೆ. ಸರ್ಕಾರಗಳು ಆಗಿಂದಾಗ್ಗೆ ಬದಲಾಗುತ್ತದೆ. ಅವರೆ ನಾವು ರೂಲಿಂಗ್ ಮಾಡಿಟ್ಟರೆ ನೀವು ಆ ಕಡೆ ಬಂದರೂ ಅನುಕೂಲವಾಗುತ್ತದೆ. ಅವರು ಈ ಕಡೆ ಬಂದರೂ ಅನುಕೂಲವಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—೫೦ ಕೋಟಿ ರೂಪಾಯಿ ವಿಚಾರ ಬಿಟ್ಟು ಬೇರೆ ವಿಚಾರ ಮಾತನಾಡು ವುದಕ್ಕೆ ನಾವು ಬಂದಿಲ್ಲ.

ಅಧ್ಯಕ್ಷರು.—ನಾನು ರೂಲಿಂಗ್ ಕೊಟ್ಟಿದ್ದೇನೆ. ಬಾಟ್ಲಿಂಗ್ ಕಾಂಟ್ರಾಕ್ಟ್ ವಿಚಾರ ಬಿಟ್ಟು ಬೇರೆ ಮಾತನಾಡಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೆ, ತಮ್ಮ ರೂಲಿಂಗನ್ನು ರಿವೈಸ್ ಮಾಡ ಬೇಕೆಂಬುದು ನನ್ನ ಅಭಿಪ್ರಾಯ.

ಅಧ್ಯಕ್ಷರು.—ವಿಚಾರ ಮಾಡುತ್ತೇನೆ. ಈಗಲ್ಲ, ನಾಳೆ.

ಶ್ರೀ ಎಸ್. ಬಂಗಾರಪ್ಪ.—ಈಗಲೇ ಮಾಡಿ.

ಅಧ್ಯಕ್ಷರು.—ದಯವಿಟ್ಟು ಸ್ವಲ್ಪ ತಿಳಿದುಕೊಳ್ಳಿ. ಈಗ ಆಗುವುದಿಲ್ಲ. ನಾಳೆ ವಿಚಾರ ಮಾಡುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.—ಪಾಯಿಂಟ್ ಆಫ್ ಆರ್ಡರ್......

ಅಧ್ಯಕ್ಷರು.—ಮೊಯಿಲಿಯವರನ್ನು, ಪಾಟೀಲ್ ಅವರನ್ನು ಕರೆಸಿಕೊಳ್ಳುತ್ತೇನೆ. ತಾವೂ ಬಂದು ಕನ್‌ವಿನ್ಸ್ ಮಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾನು ರೂಲಿಂಗ್ ಬಗ್ಗೆ ಹೇಳುವುದಿಲ್ಲ.

ಶ್ರೀ ವೇದಾಂತ ಹೆಮ್ಮಿಗೆ.—ಸ್ವಾಮಿ, ನನ್ನ ಕ್ರಿಯಾಲೋಪ ಇದೆ. ತಾವು ರೂಲಿಂಗ್ ಕೊಟ್ಟಿದ್ದೀರಿ. ತಮ್ಮ ರೂಲಿಂಗನ್ನು ಒಬೇ ಮಾಡತಕ್ಕದ್ದು ಸದಸ್ಯರ ಕರ್ತವ್ಯ.

ಅಧ್ಯಕ್ಷರು.—ಹಾಗೇನಿಲ್ಲ.

ಶ್ರೀ ವೇದಾಂತ ಹೆಮ್ಮಿಗೆ.—The Ruling of the Chair can not be questioned.

ಅಧ್ಯಕ್ಷರು.—ಅವರು ಕ್ವೆಶ್ಚನ್ ಮಾಡುತ್ತಿಲ್ಲ. ರಿವೈಸ್ ಮಾಡಿ ಎಂದು ಹೇಳುತ್ತಿದ್ದಾರೆ. ನಾನು ಇವತ್ತು ಆಗುವುದಿಲ್ಲ ಎಂದು ಹೇಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ತಮಗೆ ಸದನದಲ್ಲಿ ಪರಮೋಚ್ಚ ಅಧಿಕಾರ ಇದೆ. ನಾವು ವಿಚಾರವನ್ನು ತಮ್ಮ ಮುಂದಿಟ್ಟಾಗ ಅದರ ಬಗ್ಗೆ ನಾಳೆ ವಿಚಾರ ಮಾಡುತ್ತೇನೆ ಎಂದು ತಾವು ಹೇಳಿದ್ದೀರಿ. ಈಗ ೫ ಗಂಟೆ ಆಯಿತು. ಏನು ವಿಚಾರ ಮಾಡುವುದಿದ್ದರೂ ಇವತ್ತು ಮಾಡಿ. ನಮ್ಮ ನಾಯಕರು ಎದ್ದು ನಿಂತು ಎಕ್ಸೈಜ್ ಮೇಲೆ ಮಾತನಾಡಿದ್ದಾರೆ. ಈಗ ೫ ಗಂಟೆ ಆಗಿರುವುದ ರಿಂದ ನಾಳೆ ವಿಚಾರ ಮಾಡಿ ಹೇಳಿ.

ಅಧ್ಯಕ್ಷರು.—ನಾಳೆ ಹೇಳುತ್ತೇನೆ. ನನಗೆ ಟೈಮ್ ಬೇಕಲ್ಲ. ನೀವು ನನಗೆ ಕನ್‌ವಿನ್ಸ್ ಮಾಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ತಮಗೆ ಮನವರಿಕೆ ಮಾಡಲಿಕ್ಕೆ ನಮಗೆ ಅವಕಾಶ ಮಾಡಿ ಕೊಟ್ಟಿದ್ದೀರಿ. ಅದಕ್ಕಾಗಿ ಆಭಾರಿಯಾಗಿದ್ದೇವೆ. ಏಕೆಂದರೆ ಇದು ಗಂಭೀರವಾದ ವಿಚಾರ. ವಿಚಾರ ಮಾಡಬೇಕಾದ ವಿಚಾರ ಎಂದು ತಾವು ಹೇಳಿದ್ದೀರಿ. ಅದಕ್ಕಾಗಿ ನಾವು ಆಭಾರಿಯಾಗಿದ್ದೇವೆ. ತಮ್ಮನ್ನು ಕನ್‌ವಿನ್ಸ್ ಮಾಡುವುದಕ್ಕೆ ಸಾಕಷ್ಟು ವಿಚಾರಗಳು ನಮ್ಮಲ್ಲಿವೆ. ಆದರೆ ಸಭಾ ನಾಯಕರು ಬಂದು ತಕ್ಷಣ ಇಲ್ಲಿ ಈ ವಿಚಾರವನ್ನು ಎತ್ತಿಬಿಟ್ಟರು. ಆದರ ವ್ಯಾಪ್ತಿ, ಆಗತಕ್ಕ ಪರಿಣಾಮಗಳು ಮತ್ತು ಸದನದ ಒಂದು ಪ್ರಜಾಸತ್ತೆಯ ಕಾರ್ಯಚಟುವಟಿಕೆಯನ್ನೇ ರೀಸ್ಟ್ರಕ್ಚರ್ ಮಾಡತಕ್ಕ ವಿಚಾರ ವನ್ನು ಸಭಾನಾಯಕರು ಎತ್ತಿದ್ದಾರೆ. ಸಭೆಯ ನಡವಳಿಕೆಯಲ್ಲಿ ಆದರ್ಶತೆಯನ್ನು ಅಳವಡಿಸಬೇಕಾದ ದೃಷ್ಟಿಯಲ್ಲಿ ಇನು ಪ್ರಾಮುಖ್ಯವಾದ ವಿಚಾರ. ಇದನ್ನು ತಾವು ಮನಗಂಡಿದ್ದೀರಿ. ಇದನ್ನು ಒಟ್ಟಾರೆ ವಿಲೇವಾರಿ ಮಾಡಿಕೊಂಡು ಮುಂದೆ ಹೋಗೋಣ ಎಂಬ ಅಭಿಪ್ರಾಯ ಅನೇಕ ಸದಸ್ಯರಿಗಿದ್ದರೆ ಅದಕ್ಕೆ ತಾವು ಮಾನ್ಯತೆ ಕೊಟ್ಟಿಲ್ಲ. ಅದಕ್ಕಾಗಿ ಧನ್ಯವಾದಗಳು. ತಮ್ಮನ್ನು ಕನ್‌ವಿನ್ಸ್ ಮಾಡಬೇಕಾದರೆ ನಮಗೂ ಅವಕಾಶ ಬೇಕು. ನಾವೂ ಕೂಡ ಈ ವಿಚಾರದಲ್ಲಿ ಅಭ್ಯಾಸ ಮಾಡಬೇಕು. ಅದೇರೀತಿ ಆ ಕಡೆಯವರೂ ಅಭ್ಯಾಸ ಮಾಡಬೇಕು. ಆದ್ದರಿಂದ ನಾಳೆ ತಮಗೆ ಮನವರಿಕೆಯಾದರೆ ರೂಲಿಂಗನ್ನು ಬದಲಾವಣೆ ಮಾಡಬಹುದೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೀರಿ You have open heart.

ಅಧ್ಯಕ್ಷರು.—ರಿವೈಸ್ ಮಾಡುವುದಾದರೆ ಮಾಡೋಣ.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾತ್ಕಾಲಿಕವಾಗಿ ತಮ್ಮ ವಿಚಾರವನ್ನು ಏನು ಹೇಳಿದ್ದೀರಿ ಆದರ ಬಗ್ಗೆ ನಾನು ಪ್ರಶ್ನೆ ಮಾಡುವುದಿಲ್ಲ.

ಅಧ್ಯಕ್ಷರು.—ಇಬ್ಬರನ್ನೂ ಕರೆಸಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗ ೫ ಗಂಟೆ ಆಯಿತು. ಅಡ್ಜರ್ನ್ ಮಾಡೋಣ. ನಾಳೆ ವಿಚಾರ ಮಾಡಬಹುದು ಎಂಬುದು ನನ್ನ ಸೂಚನೆ.

ಅಧ್ಯಕ್ಷರು.—ಬಂಗಾರಪ್ಪನವರೆ, ತಾವು ಪ್ರಾರಂಭ ಮಾಡಿ.

ಶ್ರೀ ಪಟಮಕ್ಕಿ ರತ್ನಾಕರ್.—ಅಧ್ಯಕ್ಷರೇ,......

ಅಧ್ಯಕ್ಷರು.—ದಯವಿಟ್ಟು ತಾವು ಕುಳಿತುಕೊಳ್ಳಿ.

ಅಧ್ಯಕ್ಷರು.—ಸಭಾ ನಾಯಕರು ಕೂಡಾ ಹೇಳಿದ್ದಾರೆ. ಸಲಹೆ ಕೊಟ್ಟರೆ ವೆಲ್‌ಕಮ್ ಮಾಡುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಸಭಾಧ್ಯಕ್ಷರೇ, ಈ ವಿಷಯ ಬಿಟ್ಟು ಚರ್ಚೆ ಮಾಡುವುದಕ್ಕೆ ಸಾಧ್ಯವಿಲ್ಲದೇ ಇರತಕ್ಕ ವಿಚಾರ. ತಮ್ಮ ರೂಲಿಂಗ್‌ಗೆ ವಿರೋಧ ಹೋಗಬೇಕೆನ್ನುವ ಪ್ರಶ್ನೆ ಅಲ್ಲ.

SRI K. H. PATIL.—Sir, I am on a point of order. It is 5 O Clock. The Chair has not extended the time. Therefore, whatever anybody says now here cannot go to the Proceedings according to our rules. Either you must have extended the time now......

ಅಧ್ಯಕ್ಷರು.—ಸಭಾ ನಾಯಕರು ಮತ್ತು ವಿರೋಧ ಪಕ್ಷದ ನಾಯಕರು ಇವರುಗಳ ಅಭಿಪ್ರಾಯವನ್ನು ತೆಗೆದುಕೊಂಡು ಸಭೆಯನ್ನು ಮುಂದುವರಿಸಬಹುದು. ಅವರುಗಳ ಅಭಿಪ್ರಾಯವನ್ನು ಕೇಳಿ......

(ಗೊಂದಲ)

ಅಧ್ಯಕ್ಷರು.—ನೀವು ಹೀಗೆ ಮಾತನಾಡುವುದಾದರೆ ಒಂದು ಸಭೆಗೆ ನಾಯಕರು ಮತ್ತು ವಿರೋಧಪಕ್ಷದ ನಾಯಕರು ಏಕೆ ಇರಬೇಕು? ದಯವಿಟ್ಟು ನೀವು ಕೂತುಕೊಳ್ಳಿ. ಸಭೆಯನ್ನು ಮುಂದುವರಿಸುವ ಬಗ್ಗೆ ವಿರೋಧ ಪಕ್ಷದ ನಾಯಕರು ಹಾಗೂ ಸಭಾ ನಾಯಕರ ಅಭಿಪ್ರಾಯವನ್ನು ತೆಗೆದುಕೊಂಡು ಮುಂದೆ ಹೋಗುತ್ತೇನೆ. ಬಿ. ಎ. ಸಿ. ಯಲ್ಲಿ ತೀರ್ಮಾನ ಆದ ಪ್ರಕಾರ ಯಾವ ಯಾವ ದಿವಸ ಏನೇನು ಕೆಲಸಗಳನ್ನು ಮುಗಿಸಬೇಕೆಂದು ಮಾಡಿದ್ದೇವೆ, ಆ ಪ್ರಕಾರ ಸಭೆ ನಡೆಸ ಬೇಕಾಗುತ್ತದೆ. ಇವತ್ತು ೫ ಗಂಟೆಗೇ ಮುಗಿಸಿ ಎನ್ನುತ್ತಿದ್ದೀರಿ. ನಿನ್ನೆ ನಾವು ಎಂಟೂವರೆ ಗಂಟೆ ವರೆಗೆ ಕೂತಿದ್ದೆವು. ಸ್ವಲ್ಪ ದಯವಿಟ್ಟು ಕೂತು ನಾನು ಕೇಳುವುದನ್ನು ಕೇಳಿ.

ಶ್ರೀ ಕೆ. ಬಿ. ಶಾಣಪ್ಪ.—ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು.—ತಾವು ಸ್ವಲ್ಪ ಕೂಡ್ರಿ ಸ್ವಾಮಿ.

ಶ್ರೀ ಕೆ. ಬಿ. ಶಾಣಪ್ಪ.—ಇದು ಬಹಳ ಗಂಭೀರವಾದ ವಿಷಯ. ಇದನ್ನು ರೆವ್ಯೂ ಮಾಡೋಣ ಎಂದು ಹೇಳಿದಿರಿ. ನಾವು ನಾಳೆ ಚರ್ಚೆ ಮಾಡೋಣ.

ಅಧ್ಯಕ್ಷರು.—ತಾವು ಕೂತುಕೊಳ್ಳಿ.

ಶ್ರೀ ರಾಮಕೃಷ್ಣ ಹೆಗ್ಡೆ.—ಸಭಾ ನಾಯಕರು ಕಾರ್ಯಕಲಾಪವನ್ನು ಇನ್ನೂ ೧ ಗಂಟೆ ಅಥವಾ ೨ ಗಂಟೆ ಮುಂದುವರಿಸಬೇಕೆಂದರೆ ನಾವು ಸಿದ್ಧರಿದ್ದೇವೆ. ಆದರೆ ನಾನು ಹೇಳುವುದು ಇಷ್ಟೆ ಕಾರ್ಯಕ್ರಮದ ಪ್ರಕಾರ ಕೊನೆಗೆ ಈ ಸದನ ಮುಗಿಯಬೇಕು.

ಅಧ್ಯಕ್ಷರು.—ನಾಳೆ ಈ ಬೇಡಿಕೆ ಬಗ್ಗೆ ಮುಗಿಸಿಕೊಡುತ್ತೀರಾ?

ಶ್ರೀ ಎಸ್. ಬಂಗಾರಪ್ಪ.—ನೋಡೋಣ.

ಶ್ರೀ ರಾಮಕೃಷ್ಣ ಹೆಗ್ಡೆ.—ಬಹಳ ಡಿಮ್ಯಾಂಡ್‌ಗಳು ಇವೆ ಎಂದರೆ ಆಗುವುದಿಲ್ಲ. ಬಿ.ಎ.ಸಿ. ಯಲ್ಲಿ ಎಲ್ಲಾ ಪಕ್ಷಗಳ ಸದಸ್ಯರೂ ಇದ್ದಾರೆ. ಅದರಲ್ಲಿ ಒಂದು ತೀರ್ಮಾನ ಆಗಿದೆ. ಕನಿಷ್ಟ ಪಕ್ಷ ಕೊನೇ ಹಂತದಲ್ಲಿ ಅಷ್ಟು ಕೆಲಸಗಳನ್ನು ಮಾಡಿ ಮುಗಿಸಬೇಕಾಗುತ್ತದೆ. ಅದಕ್ಕೆ ಒಪ್ಪಿದರೆ ಈಗ ಅಡ್ಜರ್ನ್ ಮಾಡೋಣ ಅಥವಾ ಇನ್ನೂ ಒಂದು ಗಂಟೆ ಬೇಕಾದರೆ ಕೊಡೋಣ. ಯಾವ ತೀರ್ಮಾನ ಕೊಟ್ಟರೂ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ಇನ್ನೂ ಕೂತರೆ ಬಾಟ್ಲ ಒಳಗಿಂದು ಹೊರಕ್ಕೆ ಬರುವುದಕ್ಕೆ ಅವಕಾಶವಾಗುತ್ತದೆ.

ಅಧ್ಯಕ್ಷರು.—ನನಗೂ ಕೂಡಾ ಸಾಕಷ್ಟು ತ್ರಾಸವಾಗಿದೆ. ಆದರೂ ನಾನು ಕೂತು ಈ ಕೆಲಸ ಮಾಡಬೇಕಾಗುತ್ತದೆ. ಆದುದರಿಂದ ಐದೂವರೆಯವರೆಗೂ ಕೂರೋಣ.

(ಗೊಂದಲ)

ಅಧ್ಯಕ್ಷರು.—ಈಗ ಸಭೆಯು ಎದ್ದು ಮತ್ತೆ ನಾಳೆ ಬೆಳಗ್ಗೆ ೧೧ ಗಂಟೆಗೆ ಸಮಾವೇಶ ಗೊಳ್ಳುವುದು.

(ಸಭೆಯು ಸಂಜೆ ೫.೦೬ ನಿಮಿಷಕ್ಕೆ ಮೇಲೆದ್ದು ದಿನಾಂಕ ೮ನೇ ಆಗಸ್ಟ್ ೧೯೮೫ರಂದು ಬೆಳಿಗ್ಗೆ ೧೧ ಗಂಟೆಗೆ ಸೇರಲು ನಿಶ್ಚಯಿಸಿತು).